بِسۡمِ اللہِ الرَّحۡمٰنِ الرَّحِیۡمِ نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ وَعَلٰی عَبۡدِہِ الۡمَسِیۡحِ الۡمَوۡعُوۡدِ

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ವರ್ಷ: 01

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 38

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

01 ಅಕ್ಟೋಬರ್ 2020, 01 ಅಖಾ 1399 ಹಿಜರಿ ಶಮ್‌ಸಿ,
13 ಸಫರ್ 1442 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

**اَللّٰھُمَّ اَیِّدۡ اِمَامَنَا بِرُوۡحِ الۡقُدُسِ وَبَارِکۡ لَنَا فِیۡ عُمُرِہٖ وَاَمۡرِہٖ۔**

## ಅಲ್ಲಾಹನ ಉಪದೇಶ

وَمَنۡ یُّطِعِ اللّٰہَ وَالرَّسُوۡلَ فَاُولٰٓئِکَ مَعَ الَّذِیۡنَ اَنۡعَمَ اللّٰہُ عَلَیۡہِمۡ مِّنَ النَّبِیّٖنَ وَالصِّدِّیۡقِیۡنَ وَالشُّہَدَآءِ وَالصّٰلِحِیۡنَ ۚ

*(ಅನ್ನಿಸಾಅ್:70)*

ಅಂದರೆ: ಯಾರಾದರೂ ಅಲ್ಲಾಹನಿಗೆ ವಿಧೇಯರಾಗಿ ಈ ಸಂದೇಶವಾಹಕರನ್ನು ಅನುಸರಿಸಿದರೆ, ಅವರು ಅಲ್ಲಾಹನು ಅನುಗ್ರಹಿಸಿದ ಪ್ರವಾದಿಗಳು, ಸತ್ಯಸಂಧರು, ಹುತಾತ್ಮರು ಮತ್ತು ಸಜ್ಜನರಲ್ಲಿ ಸೇರುವರು.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ರಸೂಲುಲ್ಲಾಹ್(ಸ) ರವರ ನಮಾಝ್

* ಹಝ್‌ರತ್ ಜಾಬಿರ್ ಬಿನ್ ಸಮ್ರಾ(ರ) ವರದಿ ಮಾಡುತ್ತಾರೆ: ಹಝ್‌ರತ್ ಸಅದ್(ರ) ಹೇಳುತ್ತಿದ್ದರು ನಾನು ಅವರಿಗೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ರವರ ರೀತಿಯಲ್ಲಿಯೇ ಝುಹರ್ ಅಸರ್ ನಮಾಝ್ ನಿರ್ವಹಿಸಿ ಕೊಡುತ್ತಿದ್ದೆ. ನಾನು ಅವರ ನಮಾಝಿನಿಂದ ಯಾವ ರೀತಿಯಲ್ಲೂ ವ್ಯತ್ಯಾಸ ಮಾಡುತ್ತಿರಲಿಲ್ಲ. ಮೊದಲ ಎರಡು ರಕಅತ್‌ಗಳನ್ನು ದೀರ್ಘವಾಗಿ ಮತ್ತು ನಂತರದ ಎರಡು ರಕಅತ್ ಲಘುವಾಗಿ ಮಾಡುತ್ತಿದ್ದೆ. ಆಗ ಹಝ್‌ರತ್ ಉಮರ್(ರ) ಹೇಳಿದರು: ನನಗೆ ನಿಮ್ಮ ಕುರಿತು ಅದೇ ಭಾವನೆ ಇತ್ತು.

ಟಿಪ್ಪಣಿ: ಸಅದ್(ರ) ಅಂದರೆ ಹಝ್‌ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಶ್ರೇಷ್ಠ ಬದರಿ ಸಹಾಬಿ ಹಝ್‌ರತ್ ಸಅದ್ ಬಿನ್ ಅಬಿ ವಖ್ಖಾಸ್(ರ) ಆಗಿರುತ್ತಾರೆ: ಅವರು ಕೂಫ ನಗರದ ಗವರ್‌ನರ್ ಆಗಿದ್ದರು. ಅವರ ಮೇಲೆ ಈ ಆರೋಪವಿತು: ಅವರು ಎರಡು ರಕಅತ್ ದೀರ್ಘ ಓದಿಸುತ್ತಿದ್ದರು ಮತ್ತು ಉಳಿದದ್ದು ಲಘುವಾಗಿ. ಅವರು ಹೇಳಿದರು: ನಾನು ಅವರಿಗೆ ರಸೂಲುಲ್ಲಾಹ್(ಸ) ರವರ ನಮಾಝಿನ ರೀತಿಯಲ್ಲಿ ನಮಾಝ್ ನಿರ್ವಹಿಸುತ್ತಿದ್ದೇನೆ. (ಸಹೀಹ್ ಬುಖಾರಿ, ಸಂಪುಟ–2, ಕಿತಾಬುಲ್ ಅಝಾನ್)

* ಹಝ್‌ರತ್ ಅಬ್ದುಲ್ಲಾ ಬಿನ್ ಅಬೀ ಖತಾರ(ರ) ತಮ್ಮ ತಂದೆಯಿಂದ ವರದಿ ಮಾಡುತ್ತಾರೆ ನಬಿ(ಸ) ಝುಹರ್ ನಮಾಝಿನ ಮೊದಲು ಎರಡು ರಕಅತ್‌ಗಳಲ್ಲಿ ಸೂರಃ ಫಾತಿಹ ಮತ್ತು ಎರಡೂ ಸೂರಃಗಳು ಪಠಿಸುತ್ತಿದ್ದರು. ಮೊದಲು ರಕಅತ್‌ನಲ್ಲಿ (ಖಿರತ್) ದೀರ್ಘವಾಗಿಸುತ್ತಿದ್ದರು ಎರಡನೇಯದಲ್ಲಿ ಲಘು ಮತ್ತು ಆಗೊಮ್ಮೆ ಈಗೊಮ್ಮೆ ಯಾವುದೇ ವಚನ ನಮ್ಮನ್ನು ಆಲಿಸುವಂತೆ ಮಾಡುತ್ತಿದ್ದರು. ಅಸರ್‌ನಲ್ಲಿಯೂ ಸೂರಃ ಫಾತಿಹಾ ಮತ್ತು ಎರಡು ಸೂರಃಗಳು ಪಠಿಸುತ್ತಿದ್ದರು (ಮೊದಲ ರಕಅತ್‌ನಲ್ಲಿ ಖಿರಅತ್ ದೀರ್ಘವಾಗಿ ಮಾಡುತ್ತಿದ್ದರು) ಅಂತೆಯೇ ಫಜರ್ ನಮಾಝಿನ ಮೊದಲ ರಕತ್ತಿನಲ್ಲಿಯೂ (ಖಿರತ್) ದೀರ್ಘವಾಗಿ ಮಾಡುತ್ತಿದ್ದರು ಮತ್ತು ಎರಡನೆಯದಲ್ಲಿ ಲಘು. (ಸಹೀ ಬುಖಾರಿ, ಸಂಪುಟ–2, ಕಿತಾಬುಲ್ ಅಝಾನ್, ಮುದ್ರಣ ಖಾದಿಯಾನ್ 2006)

**ನಬಿ(ಸ) ರವರ ನಡತೆಯ ಶ್ರೇಷ್ಠತೆ ಎಲ್ಲಿಯವರೆಗೆ ಇದೆ ಎಂದರೆ ಓರ್ವ ವೃದ್ಧೆಯು ಅವರ ಕೈ ಹಿಡಿದು ಕೊಂಡರೆ ನಿಂತು ಬಿಡುತ್ತಿದ್ದರು ಮತ್ತು ಆಕೆಯ ಮಾತುಗಳನ್ನು ಗಮನವಿರಿಸಿ ಕೇಳುತ್ತಿದ್ದರು. ಆಕೆಯೇ ಸ್ವತಃ ಕೈ ಬಿಡುವವರೆಗೆ ಕೈ ಬಿಡುತ್ತಿರಲಿಲ್ಲ.**

## ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಹಝ್‌ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಪ್ರಕಾಶಮಯ ಅನುಗ್ರಹಗಳು

ಹಝ್‌ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಕೆಲ ಸಂದರ್ಭಗಳಲ್ಲಿ ಎಷ್ಟರ ಮಟ್ಟಿಗೆ ವಿನಮ್ರತೆ ನಯವಿನಯತೆಯು ಉನ್ನತಮಟ್ಟದಲ್ಲಿ ಕಂಡುಬರುತ್ತದೆಯೆಂದರೆ ರೂಹುಲ್ ಖುದುಸ್ (ದೇವದೂತನಿಂದ) ಅವರಿಂದ ಪುಷ್ಪ ಪ್ರಕಾಶ ಹಾಗೂ ಸಹಾಯ ಪಡೆಯುತ್ತಿದ್ದರು. ನಮ್ಮ ನಬಿ ಕರೀಂ ಸಲ್ಲಲ್ಲಾಹು ಅಲೈಹಿವಸಲ್ಲಮರ ನಡತೆ ಸ್ವಯಂ ಕ್ರೀಯೆಯಿಂದ ತೋರಿಸಿಕೊಟ್ಟಂತಹ ಮಾದರಿ ಎಷ್ಟೊಂದು ಮಹೋನ್ನತವಾಗಿದೆ ಶಾಶ್ವತವಾದದ್ದಾಗಿವೆ ಎಂದರೆ ಇಲ್ಲಿಯವರೆಗೂ ಅದರ ಅನುಗ್ರಹಗಳು ಪ್ರಕಾಶಗಳು ಗೋಚರವಾಗುತ್ತದೆ. ಅದೇ ಕಾರಣದಿಂದ ಈ ಕಾಲದಲ್ಲಿಯೂ ಏನೆಲ್ಲ ಅಲ್ಲಾಹನ ಅನುಗ್ರಹಗಳು ಮತ್ತು ಐದಾರ್ಯಗಳು ಅವತರಿಸುತ್ತದೆಯೋ ಅವೆಲ್ಲ ನಬೀ ಕರೀಂ ಸಲ್ಲಲ್ಲಾಹು ಅಲೈಹಿವಸಲ್ಲಮರ ವಿಧೇಯತೆ ಮತ್ತು ಅನುಸರಣೆಯಿಂದಲೇ ದೊರೆಯಬಹುದಾಗಿದೆ. ನಾನು ಸತ್ಯವಾಗಿ ಹೇಳುತ್ತೇನೆ ಮತ್ತು ತನ್ನ ಅನುಭವದಿಂದ ಹೇಳುತ್ತೇನೆ ನಿಜವಾದ ಸತ್ಕಾರ್ಯ ಮಾಡಬಯಸುವ ಅಲ್ಲಾಹನ ಸಂತೃಪ್ತಿ ಬಯಸುವ ಯಾವ ವ್ಯಕ್ತಿಯೂ ನಿಲ್ಲಲಾರನು. ಆ ಅನುಗ್ರಹಗಳು ಕಾರುಣ್ಯಗಳು ಮತ್ತು ಜ್ಞಾನ ಸಾಕ್ಷಿಗಳು ಹಾಗೂ ಸತ್ಯಸಪ್ನಗಳು ಇವೆಲ್ಲ ಆತ್ಮಶುದ್ಧಿಗೋಸ್ಕರ ಅನಿವಾರ್ಯವಾಗಿ ದೊರೆಯಬಹುದಾದರೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಅನುಸರಣೆಯಲ್ಲಿ ಮೋಹಿತನಾಗಬೇಕಾಗುವುದು, ಅದರ ಪುರಾವೆ ಸ್ವಯಂ ಅಲ್ಲಾಹನ ಮಾತಿನಿಂದ ಸ್ಪಷ್ಟವಾಗುತ್ತದೆ. ಅಲ್ಲಾಹನು ಹೇಳಿದನು: **"ಖುಲ್ ಇನ್‌ಕುನ್‌ತುಮ್ ತುಹಿಬ್ಬೂನಲ್ಲಾಹ ಫತ್ತಬಿಊನಿ ಯುಹ್‌ಬಿಬ್ ಕುಮುಲ್ಲಾಹ್"** (ಆಲಿ ಇಮ್ರಾನ್: 32) ಅಲ್ಲಾಹನ ಈ ದಾವೆ ಸಾಕ್ಷಾತ್ ರೂಪ ಮತ್ತು ಸಾಕ್ಷಿ ನಾನಾಗಿದ್ದೇನೆ. ಈ ಸಾಕ್ಷ್ಯಗಳೊಂದಿಗೆ ಅಲ್ಲಾಹನು ತನ್ನ ಪ್ರೀತಿಸುವವರನ್ನು, ಸಜ್ಜನರನ್ನು ನಿಗದಿಪಡಿಸಿರುವನೋ ನನ್ನನ್ನು ಪರೀಕ್ಷಿಸಿರಿ, ಅಂತೂ ನಬಿ ಕರೀಂ ಸಲ್ಲಲ್ಲಾಹು ಅಲೈಹಿವಸಲ್ಲಮರ ನಡತೆಯ ಶ್ರೇಷ್ಠತೆ ಎಲ್ಲಿಯವರೆಗೆ ಇದೆ ಎಂದರೆ ಓರ್ವ ವೃದ್ಧೆಯು ಅವರ ಕೈ ಹಿಡಿದರೆ ನಿಂತು ಬಿಡುತ್ತಿದ್ದರು ಮತ್ತು ಆಕೆಯ ಮಾತುಗಳನ್ನು ಗಮನವಿರಿಸಿ ಆಲಿಸುತ್ತಿದ್ದರು. ಆಕೆಯು ಸ್ವತಃ ಕೈಬಿಡುವವರೆಗೆ ಕೈ ಬಿಡುತ್ತಿರಲಿಲ್ಲ.

**(ಮಲ್‌ಫೂಝಾತ್, ಸಂಪುಟ–1, ಪುಟ–188–189, ಮುದ್ರಣ ಖಾದಿಯಾನ್ 2018)**

## ಯಾರೊಬ್ಬರೂ ಸತ್ಕರ್ಮಗಳಲ್ಲಿ ನಿಮಗಿಂತ ಮುಂದೆ ಹೋಗದಂತೆ ಸಂಕಲ್ಪ ಹೊಂದಿರಬೇಕಾಗಿದೆ.

**ವಲಿಕುಲ್ಲಿ ವಿಜ್‌ಹತುನ್ ಹುವ ಮುಅಲ್ಲಿಹಾ ಫಸ್ತಬಿಖುಲ್ ಖೈರಾತ್** (ಅಲ್‌ಬಖರ: 149) ಈ ವಚನದ ವ್ಯಾಖ್ಯಾನದಲ್ಲಿ ಹಝ್‌ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: "ಲೋಕದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಒಂದಲ್ಲ ಒಂದು ಸಂಕಲ್ಪ ಹೊಂದಿರುತ್ತಾನೆ. ಒಬ್ಬನಿಗೆ ಊಟದ ವಿಷಯದಲ್ಲಿ ಆಸಕ್ತಿ ಇದ್ದರೆ ಇನ್ನೊಬ್ಬ ವ್ಯಾಪಾರದಲ್ಲಿ ಆಸಕ್ತಿ ಹೊಂದಿರುತ್ತಾನೆ, ಒಬ್ಬನಿಗೆ ಒಳ್ಳೆಯ ವಸ್ತುಗಳನ್ನು ಧರಿಸುವ ಹವ್ಯಾಸವಿರುತ್ತದೆ ಇನ್ನೊಬ್ಬನಿಗಾಗಿ ಚಾಡಿ ಹೇಳುವ ಹವ್ಯಾಸವಿರುತ್ತದೆ, ಒಬ್ಬನಿಗೆ ಜಗಳಾಡುವ ಹವ್ಯಾಸವಿರುತ್ತದೆ ಹೀಗೆ ತನ್ನ ಉದ್ದೇಶ ಸಾಧಿಸಲು ಒಂದಲ್ಲೊಂದು ಹವ್ಯಾಸ ಸಂಕಲ್ಪ ಹೊಂದಿಯೇ ಇರುತ್ತಾನೆ. ತೀರ ಬಡವನಾಗಿದ್ದರೂ, ಅಜ್ಞಾನಿಯಾಗಿದ್ದರೂ ತನ್ನ ಮುಂದೆ ಒಂದು ಗುರಿ ಇಟ್ಟುಕೊಂಡಿರುತ್ತಾನೆ. ಒಬ್ಬರ ಉದ್ದೇಶ ಗುಂಡಾಗಿರಿ ನಡೆಸುವುದಾಗಿರುತ್ತದೆ, ಒಬ್ಬನು ರಾಜಕಾರಣಿಯಾಗಲು ಬಯಸುತ್ತಾನೆ. ಹೀಗೆ ಮನುಷ್ಯನ ಮುಂದೆ ಒಂದಿಲ್ಲೊಂದು ಗುರಿ ಇರುವುದಾದರೆ ನೀವು ಸತ್ಕರ್ಮಗಳಲ್ಲಿ ಮುಂದುವರಿಯುವ ಗುರಿ ಏಕೆ ಹೊಂದಿರಬಾರದು. ನೀವು ಯಾರೊಬ್ಬರೂ ಸತ್ಕರ್ಮಗಳಲ್ಲಿ ನಿಮಗಿಂತ ಮುಂದೆ ಹೋಗದಂತೆ ಸಂಕಲ್ಪ ಹೊಂದಿರಬೇಕಾಗಿದೆ. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಕಾಲದಲ್ಲಿ ಒಂದು ಸಂದರ್ಭದಲ್ಲಿ ಹಝ್‌ರತ್ ಅಬೂಬಕ್ಕರ್ ಸಿದ್ದೀಖ್(ರ) ಮತ್ತು ಹಝ್‌ರತ್ ಉಮರ್(ರ) ರವರ ಮಧ್ಯೆ ಜಗಳ ಉಂಟಾಗುತ್ತದೆ. ಅವರು ಅಲ್ಲಿಂದ

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*

لَآ اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ۞ شَرُّ السُّمُوْمِ عَدَاوَۃُ الصُّلَحَاءِ

**ಖುರ್‌ಆನಿನ ಶಿಕ್ಷಣಗಳ ಮೇಲೆ ತಮ್ಮ ಆಕ್ಷೇಪಗಳನ್ನು ವ್ಯಕ್ತಪಡಿಸಿ ತೃಪ್ತಿ ಪಡಿಸಿಕೊಳ್ಳುವ ಅವಕಾಶ. ತೃಪ್ತಿದಾಯಕ ಉತ್ತರ ಕೊಡಲಾಗದಿದ್ದರೆ ಪ್ರತಿ ಆಕ್ಷೇಪಕ್ಕೆ 50 ರೂಪಾಯಿಗಳ ಬಹುಮಾನ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ತಮ್ಮ ಗ್ರಂಥ 'ಸುರ್ಮ ಚಸ್ಮ ಆರ್ಯ' ಪುಟ–311ರ ಮೇಲೆ ಕೆಳಗೆ ನಮೂದಿತ ಜಾಹೀರಾತು "ಇಶ್ತಿಹಾರ್ ಮುಫೀದುಲ್ ಅಖ್ಬಾರ್" ಶೀರ್ಷಿಕೆಯಿಂದ ಪ್ರಕಟಣೆ ನೀಡಿದರು. ಈ ಅಭೂತಪೂರ್ವ ಇಶ್ತಿಹಾರ್ (ಜಾಹಿರಾತು) ಸಹ ಒಂದು ಬಹುಮಾನದ ಪಂಥಾಹ್ವಾನ ಒಳಗೊಂಡಿದೆ ಅದರಲ್ಲಿ ವಿರೋಧಿಗಳಿಗೆ, ಆಕ್ಷೇಪ ಎತ್ತುವವರಿಗೆ, ಸಂಶಯವುಳ್ಳವರಿಗೆ ಇಸ್ಲಾಮಿ ಶಿಕ್ಷಣದ ಬಗ್ಗೆ ತೃಪ್ತಿ ಹೊಂದಲು ಅವಕಾಶ ನೀಡಲಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು:

ಏಕೆಂದರೆ ಇತ್ತೀಚಿಗೆ ಕೆಲವು ಹಿಂದುಗಳ ಮತ್ತು ಆರ್ಯರ ಅಭ್ಯಾಸವಾಗತೊಡಗಿದೆ ಅವರು ಇಸ್ಲಾಮಿನ ವಿರುದ್ಧವಾಗಿ ಕ್ರೈಸ್ತರು ಬರೆದ ಗ್ರಂಥಗಳ ಮೇಲೆ ವಿಶ್ವಾಸವಿಟ್ಟು ಅದನ್ನು ಸರಿ ಎಂದು ತಿಳಿದುಕೊಂಡಿರುತ್ತಾರೆ. ಆದುದರಿಂದ ಈ ಸಾರ್ವಜನಿಕ ಜಾಹಿರಾತಿನ ಮೂಲಕ ಸೂಚನೆ ನೀಡುವುದು ಉಚಿತ ಎಂದು ಭಾವಿಸಿದ್ದೇನೆ. ಮೊದಲನೆಯದಾಗಿ ಕ್ರೈಸ್ತರ ಗ್ರಂಥಗಳ ಮೇಲೆ ಭರವಸೆಯನ್ನು ಇಡುವುದು ಮತ್ತು ನೇರವಾಗಿ ಯಾವ ಇಸ್ಲಾಮಿನ ಪಾಂಡಿತ್ಯ ವಹಿಸಿದವರಿಂದ ಅದರ ರಹಸ್ಯ ತಿಳಿಯದೆ ಮತ್ತು ಅನಾವಶ್ಯಕ ಸಂಶಯಗಳಿಗೆ ಈಡಾಗಿ ಇಸ್ಲಾಮಿನ ಸಂಶೋದಕರಿಂದ ಅದರ ಪರಿಹಾರ ಹುಡುಕದೆ ದ್ವೇಷಭರಿತ ವಿರೋಧಿಗಳನ್ನು ನ್ಯಾಯಾಧೀಶರನ್ನಾಗಿ ತಿಳಿಯುವುದು ಅಪ್ಪಟ ಮೂರ್ಖತನವಾಗಿದೆ. ಸತ್ಯ ಶೋಧಕರು ಅದರಿಂದ ದೂರವಿರಬೇಕಾಗಿದೆ. ವಿವೇಕವಂತರು ಚನ್ನಾಗಿ ಬಲ್ಲವರಾಗಿದ್ದಾರೆ ಈ ಪಾದರಿ ಸಾಹೇಬರುಗಳು ಪಂಜಾಬ್ ಮತ್ತು ಭಾರತದಲ್ಲಿ ಬಂದು ತಮ್ಮ ಧರ್ಮದ ಉನ್ನತಿಗಾಗಿ ಹಗಲು ರಾತ್ರಿ ಯೋಜನೆಗಳನ್ನು ಹಾಕುತ್ತಿರುವುದು. ಇದು ಅವರ ವಿಶ್ವಾಸ ಉತ್ಸಾಹ ಕಾರಣವಲ್ಲ, ಬದಲು ಹಲವು ರೀತಿಯ ಸ್ವಾರ್ಥ ಇರಿಸಿಕೊಂಡು ಇಂತಹ ಕಾರ್ಯಗಳನ್ನು ಕೈಗೊಳ್ಳುತ್ತಾರೆ. ಈ ಕಾರ್ಯಕ್ಕಾಗಿ ಧಾರ್ಮಿಕ ಸಂಸ್ಥೆಗಳಿಂದ ಈ ಜನರು ಸಾವಿರಾರು ರೂಪಾಯಿಗಳ ಸಂಬಳವನ್ನು ಪಡೆಯುತ್ತಾರೆ. ಮಧ್ಯದಲ್ಲಿ ಕೆಲಸದಿಂದ ತೆಗೆದುಬಿಟ್ಟರೆ ನೋಡಬಹುದು ಇವರ ಉತ್ಸಾಹ ಅಭಿಮಾನ ಎಲ್ಲಿದೆ ಎಂದು. ಅಲ್ಲದೆ ಅವರಲ್ಲಿ ವೈಯುಕ್ತಿಕ ಜ್ಞಾನ ಅರ್ಹತೆ ಮತ್ತು ಬುದ್ಧಿವೈಶಲ್ಯ ಕಡಿಮೆಯಾಗಿರುತ್ತದೆ. ಯೂರೋಪ್ ದೇಶಗಳಲ್ಲಿ ನಿಜವಾಗಿ ವಿವೇಕಯುಳ್ಳವರು. ಫಿಲಾಸಫರ್ ಮತ್ತು ದೂರದೃಷ್ಠಿವುಳ್ಳವರು ಪಾದರಿ ಎಂದು ಹೇಳಿಕೊಳ್ಳಲು ನಾಚುತ್ತಾರೆ. ಅವರಿಗೆ ಅವರ ಅನರ್ಥ ಮಾತುಗಳ ಮೇಲೆ ಭರವಸೆಯೂ ಇಲ್ಲ. ಬದಲು ಯೂರೋಪಿನ ಬುದ್ಧಿಶಾಲಿಗಳ ದೃಷ್ಠಿಯಲ್ಲಿ ಪಾದರಿ ಎಂಬ ಪದವು ಎಂತಹ ಹಗುರ ಮತ್ತು ಔದಾರ್ಯರಹಿತ ತಿಳಿದುಕೊಳ್ಳುತ್ತಾರೆ. ಈ ಪದ ಹೇಳುತ್ತಲೇ ಅವರ ಮನಸ್ಸಿನಲ್ಲಿ ಮೂಡುವ ಭಾವನೆ ಎಂದರೆ ಈ ವ್ಯಕ್ತಿ ಉನ್ನತ ದರ್ಜೆಯ ಶಿಕ್ಷಣದಿಂದ ಮತ್ತು ಸಾಮರ್ಥ್ಯದಿಂದ ಮತ್ತು ಸೂಕ್ಷ್ಮಭಾವನೆಗಳಿಂದ ವಂಚಿತನಾದವ ಎಂದು. ಎಷ್ಟೆಲ್ಲ ಪಾದರಿ ಸಾಹೇಬರುಗಳು ಇಸ್ಲಾಮ್ ಧರ್ಮದ ಮೇಲೆ ಭಿನ್ನ ವಿಭಿನ್ನ ರೀತಿಯ ಆರೋಪಗಳನ್ನು ಮಾಡುತ್ತಾರೆ ಮತ್ತು ಪದೇ ಪದೇ ಎಡವಿ ಬಿದ್ದು ತಮ್ಮ ನಿಲುವುಗಳನ್ನು ಬದಲಿಸಿಕೊಂಡಿದ್ದಾರೆ ಮತ್ತು ಹಲವು ರಿತಿಯಲ್ಲಿ ನಾಚಿಕೆ ವಹಿಸಿ ಮತ್ತೆ ತಮ್ಮ ಮಾತುಗಳಿಗೆ ಅಂಟಿಕೊಂಡಿದ್ದಾರೆ. ಇಸ್ಲಾಮಿನ ಪಂಡಿತರ ಮತ್ತು ಅವರ ನಡುವೆ ನಡೆದ ಚರ್ಚೆಯ ಒಳಗೊಂಡ ಗ್ರಂಥಗಳ ಮೇಲೆ ಒಂದು ದೃಷ್ಠಿ ಹಾಯಿಸಿದರೂ ಒಬ್ಬ ಜ್ಞಾನಿಯಾದ ವ್ಯಕ್ತಿಯು ಚನ್ನಾಗಿ ಬಲ್ಲವನಾಗಿರುತ್ತಾನೆ.

ವಿಷಾದದ ಸಂಗತಿ ಎಂದರೆ ಆರ್ಯರು ತಮ್ಮ ಮನೆಯ ಬುದ್ಧಿಗೆ ತೀಲಾಂಜಲಿ ನೀಡಿ ಅವರ ಎಲ್ಲ ಸತ್ಯದಿಂದ ದೂರವಾದ ಚಟುವಟಿಕೆಗಳನ್ನು ನಿಜ ಅರ್ಥದಲ್ಲಿ ಸರಿ ಎಂದು ಭಾವಿಸಿಕೊಂಡಿದ್ದಾರೆ. ಕೆಲ ಆರ್ಯರು ಎಂತಹವರು ಇದ್ದಾರೆ ಅವರ ಪವಿತ್ರ ಖುರ್‌ಆನಿನ ಎಲ್ಲಿಂದಲೋ ಅರ್ದಂಬರ್ಧ ನೋಡಿಕೊಂಡು ಅಥವಾ ಅಜ್ಞಾನಿಯೊಬ್ಬನಿಂದ ಬುಡವಿಲ್ಲದ ಕಥೆಗಳನ್ನು ಕೇಳಿ ತಕ್ಷಣದಿಂದ ಆರೋಪ ಹಚ್ಚಲು ಮುಂದಾಗುತ್ತಾರೆ. ಸತ್ಯ ಹೇಳಬೇಕೆಂದರೆ ಯಾವ ವ್ಯಕ್ತಿಯು ಮನದಲ್ಲಿ ದೇವರ ಔದರ್ಯ ವಿರುವುದಿಲ್ಲವೋ ದ್ವೇಷದ ಕಾರಣದಿಂದ ಅವನ ಬುದ್ಧಿಯು ಈರ್ಷ್ಯೆಯ ವಿಷಯಗಳಿಂದ ಅತ್ಯಂತ ದುರ್ಬಲ ಮತ್ತು ಶವದ ರೀತಿಯಾಗಿರುತ್ತದೆ. ಯಾವ ಮಾತು ಅಪ್ಪಟ ಸತ್ಯವಿದೆಯೋ ಅವರಿಗೆ ಅನರ್ಥ ಹಾಗೂ ಕೆಟ್ಟದಾಗಿ ಕಾಣುತ್ತವೆ. ಅದೇ ಕಾರಣದಿಂದ ಈ ಜಾಹೀರಾತು ಪ್ರಕಟಪಡಿಸುಸುತ್ತಿದ್ದೇನೆ ಮತ್ತು ಸ್ಪಷ್ಟಪಡಿಸುತ್ತಿದ್ದೇನೆ ಎಷ್ಟೆಲ್ಲ ತಪ್ಪುಗಳು ಮತ್ತು ಶಿಕ್ಷಣಗಳು ಪವಿತ್ರ ಖುರ್‌ಆನಿನಲ್ಲಿವೆ ಅವೆಲ್ಲ ಜಾಣ್ಮೆಯಿಂದ, ಜ್ಞಾನದಿಂದ ಮತ್ತು ಸತ್ಯದಿಂದ ಕೂಡಿದ್ದಾಗಿವೆ. ಕಿಂಚಿತ್ತು ಮಾತು ಅದರಲ್ಲಿ ನ್ಯೂನ್ಯತೆ ಹುಡುಕುವ ಹಾಗಿಲ್ಲ. ಏಕೆಂದರೆ ಪ್ರತಿಯೊಂದು ದರ್ಮದ ತತ್ವಗಳ ಮತ್ತು ಶಿಕ್ಷಣಗಳ ನೂರಾರು ಪರಮಾರ್ಥಗಳು ಒಳಗೊಂಡಿರುತ್ತವೆ ಅವುಗಳೆಲ್ಲದರ ಭಾವರ್ಥಗಳನ್ನು ಚರ್ಚೆಯಲ್ಲಿ ತರುವುದು ಕಠಿಣವಾದ ಕಾರ್ಯವಾಗಿದೆ. ಆದುದರಿಂದ ನಾವು ಈ ಪೈಕಿ ಪವಿತ್ರ ಖುರ್‌ಆನಿನ ತತ್ವಗಳನ್ನು ನಿರಾಕರಿಸುವವರಿಗೆ ಒಂದು ಒಳ್ಳೆಯ ಸಲಹೆಯನ್ನು ನೀಡುತ್ತಿದ್ದೇವೆ. ನಿಮಗೆ ಪವಿತ್ರ ಖುರ್‌ಆನಿನ ತತ್ವಗಳ ಮೇಲೆ ಶಿಕ್ಷಣದ ಮೇಲೆ ಆಕ್ಷೇಪಗಳಿದ್ದರೆ ಮೊದಲು ಅವರು ಸರಿಯಾಗಿ ಯೋಚಿಸಿಕೊಂಡು ಎರಡು ಮೂರು ದೊಡ್ಡ ದೊಡ್ಡ ಆಕ್ಷೇಪಗಳು ಖುರ್‌ಆನಿನಿಂದ ಆರಿಸಿಕೊಂಡು– "ಅವರ ದೃಷ್ಠಿಯಲ್ಲಿ ಅದು ಎಲ್ಲ ಆಕ್ಷೇಪಗಳೊಂದಿಗೆ ಒಂದು ಪರ್ವತ ಹಾಗೂ ಅಣುವಿಗೆ ಸಂಬಂಧಿಸಿದಂತೆ ಆಗಿರಬೇಕು. ಅಂದರೆ ಆ ಆಕ್ಷೇಪಗಳು ಅವರ ದೃಷ್ಠಿಯಲ್ಲಿ ಅತ್ಯಂತ ಬಲಯುತ ಮತ್ತು ಉನ್ನತ ದರ್ಜೆಯದ್ದಾಗಿರಬೇಕು, ಅದರ ಮೇಲೆ ಟೀಕಾಪ್ರಹಾರ ಮಿತಿ ಮೀರಿದ ರೀತಿಯಲ್ಲಿ ಮನಗೊಂಡಿರುವಂತಿರಬೇಕು. ಇಂತಹ ಎರಡು ಮೂರು ಆರೋಪಗಳನ್ನು ಮಾದರಿ ರೂಪದಲ್ಲಿ ಪ್ರಸ್ತುತ ಪಡಿಸಿ ವಾಸ್ತವನ್ನು ಪರೀಕ್ಷಿಸಿಕೊಳ್ಳಲಿ. ಹೀಗೆ ಎಲ್ಲ ಆರೋಪಗಳ ಖುಲಾಸೆ ಸರಳ ರೂಪದಲ್ಲಿ ಬಗೆಹರಿಯುವುದು. ಏಕೆಂದರೆ ದೊಡ್ಡ ದೊಡ್ಡ ಆರೋಪಗಳು ತಮ್ಮ ಘನತೆ ಕಳೆದುಕೊಂಡರೆ ಸಣ್ಣ ಪುಟ್ಟ ಆರೊಪಗಳು ತಾನಾಗಿ ಕೊನೆಗೊಳ್ಳುವುದು. ನಾವು ಅವರಿಗೆ ತೃಪ್ತಿಕರ ಉತ್ತರ ನೀಡುವುದರಲ್ಲಿ ವಿಫಲಗೊಂಡರೆ, ಕನಿಷ್ಠ ಪಕ್ಷ ವಿರೋಧಿಗಳು ಪವಿತ್ರ ಖುರ್‌ಆನಿಗೆ ಎದುರಾಗಿ ಮಂಡಿಸಿದ ಆಕ್ಷೇಪಗಳು ತತ್ವಗಳು ಶಿಕ್ಷಣಗಳು ಅವರಿಗಿಂತ ದುರ್ಬಲವೆಂದು ಸಾಬೀತಾದರೆ, ನಾವು ಸೋತರೆ ವಿರೋಧಿ ಬಣಕ್ಕೆ 50 ರೂಪಾಯಿಗಳನ್ನು ದಂಡರೂಪದಲ್ಲಿ ನೀಡಲಾಗುವುದು. ಆದರೆ ವಿರೋಧಿ ಬಣ ಅಂತಿಮವಾಗಿ ಸುಳ್ಳುಗಾರರಾದರೆ ನಾವು ಮಂಡಿಸಿದ ತತ್ವ ಶಿಕ್ಷಣಗಳನ್ನು ಸಾಬೀತು ಮಾಡಿ ತೋರಿಸಲಿಲ್ಲವಾದರೆ, ನೆನಪಿಡಿರಿ ತಡಮಾಡದೆ ಮುಸಲ್ಮಾನನಾಗ ಬೇಕಾಗುವುದು. ಇಸ್ಲಾಮ್ ಸ್ವೀಕರಿಸಲು ನಾವು ಈ ಆಕ್ಷೇಪಗಳ ಉತ್ತರಗಳನ್ನು ಪತ್ರಿಕೆಯಲ್ಲಿ ಖಾಯಂ ರೂಪದಲ್ಲಿ ಪ್ರಕಟಿಸುತ್ತೇವೆ ಎಂದು. ನಮ್ಮ ಎದುರಾಗಿ ಆಕ್ರಮಣ ಮಾಡಿದರೆ ಆ ಆಕ್ರಮಣದ ರಕ್ಷಣೆಯಲ್ಲಿ ಅವರಿಗೆ ಅನಿವಾರ್ಯವಾಗಿ ಅವರು ಸಹ ಒಂದು ಖಾಯಂ ಪತ್ರಿಕೆಯಲ್ಲಿ ಪ್ರಕಟಿಸಬೇಕು, ಎರಡೂ ಪತ್ರಿಕೆಗಳಲ್ಲಿ ಮುದ್ರಿತವಾದ ನಂತರ ಯಾರಾದರೂ ಮೂರನೇ ನಿರ್ಣಾಯಕರಿಂದ ಅಥವಾ ಸ್ವಯಂ ವಿರೋಧಿ ಬಣ ಶಪಥ ವಹಿಸಿದರೆ ನಿರ್ಣಯವಾಗಬಹುದು. ಅವರು ಯಾವುದಕ್ಕೆ ರಾಜಿಯಾದರು ಸರಿ ಆದರೆ ಶರತ್ತೇನೆಂದರೆ ವಿರೋಧಿ ಬಣ ಖ್ಯಾತ ಪಂಡಿತರನ್ನು ಒಳಗೊಂಡಿರಬೇಕು ತಮ್ಮ ಗ್ರಂಥದ ಮೇಲೆ ಪ್ರಭುತ್ವ ಹೊಂದಿದವರಾಗಿರಬೇಕು ತಮ್ಮ ಪುರಾವೆಗಳನ್ನು ಮತ್ತು ವಿವರವನ್ನು ಬರೆಯುವ ಅರ್ಹತೆಯುಳ್ಳವರಾಗಿರಬೇಕು. ಅನಗತ್ಯವಾಗಿ ಸಮಯವನ್ನು ವ್ಯರ್ಥ ಮಾಡಬಾರದು. ಈಗಲೂ ಯಾರಾದರು ಅನ್ಯಾಯ ರೀತಿಯಲ್ಲಿ ನ್ಯಾಯಬದ್ಧ ಕ್ರಮವನ್ನು ತ್ಯಜಿಸಿ ದೂರವಾದರೆ ಮತ್ತು ಅಶ್ಲೀಲ ಮಾತುಗಳನ್ನು ಆಡಿದರೆ, ದ್ವೇಷ ಸಾಧಿಸಿದರೆ, ಇಸ್ಲಾಮ್ ಧರ್ಮವನ್ನು ಅಪಮಾನಗೊಳಿಸುವುದರಿಂದ ದೂರ ಸರಿಯದಿದ್ದರೆ ಅದರಿಂದ ಸ್ಪಷ್ಠವಾಗುವುದು ಅವರು ಯಾವುದೇ ಸ್ಥಿತಿಯಲ್ಲಿ ತಮ್ಮ ಕೊರಳಿಗೆ ಬಿದ್ದ ಸುಳ್ಳಿನ ಹಾರವನ್ನು ತೆಗೆಯ ಬಯಸುವುದಿಲ್ಲ. ಅದು ಅಲ್ಲಾಹನ ನ್ಯಾಯಲಯದಲ್ಲಿ, ಸುಳ್ಳುಗಾರರ, ಅವಿಶ್ವಾಸಿಗರ ಕೆಟ್ಟ ನಾಲಿಗೆಯುಳ್ಳವರ, ಜಿಪುಣರ ಮತ್ತು ದ್ವೇಷಕಾರರ ಕೊರಳಿಗೆ ಮಾಲೆಯಾಗಿ ಹಾಕಿರುತ್ತೇವೆ. ವಸ್ಸಲಾಮು ಅಲಾ ಮನಿತ್ತಬಅಲ್ ಹುದಾ.

ಅಂತಿಮವಾಗಿ ತಿಳಿದಿರಲಿ ಈ ಜಾಹಿರಾತಿನ ಉತ್ತರ, 20 ಸೆಪ್ಟೆಂಬರ್ 1886ರಿಂದ ಮೂರು ತಿಂಗಳವರೆಗೆ ಯಾವುದೇ ಪಂಡಿತ ಅಥವಾ ಪಾದರಿಯ ಉತ್ತರವನ್ನು ಕಾಯಲಾಗುವುದು. ಈ ಅವಧಿಯಲ್ಲಿ ಆರ್ಯ ಪಂಡಿತರು ಹಾಗೂ ಇತರರು ಮೌನವಹಿಸಿದರೆ ಅವರ ಮೌನವೇ ಅವರಿಗೆ ಮುಳ್ಳು ಆಗುವುದು ಅಂದರೆ ತಾರ್ಕಿಕವಾಗಿರುವುದು. (ಸುರ್ಮ ಚಶ್ಮ ಆರ್ಯ, ರೂಹಾನಿ ಖಝಾಯಿನ್ ಸಂಪುಟ–2, ಪುಟ–311)

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್

*(ಪುಟ ಸಂಖೆ 09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಅಹ್ಮದಿಯಾ ಜಮಾಅತ್ ಯಾವುದೇ ಪಕ್ಷ ಅಥವಾ ಪಂಗಡದ ಭಿನ್ನವಾದ ದೃಷ್ಟಿಕೋನಗಳು ಮತ್ತು ವ್ಯಾಖ್ಯಾನಗಳ ಮೇಲೆ ಸ್ಥಾಪನೆಗೊಂಡ ಜಮಾಅತ್ ಅಲ್ಲ. ಬದಲಿಗೆ ಹಝ್ರ್‌ತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಭವಿಷ್ಯವಾಣಿ ಪ್ರಕಾರ ಮತ್ತು ಅಲ್ಲಾಹನ ವಾಗ್ದಾನಗಳ ಪ್ರಕಾರ ಕೊನೆಗಾಲದಲ್ಲಿ ಹಝ್ರ್‌ತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧರಾದ ದಾಸರಾದ ಹಝ್ರ್‌ತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮೂಲಕ ಸ್ಥಾಪನೆಗೊಂಡ ಜಮಾಅತಾಗಿದೆ.**

**"ಲೋಕದಲ್ಲಿರುವ ಸಕಲ ಮುಸ್ಲಿಮರನ್ನು ಒಂದು ಧರ್ಮದಲ್ಲಿ ಒಟ್ಟುಸೇರಿಸಿ ಅಲಾ ದೀನಿ ವಾಹಿದಿನ್"**

**ಪವಿತ್ರ ಖುರ್‌ಆನ್ ಮತ್ತು ಹದೀಸುಗಳಿಂದ ತಿಳಿದುಬರುವಚಿಹ್ನೆಗಳು ಈ ಕಾಲಘಟ್ಟದಲ್ಲಿ ಪೂರ್ತಿಯಾಗುತ್ತಿರುವುದಾಗಿ ಅಥವಾ ಪೂರ್ತಿಯಾಗಿದ್ದಾಗಿ ಕಾಣುತ್ತಿರುವಾಗ, ನಾವೇಕೆ ಶಿಯಾ, ಸುನ್ನೀ ಮತ್ತು ವಿವಿಧ ಪಂಗಡಗಳ ಭಿನ್ನಾಭಿಪ್ರಾಯಗಳನ್ನು ಕೊನೆಗೊಳಿಸಿ ನಮ್ಮನ್ನು ಒಂದಾಗಿಸುವ ನ್ಯಾಯವಂತನಾದ ತೀರ್ಪುಗಾರನನ್ನು ಮತ್ತು ಹಝ್ರ್‌ತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಭವಿಷ್ಯ ನುಡಿದ ಸತ್ಯಸಂಧನಾದ ದಾಸನು ಯಾರೆಂದು ಹುಡುಕುತ್ತಿಲ್ಲ?**

**ಹಝ್ರ್‌ತ್ ಮಸೀಹ್ ಮೌಊದ್ ಮತ್ತು ನ್ಯಾಯವಂತ ತೀರ್ಪುಗಾರನ ಈ ಜಮಾಅತ್ ಭಿನ್ನತೆಯನ್ನು ಕೊನೆಗೊಳಿಸಲು ಸ್ಥಾಪನೆಯಾಗಿದೆ**

**ಈ ಕಾಲದಲ್ಲಿ ಇಸ್ಲಾಮಿನ ಸೇವೆ ಮಾಡಬೇಕಾದರೆ ಮತ್ತು ಇಸ್ಲಾಮಿನ ಸಂರಕ್ಷಣೆ ಮಾಡಲು ಇಚ್ಛಿಸುವರಾದರೆ, ಅದು ಅಲ್ಲಾಹನ ಯೋಧ ಮತ್ತು ಪಹಿಲ್ವಾನರಾದ ಹಝ್ರ್‌ತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಸೇರಿಕೊಂಡು ಮಾತ್ರವೇ ಸಾಧ್ಯವಾಗುವುದು.**

---

**ಯಾವ ವ್ಯಕ್ತಿ ಹುಸೈನ್ ರಝಿಯಲ್ಲಾಹು ಅನ್‌ಹು ಅಥವಾ ಪರಿಶುದ್ಧ ಇಮಾಮರಾದ ಯಾರನ್ನಾದರೂ ನಿಂದಿಸುತ್ತಾನೋ ಅಥವಾ ಅವರ ಬಗ್ಗೆ ನಿಂದನೀಯ ಪದಗಳನ್ನು ತನ್ನ ನಾಲಗೆಯಿಂದ ಉಚ್ಚರಿಸುತ್ತಾನೋ ಅವನು ತನ್ನ ಈಮಾನನ್ನು ವ್ಯರ್ಥಗೊಳಿಸುತ್ತಾನೆ. ಏಕೆಂದರೆ ಯಾರು ಅಲ್ಲಾಹನ ವರಿಷ್ಠ ದಾಸರೊಂದಿಗೆ ಮತ್ತು ಅವನ ಪ್ರೀತಿಗೆ ಪಾತ್ರರಾದವರೊಡನೆ ಶತ್ರುತ್ವ ಇರಿಸುತ್ತಾನೋ ಅಲ್ಲಾಹನು ಅವನ ಶತ್ರುವಾಗುತ್ತಾನೆ.**

---

**ಈ ಕಾಲಘಟ್ಟದ ನ್ಯಾಯವಂತ ತೀರ್ಪುಗಾರರಾದ ಹಝ್ರ್‌ತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಉಲ್ಲೇಖಗಳ ಬೆಳಕಿನಲ್ಲಿ ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಹಾಗೂ ಅವರ ಕುಟುಂಬ ಹಾಗೂ ಅವರ ಖಲೀಫರ ಅನುಗ್ರಹಗಳ ಪ್ರಸ್ತಾವನೆ ಮತ್ತು ಮುಹರ್ರಮ್ ಮಾಸದ ದಿನಗಳಲ್ಲಿ ದರೂದೆ ಶರೀಫ್ ಹಾಗೂ ದುಆಗಳು ಮಾಡುವುದಾಗಿ ಕೋರಿಕೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ್‌ತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **28-08-2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

اِيَّاكَ نَعْبُدُ وَاِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಈ ಕಾಲಘಟ್ಟದಲ್ಲಿ ಅಲ್ಲಾಹನು ತನ್ನ ವಾಗ್ದಾನದ ಪ್ರಕಾರ ಹಝ್ರ್‌ತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ದಾಸ್ಯದಲ್ಲಿ ವಾಗ್ದತ್ತ ಮಸೀಹ್ ಮತ್ತು ಮಹ್‌ದಿಯನ್ನು ಇಸ್ಲಾಮಿನ ನೈಜ ಪಾಠಗಳ ಬೆಳಕಿನಲ್ಲಿ ಎಲ್ಲ ಮುಸ್ಲಿಮರನ್ನು ಏಕ ಸಮುದಾಯವನ್ನಾಗಿ ಮಾಡಲಿಕ್ಕೆ, ವಿವಿಧ ಪಂಗಡಗಳ ಮತ್ತು ವಿಭಾಗಗಳ ತಪ್ಪಾದ ವ್ಯಾಖ್ಯಾನಗಳನ್ನು ಮತ್ತು ಶಾಖಾಪರವಾದ ಭಿನ್ನಾಭಿಪ್ರಾಯಗಳನ್ನು ದೂರೀಕರಿಸಿ ಮುಸ್ಲಿಮರಿಗೆ ಏಕತೆಯನ್ನು ಪ್ರದಾನಿಸಲಿಕ್ಕಾಗಿ ನ್ಯಾಯವಂತ ತೀರ್ಪುಗಾರನನ್ನಾಗಿ ಮಾಡಿ ಕಳುಹಿಸಿರುವನು. ಮುಸ್ಲಿಮರ ಪ್ರತಿಯೊಂದು ಪಂಗಡಗಳಿಂದ ಜವಾಬ್ದಾರಿಯುತವಾಗಿ ಈ ಸಂಗತಿಯ ಬಗ್ಗೆ ಯೋಚಿಸಿದವರು, ವಿವಿಧ ಪಂಗಡಗಳ ಭಿನ್ನತೆಯ ನೋವನ್ನು ಅನುಭವಿಸಿದವರು ತಮ್ಮ ಬುದ್ಧಿ, ವಿವೇಕ ಮತ್ತು ಪ್ರಾರ್ಥನೆಯ ಮೂಲಕ ಹಝ್ರ್‌ತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತಿನಲ್ಲಿ ಬಂದು ಸೇರುವುದನ್ನು ಹಾಗೂ ಲಕ್ಷಾಂತರ ಜನರು ಪ್ರತಿ ವರ್ಷ ಜಮಾಅತಿಗೆ ಪ್ರವೇಶಿಸುತ್ತಲೂ ಇರುವುದನ್ನು ನಾವಿಂದು ನೋಡುತ್ತಿದ್ದೇವೆ. ಒಟ್ಟಿನಲ್ಲಿ, ಅಹ್ಮದಿಯಾ ಜಮಾಅತ್ ಯಾವುದೇ ಪಕ್ಷ ಅಥವಾ ಪಂಗಡದ ಭಿನ್ನವಾದ ದೃಷ್ಟಿಕೋನಗಳು ಮತ್ತು ವ್ಯಾಖ್ಯಾನಗಳ ಮೇಲೆ ಸ್ಥಾಪನೆಗೊಂಡ ಜಮಾಅತ್ ಅಲ್ಲ. ಬದಲಿಗೆ ಹಝ್ರ್‌ತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಭವಿಷ್ಯವಾಣಿ ಪ್ರಕಾರ ಮತ್ತು ಅಲ್ಲಾಹನ ವಾಗ್ದಾನಗಳ ಪ್ರಕಾರ ಕೊನೆಗಾಲದಲ್ಲಿ ಹಝ್ರ್‌ತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧರಾದ ದಾಸರಾದ ಹಝ್ರ್‌ತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮೂಲಕ ಸ್ಥಾಪನೆಗೊಂಡ ಜಮಾಅತಾಗಿದೆ. ಆ ಜಮಾಅತ್ ಹಝ್ರ್‌ತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿ ಶಿಯಾ ಮತ್ತು ಸುನ್ನಿಗಳ ನಡುವೆ ಅಥವಾ ಬೇರೆ ಯಾವುದೇ ಪಂಗಡಗಳ ಮಧ್ಯೆ ಇರುವ ಭಿನ್ನಾಭಿಪ್ರಾಯಗಳನ್ನು ಕೊನೆಗೊಳಿಸಿ ಮುಸ್ಲಿಮರಿಗೆ ಇಸ್ಲಾಮಿನ ಯಥಾರ್ಥ ಅಧ್ಯಾಪನೆಗಳನ್ನು ತಿಳಿಸಿ ಒಂದು ಸಮುದಾಯವನ್ನಾಗಿಸಲು ಬಂದಿದೆ. ಈ ಕೆಲಸಕ್ಕಾಗಿ ಹಝ್ರ್‌ತ್ ಮಸೀಹ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆವಿರ್ಭಾವವಾಯಿತು. ಇದೇ ಕೆಲಸಕ್ಕಾಗಿ ಅಲ್ಲಾಹನ ಆಜ್ಞೆ ಪ್ರಕಾರ ಅವರು ಜಮಾಅತನ್ನು ಸ್ಥಾಪಿಸಿದ್ದರು. ಈ ಕೆಲಸವನ್ನು ಮಾಡಲಿಕ್ಕಾಗಿ ಲೋಕದಲ್ಲಿರುವ ಸಕಲ ಮುಸ್ಲಿಮರನ್ನು ಒಂದು ಧರ್ಮದಲ್ಲಿ ಒಟ್ಟುಸೇರಿಸಬೇಕೆಂದು ಅಲ್ಲಾಹನು ದಿವ್ಯವಾಣಿ ಮೂಲಕ ಅವರಿಗೆ ತಿಳಿಸಿದನು. (ತಝ್‌ಕರಃ, ಪುಟ-490, ನಾಲ್ಕನೇ ಮುದ್ರಣ)

ಒಟ್ಟಿನಲ್ಲಿ, ಅಲ್ಲಾಹನು ಅವರಿಗೆ ಒಪ್ಪಿಸಿದ ಇದೇ ಕೆಲಸವನ್ನು ಅವರ ನಂತರದ ಖಿಲಾಫತಿನೊಂದಿಗೆ ಸೇರಿಕೊಂಡು ಅವರ ಬೈಅತನ್ನು ಮಾಡಿಕೊಂಡು ಅವರು ಸ್ಥಾಪಿಸಿದ ಜಮಾಅತ್ ಸಹ ಮಾಡಬೇಕಾಗಿದೆ. ಈ ಕೆಲಸವನ್ನು

ಅಲ್ಲಾಹನ ಅನುಗ್ರಹದಿಂದ ಕಳೆದ 130 ವರ್ಷಗಳಿಂದ ಮಾಡುತ್ತಿದ್ದೇವೆ ಅಥವಾ ಖಿಲಾಫತಿನ ವ್ಯವಸ್ಥೆ ಶುರುವಾದ 112 ವರ್ಷಗಳಿಂದ ನಾವು ಮಾಡುತ್ತಿದ್ದೇವೆ. ಅದಕ್ಕಿಂತ ಮುಂಚೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಈ ಕೆಲಸವನ್ನು ಮಾಡುತ್ತಿದ್ದರು. ಕಾಲಘಟ್ಟದ ಇಮಾಮ್ ಮತ್ತು ನ್ಯಾಯವಂತ ತೀರ್ಪುಗಾರನ ಜ್ಞಾನಭರಿತ ವ್ಯಾಖ್ಯಾನಗಳ ಬೆಳಕಿನಲ್ಲಿ ಪವಿತ್ರ ಖುರ್‌ಆನನ್ನು, ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಚರ್ಯೆಗಳನ್ನು ಮತ್ತು ಸಹೀಹಾದ ಹದೀಸುಗಳನ್ನು ಮುಸ್ಲಿಮರಿಗೆ ತಿಳಿಸುಕೊಡುವುದರೊಂದಿಗೆ ಮುಸ್ಲಿಮೇತರರಿಗೂ ಇಸ್ಲಾಮಿನ ಸುಂದರವಾದ ಪಾಠಗಳನ್ನು ಹೇಳಿ ಅವರನ್ನು ಇಸ್ಲಾಮಿನ ವೃತ್ತಕ್ಕೆ ತರಲು ಪ್ರಯತ್ನಿಸುತ್ತಿದ್ದೇವೆ. ಒಟ್ಟಿನಲ್ಲಿ ಹಝ್ರತ್ ಮಸೀಹ್ ಮೌಊದ್ ಮತ್ತು ನ್ಯಾಯವಂತ ತೀರ್ಪುಗಾರನ ಈ ಜಮಾಅತ್ ಭಿನ್ನತೆಯನ್ನು ಕೊನೆಗೊಳಿಸಲು ಸ್ಥಾಪನೆಯಾಗಿದೆ. ಶತ್ರುತ್ವಗಳು, ಮೊಕದ್ದಮೆಗಳು ಕಠಿಣವಾದ ವರ್ತನೆಗಳು ಮತ್ತು ಬೈಗುಳಗಳು ನಮ್ಮ ವಿರುದ್ಧವಿದ್ದರೂ ನಾವು ಪ್ರತಿಯೊಬ್ಬರಿಗೂ ಶಾಂತಿಯ, ಸಮಾಧಾನದ ಮತ್ತು ಪ್ರಾರ್ಥನೆಯ ಸಂದೇಶವನ್ನೇ ನೀಡುತ್ತೇವೆ. ನಾವು ಸತ್ಯವನ್ನು ಹರಡುವುದನ್ನು ಮತ್ತು ಸತ್ಯವನ್ನು ಹೇಳುವುದನ್ನು ಖಂಡಿತವಾಗಿಯೂ ನಿಲ್ಲಿಸಲಾರೆವು. ಅದಕ್ಕಾಗಿ ನಾವು ತ್ಯಾಗಗಳನ್ನು ಸಹ ಮಾಡುತ್ತಿದ್ದೇವೆ. ಜಗಳ ಮತ್ತು ಬೈಗುಳ ನಮ್ಮ ಕಡೆಯಿಂದ ಹಿಂದೆಯೂ ಯಾವತ್ತೂ ಆಗಿಲ್ಲ ಮುಂದೆಯೂ ಆಗದು. ದೈವಿಕ ಜಮಾಅತುಗಳಿಗೆ ವಿರೋಧಗಳು ಸಹ ಇರುತ್ತವೆ ಮತ್ತು ಅವು ದೌರ್ಜನ್ಯಗಳನ್ನು ಸಹಿಸಬೇಕಾಗುತ್ತವೆ. ಆದರೆ ಕೊನೆಗೆ ಅಲ್ಲಾಹನು ಅವುಗಳಿಗೆ ವಿಜಯವನ್ನು ನೀಡುತ್ತಾನೆ. ನಾವು ದುಆ ಸಹ ಮಾಡುತ್ತೇವೆ ಮತ್ತು ನಾನು ಹೇಳಿದಂತೆ ಕಾಲಘಟ್ಟದ ಇಮಾಮರ ಸಂದೇಶವನ್ನು ಎಲ್ಲ ಧರ್ಮಗಳ ಮತ್ತು ಎಲ್ಲ ದೇಶಗಳ ಜನರೆಡೆಯಲ್ಲಿ ಹರಡಲು ಪ್ರಯತ್ನ ಸಹ ಮಾಡುತ್ತಿದ್ದೇವೆ. ಆದರೆ ಅದರೊಂದಿಗೆ ಸಾಮಾನ್ಯ ಮುಸ್ಲಿಮರೊಡನೆ, ವಿಚಾರಶೀಲ ಜನರೊಡನೆ, ಸತ್ಯಾನ್ವೇಷಿಗಳೊಡನೆ, ಕಲಹಗಳನ್ನೂ ಪಿತೂರಿಗಳನ್ನೂ ಕೊನೆಗೊಳಿಸಲು ಇಚ್ಛಿಸುವ ವಿದ್ಯಾವಂತರೊಡನೆ ಮತ್ತು ವಿವೇಕಿಗಳೊಡನೆ ಈ ಕುರಿತು ಯೋಚಿಸಬೇಕೆಂದು ನಾನು ಹೇಳುತ್ತೇನೆ. ನೂರಾರು ವರ್ಷಗಳಿಂದ ಪ್ರಾರಂಭದ ಕೆಲವು ದಶಕಗಳ ಹೊರತು ಆರಂಭದಿಂದಲೇ ಮುಸ್ಲಿಮರು ಭಿನ್ನತೆಗಳಲ್ಲಿ ಮುಳುಗಿ ತಮ್ಮ ಒಗ್ಗಟ್ಟನ್ನು ಮತ್ತು ಐಕ್ಯವನ್ನು ದುರ್ಬಲಪಡಿಸುತ್ತಾ ಬಂದಿರುವರು.

ಈಗ ನಾವು ಇಸ್ಲಾಮಿನ ಕೆಲಂಡರಿನ ಮೊದಲ ತಿಂಗಳಾದ ಮುಹರ್ರಮ್ ಮಾಸದಲ್ಲಿದ್ದೇವೆ. ಇಂಗ್ಲಿಷ್ ಕ್ಯಾಲೆಂಡರಿನ ವರ್ಷ ಶುರುವಾಗುವಾಗ ನಾವು ಪರಸ್ಪರ ಶುಭಾಶಯಗಳನ್ನು ಅರ್ಪಿಸುಸುತ್ತೇವೆ. ಆದರೆ ಇಸ್ಲಾಮಿನ ವರ್ಷ ಶುರುವಾಗುವಾಗ ಹಲವು ಮುಸ್ಲಿಮ್ ದೇಶಗಳಲ್ಲಿ ಈ ಪಕ್ಷಗಾರಿಕೆಯ ಕಾರಣದಿಂದ ಕೊಲೆ ಮತ್ತು ದಂಗೆ ನಡೆಯುತ್ತಿವೆ. ಶಾಂತಿ ಮತ್ತು ಸಮಾಧಾನದ ಉನ್ನತ ಪಾಠಗಳನ್ನು ನೀಡುವ ಧರ್ಮವನ್ನು ನಂಬುವವರು ತಮ್ಮ ವರ್ಷದ ಆರಂಭವನ್ನು ಏಕೆ ಕಲಹ, ಪಿತೂರಿ, ಕೊಲೆ ಮತ್ತು ದರೋಡೆಗಳೊಂದಿಗೆ ಶುರುಮಾಡುತ್ತಾರೆ ಎಂದು ನಾವು ಯೋಚಿಸಬೇಕಾಗಿದೆ. ನಾವು ನಮ್ಮ ರೀತಿಗಳನ್ನು ಬದಲಾವಣೆ ಮಾಡಬೇಕಾಗಿದೆ. ಮುಸ್ಲಿಮರನ್ನು ಒಂದು ಸಮುದಾಯವನ್ನಾಗಿ ಮಾಡಿ ಈ ಕಲಹಗಳನ್ನು ಮತ್ತು ಭಯೋತ್ಪಾದನೆಗಳನ್ನು ಹೇಗೆ ಕೊನೆಗೊಳಿಸಬಹುದು ಎಂದು ನಾವು ಯೋಚಿಸಬೇಕಾಗಿದೆ. ಇಸ್ಲಾಮಿನ ಆರಂಭದ ಪ್ರಗತಿಯ ನಂತರದ ಸುಳ್ಳು ಮತ್ತು ವಕ್ರತೆಯ ಒಂದು ಕಾಲಘಟ್ಟದ ಬಗ್ಗೆ ಭವಿಷ್ಯ ನುಡಿದ ನಮ್ಮ ನೇತಾರ ಮತ್ತು ಗುರುವಾದ ಹಝ್ರತ್ ಖಾತಮುಲ್ ಅಂಬಿಯಾ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರವಾದಿತ್ವದ ಮಾರ್ಗದಲ್ಲಿರುವ ಖಿಲಾಫತಿನ ಬಗ್ಗೆಯೂನಮಗೆ ಸುವಾರ್ತೆ ನೀಡಿದ್ದರು. ಯಾವ ವಿಷಯದಲ್ಲಿ ಮುಸ್ಲಿಮರಲ್ಲಿ ಭಿನ್ನತೆ ಉಂಟಾಯಿತೋ ಅದೇ ವಿಷಯ ಕೊನೆಗಾಲದಲ್ಲಿ ಪ್ರವಾದಿತ್ವದ ಮಾರ್ಗದಲ್ಲಿರುವ ಖಿಲಾಫತಿನ ಸ್ಥಾಪನೆಯ ನಂತರ ಮುಸ್ಲಿಮರನ್ನು ಏಕ ಸಮುದಾಯವನ್ನಾಗಿ ಮಾಡಲಿಕ್ಕಿರುವ ಮಾರ್ಗವೂ ಆಗುವುದು ಮತ್ತು ಮುಸ್ಲಿಮರ ಅಭಿವೃದ್ಧಿ ಹಾಗೂ ಒಗ್ಗಟ್ಟಿನ ಒಂದು ಪ್ರಕಾಶಮಾನವಾದ ದೃಷ್ಟಾಂತವಾಗುವುದು ಎಂದು ಸಹ ಹೇಳಿದ್ದರು. ಪವಿತ್ರ ಖುರ್‌ಆನ್ ಮತ್ತು ಹದೀಸುಗಳಿಂದ ತಿಳಿದುಬರುವಚಿಹ್ನೆಗಳು ಈ ಕಾಲಘಟ್ಟದಲ್ಲಿ ಪೂರ್ತಿಯಾಗುತ್ತಿರುವುದಾಗಿ ಅಥವಾ ಪೂರ್ತಿಯಾಗಿದ್ದಾಗಿ ಕಾಣುತ್ತಿರುವಾಗ, ನಾವೇಕೆ ಶಿಯಾ, ಸುನ್ನೀ ಮತ್ತು ವಿವಿಧ ಪಂಗಡಗಳ ಭಿನ್ನಾಭಿಪ್ರಾಯಗಳನ್ನು ಕೊನೆಗೊಳಿಸಿ ನಮ್ಮನ್ನು ಒಂದಾಗಿಸುವ ನ್ಯಾಯವಂತನಾದ ತೀರ್ಪುಗಾರನನ್ನು ಮತ್ತು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಭವಿಷ್ಯ ನುಡಿದ ಸತ್ಯಸಂಧನಾದ ದಾಸನು ಯಾರೆಂದು ಹುಡುಕುತ್ತಿಲ್ಲ?

ಈ ಕುರುಡರಾದ ನಾಮಧಾರಿಗಳಾದ ಉಲೇಮಾರನ್ನು ಅನುಸರಿಸಬೇಡಿರಿ. ಅವರು ಸ್ವತಃ ಮುಳುಗುತ್ತಿದ್ದಾರೆ ಮತ್ತು ತಮ್ಮೊಂದಿಗೆ ಮುಸ್ಲಿಮರ ಒಂದು ದೊಡ್ಡ ಜನಕೂಟವನ್ನು ಮುಳುಗಿಸಲು ಪ್ರಯತ್ನಿಸುತ್ತಿದ್ದಾರೆ. ನೋಡಿರಿ, ಪವಿತ್ರ ಖುರ್‌ಆನ್ ಮತ್ತು ಹದೀಸುಗಳಿಂದ ತಿಳಿದುಬರುತ್ತಿರುವ ಚಿಹ್ನೆಗಳು ಈಡೇರಿದ್ದಾಗಿ ನಾವು ಕಾಣುತ್ತಿರುವಾಗ, ಭವಿಷ್ಯ ನುಡಿಯಲ್ಪಟ್ಟ ವ್ಯಕ್ತಿ ಯಾರೆಂದು ನೋಡಬೇಕಾಗಿದೆ. ಅವರನ್ನು ಹುಡುಕುವ ಆವಶ್ಯಕತೆ ಇದೆ. ಇಸ್ಲಾಮಿನ ಪುನರುಜ್ಜೀವನಕ್ಕೆ ಕಾರಣಕರ್ತರಾಗಿಕೊಂಡು ಅಲ್ಲಾಹನ ಕಡೆಯಿಂದ ಎಬ್ಬಿಸಿ ನಿಲ್ಲಿಸಲ್ಪಟ್ಟ ವ್ಯಕ್ತಿ ಯಾರೆಂದು ನೋಡಬೇಕಾಗಿದೆ. ಒಬ್ಬರು ಈ ಕೆಲಸಕ್ಕಾಗಿ ಎದ್ದೇಳಬೇಕಾಗಿತ್ತು. ಅದು ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗ್ಹುಲಾಮ್ ಅಹ್ಮದ್ ಸಾಹಿಬರು ಎಂದು ನಾವು ಅಹ್ಮದಿಯರು ಹೇಳುತ್ತೇವೆ. ಅವರ ಮೂಲಕ ಅಲ್ಲಾಹನು ಇಸ್ಲಾಮಿನ ಪುನರುಜ್ಜೀವನವನ್ನು ಮಾಡುತ್ತಿದ್ದಾನೆ ಅಥವಾ ಮಾಡಿಸುವನು. ಅವರು ಜಗಳಗಳನ್ನು ಮತ್ತು ಕಲಹಗಳನ್ನು ಕೊನೆಗೊಳಿಸಿ ಶಾಂತಿ ಮತ್ತು ಸಮಾಧಾನವನ್ನು ಸ್ಥಾಪಿಸುವರು. ನಾವು ವಿವೇಕವಂತರೆಂದಾದರೆ, ನಾವು ಮುಹರ್ರಮ್ ಮಾಸವನ್ನು ಕೇವಲ ಸಂತಾಪ ಸೂಚಿಸುವ ಅಥವಾ ತಮ್ಮ ಹಗೆ, ದ್ವೇಷ ಮತ್ತು ಕೋಪವನ್ನು ಹೊರಗೆ ತೋರ್ಪಡಿಸುವ ಮಾಸವನ್ನಾಗಿಮಾಡಬಾರದು. ತಮ್ಮ ಆವೇಶಗಳನ್ನು ತೋರಿಸಲಿಕ್ಕಿರುವ ಮಾರ್ಗವನ್ನಾಗಿ ಮಾಡಬೇಡಿರಿ. ಬದಲಿಗೆ ಪರಸ್ಪರ ಪ್ರೀತಿ ಮತ್ತು ಪ್ರೇಮದ ಮಾಸವನ್ನಾಗಿ ಮಾಡಿರಿ. ಇಸ್ಲಾಮಿನ ಯಥಾರ್ಥ ಅಧ್ಯಾಪನೆಗಳ ಪ್ರಕಾರ ನಡೆಯಿರಿ. ಅಲ್ಲಾಹನು ಈ ಕಾಲದಲ್ಲಿ ನ್ಯಾಯವಂತರಾದ ತೀರ್ಪುಗಾರನ ಸ್ಥಾನವನ್ನು ನೀಡಿ ಕಳುಹಿಸಿದ ಮಾರ್ಗದರ್ಶಕರ ಹಿಂದೆ ಚಲಿಸಿರಿ. ಆಗಲೇ ನಾವು ಯಥಾರ್ಥ ಮುಸ್ಲಿಮರೆಂದು ಕರೆಯಲ್ಪಡುವೆವು. ಆಗಲೇ ಲೋಕ ನಮ್ಮನ್ನು ಹಿಂಬಾಲಿಸುವುದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಬ್ಬ ಆಲಿಮ್‌ರೊಡನೆ ಒಂದು ಸಂದರ್ಭದಲ್ಲಿ ಹೀಗೆ ಹೇಳಿದ್ದರು:

"ನನ್ನ ಸ್ಥಾನ ಒಬ್ಬ ಮೌಲವಿಯಂತದ್ದಲ್ಲ. ಬದಲಾಗಿ, ನನ್ನ ಪದವಿ ಪ್ರವಾದಿಗಳ ಚರ್ಯೆಯ ಪ್ರಕಾರವಾಗಿದೆ. ನನ್ನನ್ನು ಅಲ್ಲಾಹನು ಕಳುಹಿಸಿದ ವ್ಯಕ್ತಿಯೆಂದು ನಂಬುವಾಗ ಮಾತ್ರವೇ ಮುಸ್ಲಿಮರೆಡೆಯಲ್ಲಿ ಇರುವ ಈ ಎಲ್ಲ ಜಗಳಗಳು ಮತ್ತು ಸಕಲ ಕಲಹಗಳು ಒಂದೇ ಕ್ಷಣದಲ್ಲಿ ಬಗೆಹರಿಯುವುದು. ಅಲ್ಲಾಹನ ಕಡೆಯಿಂದ ನಿಯೋಜಿತನಾಗಿ ಮತ್ತು ನ್ಯಾಯವಂತ ತೀರ್ಪುಗಾರನಾಗಿ ಬಂದವರು ಪವಿತ್ರ ಖುರ್‌ಆನಿಗೆ ಕೊಡುವ ಅರ್ಥವೇ ಸರಿಯಾಗಿರುವುದು. ಯಾವ ಹದೀಸನ್ನು ಅವರು ಸರಿಯೆಂದು ಹೇಳುತ್ತಾರೋ ಅದೇ ಸರಿಯಾದ ಹದೀಸ್ ಆಗಿದೆ. ಇಲ್ಲದಿದ್ದರೆ ಶಿಯಾ ಸುನ್ನಿಗಳ ನಡುವೆ ಇರುವ ಜಗಳ ಎಂದೂ ಕೊನೆಗೊಳ್ಳಲಿಕ್ಕಿಲ್ಲ. ಈಗಲೂ ಕೊನೆಗೊಂಡಿಲ್ಲ ಎಂದು ನಾವು ನೋಡುತ್ತಿದ್ದೇವೆ. ಶಿಯಾ ವಿಭಾಗದವರು ಮೊದಲಿನ ಮೂರು ಖಲೀಫರನ್ನು ದೂಷಿಸುವ ಮತ್ತು ಅವರ ಬಗ್ಗೆ ಕೆಟ್ಟ ಪದಗಳನ್ನು ಪ್ರಯೋಗಿಸುವ ರೀತಿಯಲ್ಲೇ ಸುನ್ನಿಗಳಲ್ಲಿ ಕೆಲವರು ಹಝ್ರತ್ ಅಲಿ ರಝಿಯ್ಯಲ್ಲಾಹು ಅನ್‌ಹುರ ಬಗ್ಗೆ ಹೀಗೆ ಹೇಳುತ್ತಾರೆ: **ಬರ್ ಖಿಲಾಫತ್ ದಿಲಶ್ ಬಸೇ ಮಾಯಿಲ್, ಲೇಕ್ ಅಬೂಬಕ್ಕರ್ ಶುದ್ ದರ್‌ಮಿಯಾನ್ ಹಾಯಿಲ್**.

ಎಂದರೆ, ಖಿಲಾಫತ್ ಕಡೆಗೆ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಹೃದಯ ಒಲವು ತೋರಿಸುತ್ತಿತ್ತು. ಆದರೆ ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ತಡೆಯಾಗಿ ನಿಂತಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಎಲ್ಲಿಯ ವರೆಗೆ ಸತ್ಯವನ್ನು ಕಾಣುವಂತಾಗಲು, ಇವರು ತಮ್ಮ ಮಾರ್ಗವನ್ನು ಉಪೇಕ್ಷಿಸಿ ನನ್ನೊಡನೆ ಸೇರಿಕೊಂಡು ನೋಡುವುದಿಲ್ಲವೋ ಅಲ್ಲಿಯ ವರೆಗೆ ಸತ್ಯವನ್ನು ಎಂದಿಗೂ ತಲುಪಲಾರರು. ಇವರಿಗೆ ಬೇರೆ ಯಾವುದರ ಬಗ್ಗೆಯೂ ವಿಶ್ವಾಸವಿಲ್ಲದಿದ್ದರೆ, ಕಡಿಮೆ ಪಕ್ಷ ಒಂದು ದಿನ ಮರಣಬರುವುದು ಎಂಬುವುದನ್ನು ಅರಿಯಬೇಕು. ಮರಣದ ನಂತರ ಕೊಳಕುಗಳಿಂದ ಮುಕ್ತಿ ಪಡೆಯಲು ಸಾಧ್ಯವಿಲ್ಲ. ಬೈಗುಳಗಳು ಒಬ್ಬ ಸಭ್ಯ ವ್ಯಕ್ತಿಯ ಮುಂದೆಯೂ ಇಷ್ಟಕರವಾದ ಸಂಗತಿಯಲ್ಲದಿರುವಾಗ ಪರಿಶುದ್ಧನಾದ ಅಲ್ಲಾಹನ ಮುಂದೆ ಅದು ಆರಾಧನೆ ಹೇಗೆ ಆಗುವುದು? ಅದೇ ರೀತಿಯಲ್ಲಿ ದುಷ್ಕರ್ಮಗಳನ್ನು ಮಾಡುವ ಮತ್ತು ಅಕ್ರಮಗಳನ್ನು ಮಾಡುವ ವ್ಯಕ್ತಿಯು ಆರಾಧನೆಯನ್ನು ಆರಾಧನೆಯೆಂದು ಕರೆಯಲಾಗದು. ಆದ್ದರಿಂದಸತ್ಯವನ್ನು ಕಾಣುವಂತಾಗಲು ನನ್ನ ಸಮೀಪ ಬನ್ನಿರಿ ಮತ್ತು ನನ್ನ ಮಾತನ್ನು ಆಲಿಸಿರಿ ಎಂದು ನಾನು ಹೇಳುತ್ತಿದ್ದೇನೆ. ನಾನು ನಿಮ್ಮ ಮೇಲಂಗಿಯನ್ನು ಕಳಚಲು ಬಯಸುತ್ತೇನೆ. ನಿಜವಾದ ಪಶ್ಚಾತ್ತಾಪವನ್ನು ಮಾಡಿಕೊಂಡು ಸತ್ಯವಿಶ್ವಾಸಿಗಳಾಗಿರಿ. ತೋರಿಕೆ ಮತ್ತು ತಪ್ಪಾದ ವಿಶ್ವಾಸದ ನಿಲುವಂಗಿಯನ್ನು ಕಳಿಚಿರಿ, ತೌಬ ಮಾಡಿರಿ, ಆಗ ಮಾತ್ರವೇ ಮೂಮಿನ್ ಆಗಬಲ್ಲಿರಿ. ಯಾವ ಇಮಾಮರನ್ನು ನೀವು ಪ್ರತೀಕ್ಷಿಸುತ್ತಿದ್ದೀರೋ ಅದು ನಾನೇ ಆಗಿದ್ದೇನೆ. ಅದಕ್ಕೆ ಬೇಕಾಗಿರುವ ಸಬೂತುಗಳನ್ನು ನನ್ನಿಂದ ಪಡೆಯಿರಿ."
(ಮಲ್‌ಫೂಝಾತ್, ಸಂಪುಟ-2, ಪುಟ-140-141)

ಒಟ್ಟಿನಲ್ಲಿ ಧರ್ಮದ ಸರಿಯಾದ ಅರಿವು ನೀಡುವ ಸತ್ಯ ಇದೇ ಆಗಿದೆ. ಪರಸ್ಪರದ ಜಗಳಗಳನ್ನು, ಅಹಂಕಾರವನ್ನು ಕೊನೆಗೊಳಿಸಿ ಅಲ್ಲಾಹನ ಮುಂದೆ ಹಾಜರಾಗಿ ಅವನ ಮುಂದೆ ದುಆ ಮಾಡಿರಿ, ಯಥಾರ್ಥ ರೀತಿಯಲ್ಲಿ ಪಶ್ಚಾತ್ತಾಪ ಮಾಡಿರಿ. ತಮ್ಮ ಹೃದಯಗಳ ಮಾಲಿನ್ಯವನ್ನು ಸ್ವಚ್ಛಗೊಳಿಸಿ ಅಲ್ಲಾಹನ ಮುಂದೆ ಬಾಗಿದ್ದರೆ ಮಾತ್ರ ಇದು ಸಾಧ್ಯ. ಆಗ ಅಲ್ಲಾಹನ ಸರಿಯಾದ ಮಾರ್ಗವನ್ನು

ತೋರಿಸುವನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಾಲ್ವರು ಖಲೀಫರ ಉನ್ನತ ಸ್ಥಾನ ಮತ್ತು ಪದವಿಯನ್ನು ವಿವರಿಸುತ್ತಾ ಹೇಳುತ್ತಾರೆ:

"ಹಝ್ರತ್ ಅಬೂಬಕ್ಕರ್, ಉಮರ್, ಉಸ್ಮಾನ್, ಅಲಿ ರಝಿಯಲ್ಲಾಹು ಅನ್‌ಹುಮ್‌ರಿಗೆ ಸಮಾನವಾದ ಗುಣವನ್ನು ತನ್ನೊಳಗೆ ಉಂಟುಮಾಡುವ ತನಕ ಯಾವುದೇ ವ್ಯಕ್ತಿ ಮೂಮಿನ್ ಮತ್ತು ಮುಸ್ಲಿಮ್ ಆಗಲಾರನು. ಇವರು ಲೌಕಿಕತೆಗೆ ಮೋಹಿತರಾಗಿರಲಿಲ್ಲ. ಬದಲಿಗೆ ಅವರು ತಮ್ಮ ಜೀವಿತಗಳನ್ನು ಅಲ್ಲಾಹನ ಮಾರ್ಗದಲ್ಲಿ ಅರ್ಪಿಸಿದ್ದರು." (ಮಲ್‌ಫೂಝಾತ್, ಸಂಪುಟ–8, ಪುಟ–260–261)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ದೃಷ್ಟಿಯಲ್ಲಿ ಯಥಾರ್ಥ ಮೂಮಿನ್ ಮತ್ತು ಮುಸ್ಲಿಮಾಗಲು ನಾವು ತಲುಪಬೇಕಾದ ಪದವಿ ಇದಾಗಿದೆ. ಈ ನಾಲ್ವರು ಖಲೀಫರನ್ನು ತಮ್ಮ ಮಾದರಿಯನ್ನಾಗಿ ಮಾಡಬೇಕಾಗಿದೆ. ಹೀಗೆ ಆಗುವಾಗ ಪಕ್ಷ ವಿಪಕ್ಷಗಳ ತರ್ಕ ಹೇಗೆ ಉಳಿಯುವುದು? ಯಾವುದೇ ವಾದ ವಿವಾದಕ್ಕೆ ಎಡೆಯಿಲ್ಲ. ಇವರೆಲ್ಲರೂ ನಮಗೆ ಮಾದರಿ ಪುರುಷರಾಗಿರುವರು ಎಂಬುದು ಅಹ್ಮದಿಯಾ ಜಮಾಅತಿನ ವಿಶ್ವಾಸವಾಗಿದೆ. ಮುಸ್ಲಿಮರ ಭಿನ್ನತೆಯನ್ನು ಕೊನೆಗೊಳಿಸಿ ಅವರಲ್ಲಿ ಒಗ್ಗಟ್ಟು ಉಂಟುಮಾಡಲು ಅಹ್ಮದಿಯಾ ಜಮಾಅತಿಗೆ ಮಾತ್ರ ಸಾಧ್ಯವೆಂದು ಇದರಿಂದ ತಿಳಿಯಬಹುದಲ್ಲವೇ? ನಾಲ್ವರು ಖಲೀಫರಿಗೂ ವಿಶಿಷ್ಟವಾದ ಪದವಿ ಮತ್ತು ಸ್ಥಾನವಿದೆ. ಪ್ರತಿಯೊಬ್ಬರ ಸ್ಥಾನ ಮತ್ತು ಪದವಿಯನ್ನು ನಾವು ಗುರುತಿಸುವಂತಾಗಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹಲವು ಸಂದರ್ಭಗಳಲ್ಲಿ ವಿಶದವಾಗಿ ವಿವರಿಸಿದ್ದಾರೆ. ನಾವು ದೃಢವಾಗಿ ನಂಬುವ ವಿಶ್ವಾಸಾದರ್ಶಗಳು ಏನಾಗಿವೆ ಎಂದು ಜಮಾಅತಿಗೆ ಹೊಸದಾಗಿ ಪ್ರವೇಶಿಸಿದವರು ಮತ್ತು ಯುವ ಪೀಳಿಗೆ ತಿಳಿಯುವಂತಾಗಲು ನಾನು ಅವರ ಕೆಲವು ಉಲ್ಲೇಖಗಳಲ್ಲಿ ಮುಂದಿರಿಸುತ್ತೇನೆ:

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳುತ್ತಾರೆ: ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹುರ ಆರಂಭ ಕಾಲದಲ್ಲಿ ಮುಸೈಲಿಮ ಎಂಬ ವ್ಯಕ್ತಿ ಜನರನ್ನು ಒಟ್ಟುಗೂಡಿಸುವ ಉದ್ದೇಶದಿಂದ ತಪ್ಪಾದ ವ್ಯಾಖ್ಯಾನಗಳನ್ನು ಮಾಡಿ, ಹರಾಮಾದ ಮತ್ತು ತಪ್ಪಾದ ಸಂಗತಿಗಳನ್ನು ಅನುಮತನೀಯವನ್ನಾಗಿ ಮಾಡಿದ್ದನು. ಇಂತಹ ಸಮಯದಲ್ಲಿ ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಖಲೀಫರಾದರು. ಎಷ್ಟೆಲ್ಲ ತೊಂದರೆಗಳು ಅಂತಹ ಸಂದರ್ಭದಲ್ಲಿ ಉಂಟಾಗಿರಬಹುದು ಎಂದು ಒಬ್ಬ ಮನುಷ್ಯನು ಊಹಿಸಬಹುದಾಗಿದೆ. ಅವರು ಗಟ್ಟಿ ಹೃದಯದವರು ಆಗಿರದಿದ್ದರೆ ಮತ್ತು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ದೃಢವಿಶ್ವಾಸದ ಬಣ್ಣ ಅವರ ವಿಶ್ವಾಸದಲ್ಲಿ ಇಲ್ಲದಿರುತ್ತಿದ್ದರೆ ಅವರಿಗೆ ತುಂಬ ಕಷ್ಟವಾಗುತ್ತಿತ್ತು ಮತ್ತು ಅವರು ಗಾಬರಿಗೊಳ್ಳುತ್ತಿದ್ದರು. ಆದರೆ ಹಝ್ರತ್ ಅಬೂಬಕ್ಕರ್ ಸಿದ್ದೀಖ್ ರಝಿಯಲ್ಲಾಹು ಅನ್‌ಹುರವರು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರತಿಚ್ಛಾಯೆ ಮತ್ತು ನೆರಳಾಗಿದ್ದರು. ಪೈಗಂಬರರ ನೆರಳು ಅವರ ಮೇಲೆ ಬೀಳುತ್ತಿತ್ತು. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ವಭಾವಗುಣಗಳ ಪ್ರಭಾವ ಅವರಲ್ಲಿ ಬೀರುತ್ತಿತ್ತು. ಅವರ ಹೃದಯ ದೃಢವಿಶ್ವಾಸದ ಪ್ರಕಾಶದಿಂದ ತುಂಬಿತ್ತು. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಹೊರತುಪಡಿಸಿ ಬೇರೆ ಯಾರಲ್ಲಿಯೂ ಕಾಣದಂತಹ ಅತುಲ್ಯವಾದ ಶೌರ್ಯ ಮತ್ತು ಸ್ಥೈರ್ಯವನ್ನು ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ತೋರಿಸಿದ್ದರು. ಅವರ ಜೀವಿತವು ಇಸ್ಲಾಮಿನ ಜೀವಿತವಾಗಿತ್ತು. ಇದು ಯಾವುದೇ ದೀರ್ಘವಾದ ತರ್ಕ ವಿತರ್ಕಕ್ಕೆ ಎಡೆಯಿಲ್ಲದೆ ಸ್ಪಷ್ಟವಾಗುವ ಸಂಗತಿಯಾಗಿದೆ. ಆ ಕಾಲದ ಸ್ಥಿತಿಗತಿಗಳನ್ನು ಓದಿರಿ, ಆಗ ನಮಗೆ ಇಸ್ಲಾಮಿಗೆ ಅವರು ಮಾಡಿದ ಸೇವೆಗಳ ಅಂದಾಜಾಗುವುದು. ನಾನು ಸತ್ಯವಾಗಿಯೂ ಹೇಳುತ್ತೇನೆ, ಅವರು ಇಸ್ಲಾಮಿಗೆ ಎರಡನೇ ಆದಮ್ ಆಗಿದ್ದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಇಲ್ಲದಿರುತ್ತಿದ್ದರೆ, ಇಸ್ಲಾಮ್ ಸಹ ಇರುತ್ತಿರಲಿಲ್ಲ. ಎಂದರೆ ಶತ್ರುಗಳ ಹಲ್ಲೆಗಳಿಂದ ರಕ್ಷಿಸಲು, ಶರೀಅತನ್ನು ಸಂರಕ್ಷಿಸಲು ಆ ವೇಳೆ ಅಲ್ಲಾಹನು ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹುರನ್ನು ಎಬ್ಬಿಸಿ ನಿಲ್ಲಿಸಿದ್ದನು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನೀಡಿದ ವಿಶಿಷ್ಟ ತರಬೇತಿ ಮತ್ತು ಪೈಗಂಬರರೊಂದಿಗೆ ಇದ್ದ ವಿಶೇಷವಾದ ಸಂಬಂಧದ ಕಾರಣ ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಇಸ್ಲಾಮಿಗೆ ಪುನರುಜ್ಜೀವನ ನೀಡಿದರು ಮತ್ತು ಶತ್ರುಗಳ ಹಲ್ಲೆಗಳನ್ನು ಪರಾಜಿತಗೊಳಿಸಿದರು. ಇಸ್ಲಾಮನ್ನು ಪುನಃಸ್ಥಾಪಿಸಿದ್ದು ಅಬೂಬಕ್ಕರ್ ರಝಿಯಲ್ಲಾಹು ಅನ್‌ಹುರ ಒಂದು ಹಿರಿದಾದ ಔದಾರ್ಯವಾಗಿತ್ತು. ಅವರು ತಮ್ಮ ಸತ್ಯವಿಶ್ವಾಸದ ಸಾಮರ್ಥ್ಯದಿಂದ ಎಲ್ಲ ದ್ರೋಹಿಗಳಿಗೆ ಶಿಕ್ಷೆ ನೀಡಿ ಶಾಂತಿಯನ್ನು ನೆಲೆಸಿದರು. "ಯಥಾರ್ಥ ಖಲೀಫರ ಮೂಲಕ ಶಾಂತಿಯನ್ನು ನೆಲೆಸುವೆನು" ಎಂಬ ಅಲ್ಲಾಹನವಾಗ್ದಾನ ಹಝ್ರತ್ ಅಬೂಬಕ್ಕರ್ ಸಿದ್ದೀಖ್ ರಝಿಯಲ್ಲಾಹು ಅನ್‌ಹುರ ಖಿಲಾಫತ್ ಕಾಲಘಟ್ಟದಲ್ಲಿ ಹೀಗೆ ಈಡೇರಿತು. ಆಕಾಶ ಮತ್ತು ಭೂಮಿ ಕರ್ಮಪರವಾಗಿ ಅದಕ್ಕೆ ಸಾಕ್ಷ್ಯವೂ ವಹಿಸಿತು. ಒಟ್ಟಿನಲ್ಲಿ ಒಬ್ಬ ವ್ಯಕ್ತಿಯಲ್ಲಿ ಇಂತಹ ಮಟ್ಟದ ಸತ್ಯಸಂಧತೆ ಮತ್ತು ಪರಿಪಕ್ವತೆ ಇರುವಾಗ ಮಾತ್ರ ಅವನನ್ನು ಸಿದ್ದೀಖ್ ಎಂದು ಕರೆಯಲು ಸಾಧ್ಯ. (ಮಲ್‌ಫೂಝಾತ್, ಸಂಪುಟ–1, ಪುಟ–380–381)

ಅನಂತರ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಸ್ವಭಾವಗುಣ ಮತ್ತು ಅವರ ಪದವಿಯನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳುತ್ತಾರೆ:

ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಸ್ಥಾನ ಎಷ್ಟು ಉನ್ನತವಾಗಿತ್ತೆಂದರೆ, ಕೆಲವು ಸಂದರ್ಭಗಳಲ್ಲಿ ಅವರ ಅಭಿಪ್ರಾಯಗಳ ಪ್ರಕಾರ ಪವಿತ್ರ ಖುರ್‌ಆನಿನ ವಚನಗಳು ಅವತೀರ್ಣವಾಗುತ್ತಿತ್ತು. ಉಮರರ ನೆರಳಿಗೆ ಹೆದರಿ ಶೈತಾನ್ ಓಡಿ ಹೋಗುತ್ತಾನೆ ಎಂದು ಅವರ ಬಗ್ಗೆ ಹದೀಸಿನಲ್ಲಿ ಬಂದಿದೆ. "ನನ್ನ ನಂತರದ ಸಮೀಪ ಕಾಲದಲ್ಲಿ ಯಾರಾದರೂ ನಬಿ ಆಗುತ್ತಿದ್ದರೆ, ಉಮರ್ ಆಗುತ್ತಿದ್ದರು ಎಂದು ಅವರ ಬಗ್ಗೆ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದ್ದರು. ಹಿಂದಿನ ಸಮುದಾಯಗಳಲ್ಲಿ ಮುಹದ್ದಸರು ಇದ್ದರು, ಎಂದರೆ ಅಲ್ಲಾಹನೊಡನೆ ಸಂಭಾಷಣೆ ನಡೆಸುವವರಿದ್ದರು, ಈ ಸಮುದಾಯದ ಮುಹದ್ದಸ್ ಉಮರ್ ಆಗಿರುವರು ಎಂದು ಸಹ ಹದೀಸಿನಲ್ಲಿ ಬಂದಿದೆ.

(ಇಝಾಲ ಔಹಾಮ್, ರೂಹಾನಿ ಖಝಾಯೀನ್, ಸಂಪುಟ–3, ಪುಟ–219)

ಮತ್ತೊಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹಝ್ರತ್ ಅಬೂಬಕ್ಕರ್, ಹಝ್ರತ್ ಉಮರ್ ಮತ್ತು ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುಮ್‌ರ ಬಗ್ಗೆ ಒಟ್ಟಾಗಿ ಪ್ರಸ್ತಾಪಿಸುತ್ತಾ ಹೇಳುತ್ತಾರೆ: ಹಝ್ರತ್ ಅಬೂಬಕ್ಕರ್ ಸಿದ್ದೀಖ್, ಹಝ್ರತ್ ಉಮರ್ ಫಾರೂಖ್ ಮತ್ತು ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುಮ್‌ರವರು ಸಜ್ಜನರು ಮತ್ತು ಮೂಮಿನ್ ಆಗಿದ್ದರು ಎಂದು ಅಲ್ಲಾಹನು ನನಗೆ ತಿಳಿಸಿಕೊಟ್ಟಿರುವನು. ಅವರು ಅಲ್ಲಾಹನು ಆಯ್ಕೆ ಮಾಡಿದ ವರಿಷ್ಠ ದಾಸರಲ್ಲಿ ಒಳಪಟ್ಟವರಾಗಿದ್ದರು. ದಯಾವಂತನಾದ ಅಲ್ಲಾಹನ ವರದಾನಗಳಿಂದ ಅವರು ವಿಶಿಷ್ಟರಾಗಿದ್ದರು. ಹಲವು ದೇವಜ್ಞಾನಿಗಳು ಅವರ ಗುಣವೈಶಿಷ್ಟ್ಯಗಳಿಗೆ ಸಾಕ್ಷ್ಯ ನುಡಿದಿರುವರು. ಅವರು ಅತ್ಯುನ್ನತನಾದ ಅಲ್ಲಾಹನ ಸಂಪ್ರೀತಿಗಾಗಿ ತಮ್ಮ ನಾಡನ್ನು ಬಿಟ್ಟರು ಮತ್ತು ಪ್ರತಿಯೊಂದು ಯುದ್ಧದ ಬೆಂಕಿಯಲ್ಲಿ ಪ್ರವೇಶಿಸಿದ್ದರು. ಪ್ರತಿಯೊಂದು ಬೇಸಿಗೆ ಕಾಲದ ಮಧ್ಯಾಹ್ನದ ಬಿಸಿಲು ಮತ್ತು ರಾತ್ರಿಯ ತೀವ್ರ ಚಳಿಯನ್ನು ಅವರು ಪರಿವೆ ಮಾಡಿರಲಿಲ್ಲ. ಬದಲಿಗೆ ತರುಣರಂತೆ ಧರ್ಮದ ಮಾರ್ಗಗಳಲ್ಲಿ ಮಗ್ನರಾಗಿದ್ದರು. ಸ್ವಂತ ಮತ್ತು ಪರರ ಬಗ್ಗೆ ಒಲವು ತೋರಿಸಲಿಲ್ಲ. ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನಿಗಾಗಿ ಎಲ್ಲವನ್ನು ಉಪೇಕ್ಷಿಸಿದರು. ಅವರ ಕರ್ಮಗಳಲ್ಲಿ ಸುವಾಸನೆ ಮತ್ತು ಕೆಲಸಗಳಲ್ಲಿ ಸುಗಂಧವಿತ್ತು. ಇವೆಲ್ಲವೂ ಅವರ ಪದವಿಗಳ ತೋಟಗಳು ಮತ್ತು ಅವರ ಒಳಿತುಗಳ ಹೂದೋಟದ ಕಡೆಗೆ ಬೊಟ್ಟುಮಾಡಿ ತೋರಿಸುತ್ತವೆ. ಅವುಗಳ ಸುಗಂಧಪೂರಿತ ತಂಗಾಳಿ ಬೀಸಲ್ಪಡುವಾಗ ಅವುಗಳ ರಹಸ್ಯಗಳ ಅರಿವಾಗುತ್ತವೆ. ಅವುಗಳ ಪ್ರಕಾಶಗಳು ಪರಿಪೂರ್ಣವಾದ ಬೆಳಕಿನೊಂದಿಗೆ ನಮ್ಮ ಮುಂದೆ ತೆರೆಯಲ್ಪಡುತ್ತವೆ. (ಸಿರ್ರುಲ್ ಖಿಲಾಫ, ಉರ್ದು ಅನುವಾದ ಪುಟ–25–26, ರೂಹಾನಿ ಖಝಾಯೀನ್ ಸಂಪುಟ–8, ಪುಟ–326)

ನಾನು ನಿಮ್ಮ ಮುಂದಿರಿಸುವ ಉಲ್ಲೇಖಗಳು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ಅರಬಿ ಗ್ರಂಥವಾದ ಸಿರ್ರುಲ್ ಖಿಲಾಫದಿಂದ ಆಗಿದೆ. ಅರಬಿ ತರ್ಜುಮೆ ಮಾಡುವವರು ಈ ನೇರಪ್ರಸಾರದ ಸಮಯದಲ್ಲಿ ಆ ಮಟ್ಟದ ತರ್ಜುಮೆಯನ್ನು ಮಾಡುವುದು ಕಷ್ಟದ ಕೆಲಸವಾಗಿದೆ. ಈ ಖುತ್‌ಬದ ರಿಪೀಟ್ ಪ್ರಸಾರವಾಗುವಾಗ ಅಸಲು ಅರಬೀ ಗ್ರಂಥದಿಂದ ಓದಬೇಕು.

ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಶ್ರೇಷ್ಠತೆ ಮತ್ತು ಅವರ ಪದವಿಯ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ದೇವಭಕ್ತರೂ ಪರಿಶುದ್ಧ ಅಂತರಾಳವಿರುವವರೂ ಮತ್ತು ದಯವಂತನಾದ ಅಲ್ಲಾಹನ ಸನ್ನಿಧಿಯಲ್ಲಿ ಅತ್ಯಂತ ಪ್ರಿಯರಾದವರಲ್ಲಿ ಸೇರಿದರವರಾಗಿದ್ದರು. ಅವರು ಸಮುದಾಯದ ವರಿಷ್ಠ ವ್ಯಕ್ತಿ ಮತ್ತು ಆ ಕಾಲದ ನೇತಾರರಲ್ಲಿ ಒಬ್ಬರಾಗಿದ್ದರು. ಅವರು ಸರ್ವಶಕ್ತನಾದ ಅಲ್ಲಾಹನ ಸಿಂಹವೂ ದಯಾವಂತನಾದ ಅಲ್ಲಾಹನ ಶೂರ ಮತ್ತು ಪರಿಶುದ್ಧ ಹೃದಯ ಹೊಂದಿರುವ ಪುರುಷರಾಗಿದ್ದರು. ಶತ್ರುಗಳ ಒಂದು ಸೈನ್ಯವೇ ಎದುರಿಗೆ ಬಂದರೂ ಯುದ್ಧ ಮೈದಾನದಲ್ಲಿ ತಮ್ಮ ಜಾಗವನ್ನು ಬಿಟ್ಟುಹೋಗದ ಏಕಾಂಗಿ ಮತ್ತು ಧೈರ್ಯಶಾಲಿ ವ್ಯಕ್ತಿಯಾಗಿದ್ದರು. ಅವರು ಜೀವನ ಪೂರ್ತಿ ಬಡತನದಲ್ಲಿ ಕಳೆದರು ಮತ್ತು ಮನುಷ್ಯನಿಗೆ ತಲುಪಬಹುದಾದ ಭಕ್ತಿಯ ಉನ್ನತ ಮಟ್ಟವನ್ನು ತಲುಪಿದ್ದರು. ಸಂಪತ್ತನ್ನು ವಿತರಣೆ ಮಾಡುವುದರಲ್ಲಿಯೂ, ಜನರ ದುಃಖಗಳನ್ನು ದೂರ ಮಾಡುವುದರಲ್ಲಿಯೂ ಅನಾಥರನ್ನು, ದರಿದ್ರರನ್ನು ಮತ್ತು ನೆರೆಕರೆಯವರನ್ನು ಸಹಾಯ ಮಾಡುವುದರಲ್ಲಿಯೂ ಮೊದಲಿಗರಾಗಿದ್ದರು. ಅವರು ಯುದ್ಧಗಳಲ್ಲಿ

ವಿವಿಧ ರೀತಿಯ ಶೌರ್ಯದ ಕೌಶಲ್ಯವನ್ನು ತೋರಿಸಿದ್ದರು. ಬಾಣ ಮತ್ತು ಖಡ್ಗದ ಯುದ್ಧದಲ್ಲಿ ಅವರಿಂದ ಆಶ್ಚರ್ಯಕರವಾದ ಕಾರ್ಯಗಳು ಪ್ರಕಟವಾಗುತ್ತಿದ್ದುವು. ಅದರೊಂದಿಗೆ ಅವರು ಅತ್ಯಂತ ಮಧುರಭಾಷಿಯೂ ಮತ್ತು ವಾಕ್ಚಾತುರ್ಯವಿರುವ ವಾಗ್ಮಿಯೂ ಆಗಿದ್ದರು. ಅವರು ಮಾತುಗಳು ಹೃದಯಾಂತರಾಳಕ್ಕೆ ಇಳಿಯುತ್ತಿತ್ತು. ಅವುಗಳಿಂದ ಮಿದುಳಿನ ತುಕ್ಕು ಸ್ವಚ್ಛವಾಗುತ್ತಿತ್ತು. ಸತ್ಯದ ಪ್ರಕಾಶದಿಂದ ಅವರ ಮುಖ ಬೆಳಗುತ್ತಿತ್ತು. ಅವರು ವಿವಿಧ ರೀತಿಯಲ್ಲಿ ಮಾತುಕತೆ ನಡೆಸಲು ಬಲ್ಲವರಾಗಿದ್ದರು. ಯಾವನಾದರೂ ಅವರೊಡನೆ ವಾದಕ್ಕೆ ಇಳಿದರೆ, ಅವನು ಪರಾಜಿತನಾದ ವ್ಯಕ್ತಿಯ ಹಾಗೆ ಕ್ಷಮೆ ಕೇಳಬೇಕಾಗಿ ಬರುತ್ತಿದ್ದನು. ಅವರು ಎಲ್ಲ ಸದ್ಗುಣಗಳಲ್ಲೂ ವಾಕ್ಚಾತುರ್ಯ ಮತ್ತು ವಾಕ್ಪಟುತ್ವದಲ್ಲೂ ಪರಿಪೂರ್ಣತೆ ಹೊಂದಿದ್ದರು. ಯಾರು ಅವರ ಪರಿಪೂರ್ಣತೆಯನ್ನು ನಿರಾಕರಿಸುತ್ತಾರೋ ಅವರು ನಾಚಿಕೆಗೇಡಿನ ಮಾರ್ಗವನ್ನು ಅವಲಂಬಿಸಿರುವರು. (ಸಿರ್ರುಲ್ ಖಿಲಾಫ, ಉರ್ದು ಅನುವಾದ ಪುಟ–108–110, ರೂಹಾನಿ ಖಝಾಯೀನ್ ಸಂಪುಟ–8, ಪುಟ–358)

ಅನಂತರ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಸ್ಥಾನ ಮತ್ತು ಖಿಲಾಫತಿನ ಬಗ್ಗೆ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಸತ್ಯಾನ್ವೇಷಿಗಳ ಪ್ರತೀಕ್ಷೆಯ ಕೇಂದ್ರಬಿಂಧು, ಉದಾರಿಗಳಿಗೆ ಅತುಲ್ಯವಾದ ಮಾದರಿ ಮತ್ತು ದೇವನ ದಾಸರಿಗೆ ಹುಜ್ಜತುಲ್ಲಾಹ್ ಎಂದರೆ ಅಲ್ಲಾಹನ ಅಸ್ತಿತ್ವಕ್ಕೆ ಸ್ಪಷ್ಟವಾದ ಒಂದು ಪುರಾವೆಯಾಗಿದ್ದರು. ಅದೇ ರೀತಿಯಲ್ಲಿ ಅವರು ತಮ್ಮ ಕಾಲಘಟ್ಟದ ಜನರಲ್ಲಿ ಅತ್ಯುತ್ತಮ ವ್ಯಕ್ತಿ ಮತ್ತು ದೇಶಗಳನ್ನು ಬೆಳಗಿಸುವ ಪ್ರಕಾಶವಾಗಿದ್ದರು. ಆದರೆ ಅವರ ಖಿಲಾಫತಿನ ಕಾಲಘಟ್ಟವು ಶಾಂತಿ ಮತ್ತು ಸಮಾಧಾನದ ಕಾಲವಾಗಿರಲಿಲ್ಲ. ಬದಲಾಗಿ ಫಿತ್ನಗಳ, ಅಕ್ರಮ ಮತ್ತು ದೌರ್ಜನ್ಯಗಳ ತೀವ್ರ ಬಿರುಗಾಳಿಯ ಕಾಲವಾಗಿತ್ತು. ಜನಸಾಮಾನ್ಯರು ಅಲಿ ರಝಿಯಲ್ಲಾಹು ಅನ್‌ಹುರ ಮತ್ತು ಅಬೂ ಸುಫ್‌ಯಾನ್‌ರ ಮಗನ ಖಿಲಾಫತ್ ಬಗ್ಗೆ ಭಿನ್ನಾಭಿಪ್ರಾಯ ಹೊಂದಿದ್ದರು. ಇಬ್ಬರ ಕಡೆಗೂ ಅಚ್ಚರಿಗೊಂಡ ವ್ಯಕ್ತಿಗಳ ಹಾಗೆ ದಿಟ್ಟಿಸಿ ನೋಡುತ್ತಾ ಕುಳಿತ್ತಿದ್ದರು. ಕೆಲವರು ಈ ಇಬ್ಬರನ್ನೂ ಆಕಾಶದ ಫರ್ಖಿತ್ ಎಂಬ ಹೆಸರಿನ ಎರಡು ವಿದೂರ ನಕ್ಷತ್ರಗಳಿಗೆ ಸಮಾನವೆಂದು ಭಾವಿಸುತ್ತಿದ್ದರು ಮತ್ತು ಇಬ್ಬರಿಗೂ ಸಮಾನವಾದ ಸ್ಥಾನವನ್ನು ನೀಡುತ್ತಿದ್ದರು. ಆದರೆ ನಿಜವೇನೆಂದರೆ, ಸತ್ಯ ಅಲಿ ಮುರ್ತಝಾ ರಝಿಯಲ್ಲಾಹು ಅನ್‌ಹುರೊಂದಿಗೆ ಆಗಿತ್ತು. ಯಾರು ಅವರ ಕಾಲದಲ್ಲಿ ಅವರೊಂದಿಗೆ ಯುದ್ಧ ಮಾಡಿದರೋ ಅವರು ವಿದ್ರೋಹ ಮತ್ತು ಅವಿಧೇಯತೆ ತೋರಿಸಿದರು. (ಸಿರ್ರುಲ್ ಖಿಲಾಫ, ಉರ್ದು ಅನುವಾದ, ರೂಹಾನಿ ಖಝಾಯೀನ್, ಸಂಪುಟ–8, ಪುಟ–95–96)

ಅನಂತರ ನಾಲ್ವರು ಖಲೀಫರು ಮಾಡಿದ ಇಸ್ಲಾಮಿನ ಮತ್ತು ಪವಿತ್ರ ಖುರ್‌ಆನಿನ ಸಂರಕ್ಷಣೆ ಹಾಗೂ ಈ ಸಂರಕ್ಷಣೆಯ ಕೆಲಸದಲ್ಲಿ ಅವರು ಮಾಡಿದ ತೋರಿಸಿದ ಉನ್ನತ ಮಟ್ಟದ ಕರ್ತವ್ಯ ನಿರ್ವಹಣೆಯ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಹಝ್ರತ್ ಅಬೂಬಕ್ಕರ್ ಸಿದ್ದೀಖ್ ರಝಿಯಲ್ಲಾಹು ಅನ್‌ಹು, ಹಝ್ರತ್ ಉಮರ್ ಫಾರೂಖ್ ರಝಿಯಲ್ಲಾಹು ಅನ್‌ಹು, ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹು ಮತ್ತು ಹಝ್ರತ್ ಅಲಿ ಮುರ್ತಝಾ ರಝಿಯಲ್ಲಾಹು ಅನ್‌ಹು ಸತ್ಯವಾಗಿಯೂ ಧರ್ಮದ ಸಂರಕ್ಷಕರಾಗಿದ್ದರು. ಇಸ್ಲಾಮಿನ ಎರಡನೇ ಆದಮರಾದ ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು, ಅದೇ ರೀತಿಯಲ್ಲಿ ಹಝ್ರತ್ ಉಮರ್ ಫಾರೂಖ್ ಮತ್ತು ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುಮಾ ಇಸ್ಲಾಮ್ ಧರ್ಮದ ನಿಜವಾದ ನಂಬಿಗಸ್ಥರು ಆಗಿಲ್ಲವಾಗಿದ್ದರೆ, ಪವಿತ್ರ ಖುರ್‌ಆನಿನ ಯಾವುದೇ ಒಂದು ಆಯತ್ತನ್ನು ಕೂಡ ಅಲ್ಲಾಹನ ಕಡೆಯಿಂದ ಅವತೀರ್ಣವಾದದ್ದು ಎಂದು ಹೇಳಲು ಸಾಧ್ಯವಾಗುತ್ತಿರಲಿಲ್ಲ. (ಮಕ್‌ತುಬಾತೆ ಅಹ್ಮದ್, ಸಂಪುಟ–2, ಪುಟ–151, ಮಕ್ತೂಬ್ ಸಂಖ್ಯೆ–2, ಬನಾಮ್ ಹಝ್ರತ್ ನವಾಬ್ ಅಲಿ ಖಾನ್ ಸಾಹಿಬ್(ರ))

ಈ ನಾಲ್ಕು ಖಲೀಫರ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ಅಲ್ಲಾಹನಾಣೆ ಇವರು ಸರ್ವಶ್ರೇಷ್ಠರಾದ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಯಕ್ಕಾಗಿ ಮರಣದ ಮೈದಾನದಲ್ಲಿ ಅಚಲವಾಗಿ ನಿಂತ ವ್ಯಕ್ತಿಗಳಾಗಿದ್ದರು. ಅಲ್ಲಾಹನಿಗಾಗಿ ಅವರು ತಮ್ಮ ತಂದೆಯರನ್ನು ಮತ್ತು ಮಕ್ಕಳನ್ನು ಉಪೇಕ್ಷಿಸಿದರು. ಅವರನ್ನು ಹರಿತವಾದ ಖಡ್ಗದಿಂದ ತುಂಡು ಮಾಡಿದರು. ತಮ್ಮ ಪ್ರಿಯರ ವಿರುದ್ಧವೇ ಯುದ್ಧ ಮಾಡಿದರು. ಅವರ ತಲೆಗಳನ್ನು ಕತ್ತರಿಸಿದರು. ಅಲ್ಲಾಹನ ಮಾರ್ಗದಲ್ಲಿ ತಮ್ಮ ಪರಿಶುದ್ಧ ಸಂಪತ್ತು ಮತ್ತು ಜೀವವನ್ನು ಸಮರ್ಪಿಸಿದರು. ಅದಾಗ್ಯೂ ಅವರು ತಮ್ಮ ಸತ್ಕರ್ಮಗಳ ಕೊರತೆ ಬಗ್ಗೆ ಚಿಂತಿಸಿ ಅಳುತ್ತಿದ್ದರು ಮತ್ತು ಲಜ್ಜಿತರಾಗುತ್ತಿದ್ದರು. ನಾವು ಸತ್ಕರ್ಮ ಮಾಡಿದ್ದೇವೆ ಎಂದು ಹೇಳಿ ಹೆಮ್ಮೆಪಡುತ್ತಿರಲಿಲ್ಲ. ಅವರ ಕಣ್ಣುಗಳು ಸುಖನಿದ್ರೆಯ ಆನಂದವನ್ನು ಎಂದೂ ಅನುಭವಿಸಿರಲಿಲ್ಲ, ಎಂದರೆ ಸಾಕಾಗುವಷ್ಟು ನಿದ್ರೆ ಮಾಡುತ್ತಿರಲಿಲ್ಲ. ಆರಾಮ ದೃಷ್ಟಿಯಲ್ಲಿ ಅತ್ಯಾವಶ್ಯಕವೆಂದು ತೋರುವುದರಷ್ಟು ಮಾತ್ರ ನಿದ್ರಿಸುತ್ತಿದ್ದರು. ಅವರು ಲೌಕಿಕ ಸಂಪತ್ತಿಗೆ ಮೋಹಿತರಾಗಿರಲಿಲ್ಲ. ಹೀಗಿರುವಾಗ ಅವರು ದೌರ್ಜನ್ಯ ಮಾಡುತ್ತಿದ್ದರು, ಧನವನ್ನು ವಶ ಪಡಿಸುತ್ತಿದ್ದರು, ನ್ಯಾಯದಿಂದ ವರ್ತಿಸುತ್ತಿರಲಿಲ್ಲ ಮತ್ತು ಹಿಂಸೆ ಮಾಡುತ್ತಿದ್ದರು ಎಂದು ಅವರ ಬಗ್ಗೆ ಹೇಗೆ ಹೇಳಬಲ್ಲಿರಿ? ಅವರು ವೈಯಕ್ತಿಕ ಅಭಿಲಾಷೆಗಳಿಂದ ಮುಕ್ತಿ ಪಡೆದಿದ್ದರು ಎಂದು ಸಾಬೀತಾದ ಸಂಗತಿಯಾಗಿದೆ. ಅವರು ಸದಾ ಅಲ್ಲಾಹನ ಸನ್ನಿಧಿಯಲ್ಲಿ ಬಿದ್ದಿರುತ್ತಿದ್ದರು. ಅವರು ಅಲ್ಲಾಹನಲ್ಲಿ ಲೀನರಾದ ಜನರಾಗಿದ್ದರು. (ಸಿರ್ರುಲ್ ಖಿಲಾಫ, ಉರ್ದು ಅನುವಾದ ಪುಟ–32, ರೂಹಾನಿ ಖಝಾಯೀನ್, ಸಂಪುಟ–8, ಪುಟ–328)

ಒಟ್ಟಿನಲ್ಲಿ ಈ ನಾಲ್ವರು ಖಲೀಫರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮಗೆ ನೀಡಿದ ಅರಿವು ಮತ್ತು ಪರಿಜ್ಞಾನ ಇದಾಗಿದೆ. ಆ ಶ್ರೇಷ್ಠ ಖಲೀಫರಿಗೆ ಈ ಗೌರವದ ಸ್ಥಾನವನ್ನು ಕೊಡುವವನು ಮಾತ್ರವೇ ಯಥಾರ್ಥ ಮುಸ್ಲಿಮ್ ಎಂದು ಕರೆಯಲ್ಪಡುವನು. ಹಾಗೆ ಮಾಡುವಾಗ ಪರಸ್ಪರದ ಭಿನ್ನತೆಗಳನ್ನು ಕೊನೆಗೊಳಿಸಿ ಏಕ ಸಮುದಾಯದ ಭಾಗವಾಗುವನು. ಇಲ್ಲದಿದ್ದರೆ ನಮ್ಮ ಈ ಭಿನ್ನಾಭಿಪ್ರಾಯಗಳು ಇಸ್ಲಾಮಿಗೆ ಯಾವುದೇ ಪ್ರಯೋಜನವನ್ನು ನೀಡದು. ಆದರೆ, ಶತ್ರುಗಳು ಖಂಡಿತ ಇದರಿಂದ ಪ್ರಯೋಜನ ಪಡೆಯುವರು. ಅವರು ಅದರಿಂದ ಪ್ರಯೋಜನವನ್ನು ಪಡೆಯುವುದನ್ನು ನಾವಿಂದು ನೋಡುತ್ತಲೂ ಇದ್ದೇವೆ. ಆದ್ದರಿಂದ ಈ ಕಾಲದಲ್ಲಿ ಇಸ್ಲಾಮಿನ ಸೇವೆ ಮಾಡಬೇಕಾದರೆ ಮತ್ತು ಇಸ್ಲಾಮಿನ ಸಂರಕ್ಷಣೆ ಮಾಡಲು ಇಚ್ಛಿಸುವರಾದರೆ, ಅದು ಅಲ್ಲಾಹನ ಯೋಧ ಮತ್ತು ಪಹಿಲ್ವಾನರಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಸೇರಿಕೊಂಡು ಮಾತ್ರವೇ ಸಾಧ್ಯವಾಗುವುದು. ಅವರನ್ನು ಅಲ್ಲಾಹನು ಈ ಕೆಲಸಕ್ಕಾಗಿಯೇ ಕಳುಹಿಸಿದ್ದಾನೆ.

ನಾನು ಹೇಳಿದಂತೆ, ಈಗ ನಾವು ಮುಹರ್ರಮ್ ತಿಂಗಳಲ್ಲಿ ಇದ್ದೇವೆ. ಮುಹರ್ರಮ್ ಹತ್ತರಂದು ಹಝ್ರತ್ ಹುಸೈನ್‌ರ ಶಹಾದತ್ ಸಂಬಂಧಿಸಿ ಶಿಯಾ ವಿಭಾಗದವರು ತಮ್ಮ ಭಾವನೆಗಳು ಮತ್ತು ಆವೇಶಗಳನ್ನು ಪ್ರಕಟಿಸುತ್ತಾರೆ. ಹಝ್ರತ್ ಹುಸೈನ್‌ರನ್ನು ಶಹೀದ್ ಮಾಡಿದ್ದು ಖಂಡಿತವಾಗಿಯೂ ಒಂದು ದುಷ್ಟ ಕೃತ್ಯವಾಗಿತ್ತು. ಹಝ್ರತ್ ಹುಸೈನ್ ಮತ್ತು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಬಗ್ಗೆ ತಮ್ಮ ಭಾವನೆಗಳನ್ನು ಶಿಯಾ ವಿಭಾಗದವರು ಇಂತಹ ಸಂದರ್ಭಗಳಲ್ಲಿ ವಿಶೇಷವಾಗಿಯೂ ಮತ್ತು ಸಾಮಾನ್ಯವಾಗಿಯೂ ವ್ಯಕ್ತಪಡಿಸುತ್ತಾರೆ. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಅವರ ಜಮಾಅತಿನವರು ಪ್ರವಾದಿಯ ಕುಟುಂಬದ ಸ್ಥಾನವನ್ನು ಸರಿಯಾಗಿ ಅರಿತಿಲ್ಲ ಎಂದು ಸಾಮಾನ್ಯವಾಗಿ ಭಾವಿಸಲಾಗುತ್ತಿದೆ. ಈ ತಪ್ಪಾದ ಭಾವನೆಯನ್ನು ದೂರೀಕರಿಸಲು ಅಹ್ಮದಿಯಾ ಜಮಾಅತ್ ಯಾವಾಗಲೂ ಪ್ರಯತ್ನಿಸುತ್ತಾ ಇದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ದೃಷ್ಟಿಯಲ್ಲಿ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಸ್ಥಾನ ಮತ್ತು ಪದವಿ ಏನಾಗಿತ್ತು ಎಂದು ಅವರ ಲಿಖಿತಗಳಿಂದ ತಿಳಿದುಬರುತ್ತದೆ. ನಾನು ಈಗ ನಮ್ಮ ಮುಂದಿರಿಸಿದ ಕೆಲವು ಉಲ್ಲೇಖಗಳಿಂದಲೂ ಅದು ಸ್ಪಷ್ಟವಾಗುತ್ತಿದೆ. ಆದರೆ ಬಾಕಿ ಮೂವರು ಖಲೀಫರು ಸಹ ಸತ್ಯದ ಮೇಲೆ ನೆಲೆನಿಂತಿದ್ದರು ಎಂದು ಸಹ ನಾವು ದೃಢವಾಗಿ ನಂಬುತ್ತೇವೆ. ಹೇಗಿದ್ದರೂ ನಾನು ಈಗ ಅದಕ್ಕೆ ಸಂಬಂಧಿಸಿಯೂ ಕೆಲವನ್ನು ಹೇಳುತ್ತೇನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪ್ರಕಾರ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕುಟುಂಬದ ಸ್ಥಾನ ಮತ್ತು ಮಹಿಮೆ ಏನಾಗಿತ್ತು ಮತ್ತು ಅವರು ಜಮಾಅತಿಗೆ ಏನು ಉಪದೇಶವನ್ನು ನೀಡಿದ್ದರು ಎಂದು ಅವರ ಲಿಖಿತಗಳಿಂದ ಮತ್ತು ವಚನಗಳಿಂದ ನಿಮ್ಮ ಮುಂದಿರಿಸುತ್ತೇನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತಮ್ಮ ಗ್ರಂಥವಾದ ಸಿರ್ರುಲ್‌ಖಿಲಾಫದಲ್ಲಿ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು, ಅವರ ಕುಟುಂಬ ಮತ್ತು ಪೈಗಂಬರರ ಕುಟುಂಬದ ಬಗ್ಗೆ ಬರೆದಿರುವರು.

ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಬಗ್ಗೆ ಅವರು ಹೇಳುತ್ತಾರೆ: ಅವರು ದರಿದ್ರರನ್ನು ಮತ್ತು ದುಃಖಿತರನ್ನು ಸಹಾಯ ಮಾಡಲು ಉಪದೇಶಿಸುತ್ತಿದ್ದರು. ಬಡವರಿಗೆ ಮತ್ತು ನಿರ್ಗತಿಕರಿಗೆ ಆಹಾರ ನೀಡಲು ಆಜ್ಞಾಪಿಸುತ್ತಿದ್ದರು. ಅವರು ಅಲ್ಲಾಹನ ಸಾಮೀಪ್ಯ ಗಳಿಸಿದ ದಾಸರಲ್ಲಿ ಒಬ್ಬರಾಗಿದ್ದರು. ಅದರೊಂದಿಗೆ ಅವರು ಪವಿತ್ರ ಖುರ್‌ಆನಿನ ಜ್ಞಾನವನ್ನು ಕರಗತ ಮಾಡಿದ ಶ್ರೇಷ್ಠ ಪುರುಷರಲ್ಲಿ ಸೇರಿದ್ದರು. ಎಂದರೆ, ಪವಿತ್ರ ಖುರ್‌ಆನಿನ ಬಗ್ಗೆ ಅವರಿಗೆ ಅಪಾರವಾದ ಜ್ಞಾನವಿತ್ತು ಮಾತ್ರವಲ್ಲ ಅವರು ಅದರಲ್ಲಿ ಬಹಳ ಮುಂದಿದ್ದರು. ಅವರು ಪವಿತ್ರ ಖುರ್‌ಆನಿನ ಸೂಕ್ಷ್ಮವಾದ ಜ್ಞಾನದಲ್ಲಿ ವಿಸ್ಮಯಕರವಾದ ಪಾಂಡಿತ್ಯವನ್ನು ಪಡೆದಿದ್ದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ದಿವ್ಯದರ್ಶನದಲ್ಲಿ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರೊಡನೆ ನನ್ನ ಭೇಟಿಯಾಯಿತು. ಎಂದರೆ ಎಚ್ಚರದಲ್ಲಿ ಇರುವಾಗಲೇ, ಕನಸಿನಲ್ಲಿ ಅಲ್ಲ. ಅದೇ ಸ್ಥಿತಿಯಲ್ಲಿ ನಾನು ಇರುವಾಗ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ನನಗೆ ಅದೃಶ್ಯ ಕಾರ್ಯಗಳನ್ನು ಅರಿಯುವ ಅಲ್ಲಾಹನ ಗ್ರಂಥವಾದ ಪವಿತ್ರ ಖುರ್‌ಆನಿನ ವ್ಯಾಖ್ಯಾನವನ್ನು ನೀಡಿದರು. ಅವರು ಹೇಳಿದರು, ಇದು ನನ್ನ ವ್ಯಾಖ್ಯಾನವಾಗಿದೆ, ಈಗ ನಾನು ಅದನ್ನು ನಿಮಗೆ ಕೊಡುತ್ತಿದ್ದೇನೆ. ಆದ್ದರಿಂದ ನಿಮಗೆ ಲಭಿಸಿದ ಕಾಣಿಕೆಯ ಕಾರಣ ನಿಮಗೆ ಶುಭಾಶಯಗಳನ್ನು ಅರ್ಪಿಸುತ್ತೇನೆ ಎಂದು ಅವರು ಹೇಳಿದರು. ಆಗ ನಾನು ನನ್ನ ಕೈಯನ್ನು ಚಾಚಿ ಆ ವ್ಯಾಖ್ಯಾನವನ್ನು ಪಡೆದೆ. ನಾನು ಸರ್ವಶಕ್ತನೂ ಕೃಪಾಳೂ ಆದ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಿದೆ. ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಉತ್ತಮ ಮೈಕಟ್ಟಿನ ವ್ಯಕ್ತಿಯಾಗಿದ್ದರು ಎಂದು ನಾನು ಕಂಡೆ. ಅವರು ಪರಿಪಕ್ವ ಮತ್ತು ದೃಢವಾದ ಸ್ವಭಾವವನ್ನು ಹೊಂದಿದ್ದರು. ನಾನು ಅವರನ್ನು ವಿನಯಾನ್ವಿತರೂ ತೇಜಸ್ವಿಯೂ ಮತ್ತು ಪ್ರಕಾಶಮಯಿಯೂ ಆಗಿ ಕಂಡೆನು. ಅಲ್ಲಾಹನಾಣೆ, ಅವರು ಬಹಳ ಪ್ರೀತಿ ಮತ್ತು ವಾತ್ಸಲ್ಯದಿಂದ ನನ್ನನ್ನು ಭೇಟಿಯಾದರು. ಅವರು ನನ್ನನ್ನು ಮತ್ತು ನನ್ನ ವಿಶ್ವಾಸಗಳನ್ನು ತಿಳಿದಿರುವವರು ಎಂದು ನನಗೆ ಅಲ್ಲಾಹನು ತಿಳಿಸಿಕೊಟ್ಟನು. ಶಿಯಾ ವಿಭಾಗದವರೊಡನೆ ನನಗೆ ಭಿನ್ನಾಭಿಪ್ರಾಯವಿರುವ ವಿಶ್ವಾಸ ಮತ್ತು ಆದರ್ಶಗಳು ಸಹ ಅವರಿಗೆ ಗೊತ್ತಿತ್ತು. ಆದರೆ ಅವರು ಆ ಕಾರಣದಿಂದ ಯಾವುದೇ ರೀತಿಯ ಅನಿಷ್ಟತೆ ಮತ್ತು ಅತೃಪ್ತಿಯನ್ನು ತೋರಿಸಲಿಲ್ಲ. ನನ್ನಿಂದ ಅವರು ತನ್ನ ಮುಖವನ್ನು ತಿರುಗಿಸಲಿಲ್ಲ. ಬದಲಿಗೆ ಅವರು ನಿಷ್ಠಾವಂತ ಪ್ರೇಮಿಯ ಹಾಗೆ ಬಹಳ ಪ್ರೀತಿಯಿಂದ ನನ್ನನ್ನು ಭೇಟಿಯಾದರು. ಅವರು ಪರಿಶುದ್ಧ ಹೃದಯ ಹೊಂದಿರುವ ಜನರ ಹಾಗೆ ತಮ್ಮ ಪ್ರೀತಿಯನ್ನು ವ್ಯಕ್ತಪಡಿಸಿದರು. ಅವರೊಂದಿಗೆ ಹಸನ್, ಹುಸೈನ್ ರಝಿಯಯಲ್ಲಾಹು ಅನ್‌ಹುಮ್ ಮತ್ತು ಪ್ರವಾದಿಗಳ ನೇತಾರರಾದ ಖಾತಮುನ್ನಬಿಯ್ಯೀನ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹ ಇದ್ದರು. ಅವರೊಂದಿಗೆ ಅತ್ಯಂತ ಸುಂದರಿಯಾದ, ಸುಶೀಲೆಯಾದ, ಆದರಣೀಯರಾದ, ಅನುಗ್ರಹೀತರಾದ, ಪರಿಶುದ್ಧರಾದ ಗೌರವಾನ್ವಿತರಾದ, ಸಭ್ಯರಾದ, ಅಂತರಂಗ ಮತ್ತು ಬಹಿರಂಗ ಪ್ರಕಾಶದಿಂದ ಕೂಡಿದ ಯುವತಿಯೂ ಇದ್ದರು. ಅವರು ಬಹಳ ದುಃಖದಿಂದ ಇರುವುದನ್ನು ನಾನು ಕಂಡೆ. ಆದರೆ ಅವರು ತನ್ನ ದುಃಖವನ್ನು ಅಡಗಿಸಿಟ್ಟಿದ್ದರು. ಅವರು ಫಾತಿಮತುಝ್ಝುಹ್‌ರಾ ರಝಿಯಲ್ಲಾಹು ಅನ್‌ಹಾ ಆಗಿರುವವರು ಎಂದು ನನಗೆ ತಿಳಿಸಲಾಯಿತು. ಅವರು ನನ್ನ ಬಳಿ ಬಂದರು. ನಾನು ಮಲಗಿದ್ದೆ. ಅವರು ನನ್ನ ಸಮೀಪ ಕುಳಿತುಕೊಂಡರು. ಅವರು ನನ್ನ ತಲೆಯನ್ನು ತನ್ನ ಮಡಿಯಲ್ಲಿ ಇರಿಸಿದರು. ನನ್ನೊಡನೆ ವಾತ್ಸಲ್ಯದಿಂದ ವರ್ತಿಸಿದರು. ಅವರು ನನ್ನ ಯಾವುದೋ ದುಃಖದ ಕಾರಣದಿಂದ ದುಃಖಿತರಾಗಿದ್ದರು ಎಂದು ನನಗೆ ಗೊತ್ತಾಯಿತು. ಮಕ್ಕಳ ವೇದನೆಯ ಸಮಯದಲ್ಲಿ ವಾತ್ಸಲ್ಯ, ಕರುಣೆ ಮತ್ತು ಅಸ್ವಸ್ಥತೆ ತೋರಿಸುವ ತಾಯಂದಿರ ಹಾಗೆ ಅವರು ಚಿಂತಿರಾಗಿದ್ದರು.'

ಈ ಉಲ್ಲೇಖದ ಬಗ್ಗೆ ಕೊಳಕು ಬುದ್ಧಿಯ ಮೌಲವಿಯರು ಆಕ್ಷೇಪಿಸುತ್ತಿರುತ್ತಾರೆ. ತಾಯಿ ಮಕ್ಕಳೊಂದಿಗೆ ತೋರಿಸುವ ವಾತ್ಸಲ್ಯದ ರೀತಿಯಲ್ಲಿ ಹಝ್ರತ್ ಫಾತಿಮ ರಝಿಯಲ್ಲಾಹು ಅನ್‌ಹಾ ಮಸೀಹ್ ಮೌಊದ್ ಅಲೈಹಿಸ್ಸಲಾಮರ ತಲೆಯನ್ನು ಅವರ ಮಡಿಯಲ್ಲಿ ಇರಿಸಿದ್ದರು ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ. ಆದರೆ ಈ ಕೊಳಕು ಬುದ್ಧಿಯುಳ್ಳವರ ಬಗ್ಗೆ ಏನು ಹೇಳಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹಝ್ರತ್ ಫಾತಿಮಾ ರಝಿಯಲ್ಲಾಹು ಅನ್‌ಹುರನ್ನು ನಿಂದಿಸಿದ್ದಾರೆ ಎಂದು ಈ ಮೌಲವಿಗಳ ಮಾತುಗಳನ್ನು ಕೇಳಿ ಜನಸಾಮಾನ್ಯರು ಭಾವಿಸುತ್ತಾರೆ. ಆದರೆ ಹಝ್ರತ್ ಫಾತಿಮಾ ರಝಿಯಲ್ಲಾಹು ಅನ್‌ಹಾ ಓರ್ವ ತಾಯಿ ತೋರಿಸುವಂತಹ ವಾತ್ಸಲ್ಯದ ಬಗ್ಗೆ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮುಂದೆ ಹೇಳುತ್ತಾರೆ:

ಧರ್ಮದ ವಿಷಯದಲ್ಲಿ ಹಝ್ರತ್ ಫಾತಿಮಾರೊಡನೆ ನನ್ನ ಸಂಬಂಧ ಪುತ್ರನಂತೆ ಆಗಿದೆ ಎಂದು ನನಗೆ ತಿಳಿಸಲಾಯಿತು. ನಾನು ನನ್ನ ಸಮುದಾಯದವರ, ದೇಶವಾಸಿಯರ ಮತ್ತು ಶತ್ರುಗಳ ಹಿಂಸೆಯನ್ನು ಅನುಭವಿಸಬೇಕಾಗಿ ಬರುವುದು ಎಂಬುದರಿಂದ ಅವರು ದುಃಖಿತರಾಗಿದ್ದರು ಎಂದು ನನಗೆ ಗೊತ್ತಾಯಿತು. ನನ್ನ ಮಗನಿಗೆ ಈ ಎಲ್ಲ ದೌರ್ಜನ್ಯಗಳನ್ನು ನೋಡಬೇಕಾಗಿ ಬರುವುದು ಎಂಬುದರ ಬಗ್ಗೆ ಚಿಂತಿಸಿ ಹಝ್ರತ್ ಫಾತಿಮಾ ರಝಿಯಲ್ಲಹು ಅನ್‌ಹಾ ದುಃಖಿತರಾಗಿದ್ದರು. ಅನಂತರ ಹಸನ್ ಮತ್ತು ಹುಸೈನ್ ಇಬ್ಬರೂ ನನ್ನ ಸಮೀಪ ಬಂದರು. ಸಹೋದರರ ಹಾಗೆ ನನ್ನೊಡನೆ ತಮ್ಮ ಪ್ರೀತಿಯನ್ನು ವ್ಯಕ್ತಪಡಿಸುತ್ತಿದ್ದರು. ಸಹಾನುಭೂತಿಯಿಂದ ನನ್ನೊಡನೆ ಭೇಟಿಯಾದರು. ಇದು ನಾನು ಎಚ್ಚರದಲ್ಲಿರುವಾಗಲೇ ಕಂಡ ಒಂದು ದಿವ್ಯದರ್ಶನವಾಗಿತ್ತು. ಇದನ್ನು ನಾನು ಕಂಡು ಬಹಳ ವರ್ಷಗಳು ಕಳೆದುಹೋಗಿವೆ. ನನಗೆ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಮತ್ತು ಹಝ್ರತ್ ಹುಸೈನ್ ರಝಿಯಲ್ಲಾಹು ಅನ್‌ಹುರೊಡನೆ ಒಂದು ಸೂಕ್ಷ್ಮವಾದ ಸಾಮ್ಯತೆಯಿದೆ. ಈ ಹೋಲಿಕೆಯ ನೈಜತೆಯನ್ನು ಪೂರ್ವ ಪಶ್ಚಿಮಗಳ ಪ್ರಭುವಾದ ಅಲ್ಲಾಹನಲ್ಲದೆ ಬೇರೆ ಯಾರೂ ತಿಳಿಯದು. ನಾನು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಮತ್ತು ಅವರ ಇಬ್ಬರು ಮಕ್ಕಳನ್ನು ಪ್ರೀತಿಸುತ್ತೇನೆ. ಅವರನ್ನು ಶತ್ರುಗಳಾಗಿ ಕಾಣುವವರನ್ನು ನಾನು ನನ್ನ ಶತ್ರುಗಳಾಗಿ ಕಾಣುತ್ತೇನೆ. ಆದರೆ ನಾನು ಕಠಿಣವಾಗಿ ವರ್ತಿಸುವವನಲ್ಲ. ಅಲ್ಲಾಹನು ನನಗೆ ಸ್ಪಷ್ಟವಾಗಿ ತಿಳಿಸಿಕೊಟ್ಟ ಸಂಗತಿಗಳಿಂದ ನಾನು ಮುಖ ತಿರುಗಿಸಲಾರೆನು. ಇನ್ನೊಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ಇಮಾಮ್ ಹುಸೈನ್ ರಝಿಯಲ್ಲಾಹು ಅನ್‌ಹು ಮತ್ತು ಹಝ್ರತ್ ಈಸಾ ಅಲೈಹಿಸ್ಸಲಾಮ್‌ರ ಬಗ್ಗೆ ನಾನು ನನ್ನ ಒಂದು ಖಸೀದದಲ್ಲಿ ಬರೆದ ಪಂಕ್ತಿಗಳು ಮಾನುಷಿಕ ಕಾರ್ಯವಾಗಿರಲಿಲ್ಲ. ಅದು ಅಲ್ಲಾಹನು ನನಗೆ ತಿಳಿಸಿಕೊಟ್ಟ ಸಂಗತಿಯಾಗಿದೆ. ಪರಿಪೂರ್ಣತೆ ಸಿದ್ಧಿಸಿದ ವ್ಯಕ್ತಿಗಳ ಮತ್ತು ಸನ್ಮಾರ್ಗಿಯರ ಬಗ್ಗೆ ಕೆಟ್ಟದಾಗಿ ಹೇಳುವವನು ಕೊಳಕನಾಗಿದ್ದಾನೆ. ಹಝ್ರತ್ ಹುಸೈನ್ ಮತ್ತು ಹಝ್ರತ್ ಈಸಾ ಅಲೈಹಿಸ್ಸಲಾಮ್‌ರಂತಹ ಸನ್ಮಾರ್ಗಿಗಳನ್ನು ಬೈದುಕೊಂಡು ಒಬ್ಬ ವ್ಯಕ್ತಿ ಒಂದು ರಾತ್ರಿ ಸಹ ಸರಿಯಾಗಿ ಜೀವಂತವಿರಲು ಸಾಧ್ಯವಿಲ್ಲವೆಂದು ನಾನು ದೃಢವಾಗಿ ನಂಬುತ್ತೇನೆ. **ಮನ್ ಆದ ಲೀ ವಲಿಯ್ಯನ್ ಫಖದ್ ಅಧಂತುಹು ಬಿಲ್‌ಹರ್‌ಬ್**. ಅಲ್ಲಾಹನು ತಕ್ಷಣವೇ ಅವನನ್ನು ಹಿಡಿಯುತ್ತಾನೆ. ದೈವಿಕವಾದ ಕಾರ್ಯಗಳನ್ನು ಮನವರಿಕೆ ಮಾಡುವವನು ಮತ್ತು ಅಲ್ಲಾಹನ ಯುಕ್ತಿಗಳ ಬಗ್ಗೆ ಚಿಂತಿಸುವವನು ಅನುಗ್ರಹೀತನು.

(ಏಜಾಝುಲ್ ಮಸೀಹ್, ಅನುಬಂಧ ನಝೂಲುಲ್ ಮಸೀಹ್, ರೂಹಾನಿ ಖಝಾಯೀನ್, ಸಂಪುಟ–19, ಪುಟ–149)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದ ಹದೀಸಿನ ಅರ್ಥವೇನೆಂದರೆ, ಯಾರು ಅಲ್ಲಾಹನ ಮಿತ್ರನೊಂದಿಗೆ ಶತ್ರುತ್ವವಿರುಸುತ್ತಾನೋ ಅವನೊಡನೆ ಅಲ್ಲಾಹನು ಯುದ್ಧ ಮಾಡುವುದಾಗಿ ಘೋಷಿಸುವನು. **ಮನ್ ಆದ ಲೀ ವಲಿಯ್ಯನ್ ಫಖದ್ ಆಧನ್‌ತಹೂ ಬಿಲ್‌ಹರ್‌ಬ್**. ಸ್ವಂತ ಮನೆಯಲ್ಲಿ ಅಥವಾ ಅನ್ಯರು ಇಲ್ಲದ ವೈಯಕ್ತಿಕ ಸಭೆಗಳಲ್ಲಿ ಯಾರೊಡನೆಯಾದರೂ ತನ್ನ ಪ್ರೀತಿಯನ್ನು ವ್ಯಕ್ತಪಡಿಸುವಾಗ, ಅದು ಹೃದಯದಿಂದ ಬಂದ ಪ್ರಾಮಾಣಿಕವಾದ ದನಿಯಾಗಿರುತ್ತದೆ. ಸತ್ಯದಲ್ಲಿ ಅಲ್ಲಾಹನು ಉನ್ನತ ಸ್ಥಾನವನ್ನು ನೀಡಿದವರ ಪ್ರತಿಯೊಂದು ಪದ ಹೃದಯದ ದನಿಯಾಗಿರುತ್ತದೆ. ಆದರೂ ಮನೆಯಲ್ಲಿ ಇದ್ದುಕೊಂಡು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಭಾವನೆಗಳು ಏನಾಗಿತ್ತು ಎಂದು ಆಕ್ಷೇಪಕರು ಅರಿಯಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತಮ್ಮ ಲಿಖಿತಗಳಲ್ಲಿ ಮತ್ತು ಸಾರ್ವಜನಕ ಸಭೆಗಳಲ್ಲಿ ಮಾತ್ರ ಪೈಗಂಬರರ ಕುಟುಂಬದವರೊಡನೆ ಅಥವಾ ಹಝ್ರತ್ ಇಮಾಮ್ ಹುಸೈನ್ ರಝಿಯಲ್ಲಾಹು ಅನ್‌ಹುರೊಡನೆ ಅವರಿಗೆ ಇದ್ದ ತನ್ನ ಪ್ರೀತಿಯನ್ನು ವ್ಯಕ್ತಪಡಿಸಿರಲಿಲ್ಲ. ಬದಲಿಗೆ ಮನೆಯಲ್ಲೂ ತಮ್ಮ ಮಕ್ಕಳೊಂದಿಗೆ ಕುಳಿತುಕೊಂಡು ಸಹ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಿದ್ದರು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: "ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಅವರಿಗೆ ಇದ್ದ ಪ್ರೇಮದ ಕಾರಣದಿಂದಲೇ, ಪೈಗಂಬರರ ಕುಟುಂಬ, ಮಕ್ಕಳು ಮತ್ತು ಸಹಾಬಿಯರೊಂದಿಗೆ ಸಹ ಅವರಿಗೆ ಅಪರಿಮಿತವಾದ ಪ್ರೇಮವಿತ್ತು. ಒಂದು ಸಲ ಮುಹರ್ರಮ್ ಮಾಸದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತಮ್ಮ ತೋಟದಲ್ಲಿ ಒಂದು ಮಂಚದಲ್ಲಿ ಮಲಗಿದ್ದರು. ಅವರು ನನ್ನ ತಂಗಿಯಾದ ಮುಬಾರಕ ಬೇಗಮ್ ಮತ್ತು ನನ್ನ ತಮ್ಮನಾದ ಮುಬಾರಕ್ ಅಹ್ಮದ್‌ರನ್ನು ಅವರ ಬಳಿಗೆ ಕರೆದು ಹೀಗೆ ಹೇಳಿದರು: ಬನ್ನಿ, ನಾನು ನಿಮಗೆ ಮುಹರ್ರಮಿನ ಕಥೆಯನ್ನು ಹೇಳುತ್ತೇನೆ. ಅನಂತರ ಬಹಳ ವೇದನೆಯಿಂದ ಹಝ್ರತ್ ಇಮಾಮ್ ಹುಸೈನ್ ರಝಿಯಲ್ಲಾಹು ಅನ್‌ಹುರ ಶಹಾದತಿನ ಘಟನೆಯನ್ನು ಅವರಿಗೆ ಹೇಳಿಕೊಟ್ಟರು. ಅವರು ಈ ಘಟನೆಯನ್ನು ಹೇಳಿಕೊಡುತ್ತಿರುವಾಗ ಅವರ ಕಣ್ಣುಗಳಿಂದ ಧಾರೆಯಾಗಿ ಕಣ್ಣೀರು ಸುರಿಯುತ್ತಿತ್ತು. ಅವರ ತಮ್ಮ ಬೆರಳುಗಳ ತುದಿಯಿಂದ ಕಣ್ಣೀರನ್ನು ಒರೆಸುತ್ತಿದ್ದರು. ಈ ವೇದನಾಜನಕವಾದ ಕಥೆಯನ್ನು ಹೇಳಿ ಮುಗಿಸಿದ ನಂತರ ಅವರು ಬಹಳ ನೋವಿನಿಂದ ಹೀಗೆ ಹೇಳಿದರು. ಕೊಳಕನಾದ ಯಝೀದ್ ಇಂತಹ ಹಿಂಸೆಯನ್ನು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೊಮ್ಮಗನೊಂದಿಗೆ ಮಾಡಿಸಿದ್ದನು. ಆದರೆ ಅಲ್ಲಾಹನು ಸಹ ಈ ದುಷ್ಟರನ್ನು ಬಹಳ ಬೇಗನೆ ಹಿಡಿದು ಶಿಕ್ಷಿಸಿದನು. ಈ ಮಾತುಗಳನ್ನು ಹೇಳುವಾಗ ಅವರು ಅಸಾಧಾರಣವಾದೊಂದು ಅವಸ್ಥೆಯಲ್ಲಿ ಇದ್ದರು. ತಮ್ಮ ನೇತಾರರಾದ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರೀತಿಯ ಮಗನ ವೇದನಾಜನಕ ಶಹಾದತಿನ ಬಗ್ಗೆ ಆಲೋಚಿಸಿ ಅವರ ಹೃದಯ ಅಸ್ವಸ್ಥತೆಗೊಂಡಿತು. ಇದೆಲ್ಲವೂ

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಅವರಿಗಿದ್ದ ಪ್ರೇಮದ ಕಾರಣದಿಂದಾಗಿತ್ತು. (ಸೀರತೆ ತಯ್ಯಿಬ, ಹಝ್ರತ್ ಮಿರ್ಝ ಬಶೀರ್ ಅಹ್ಮದ್ ಸಾಹಿಬ್(ರ), ಪುಟ–36–37)

ಇದೇ ಘಟನೆಯನ್ನು ಸ್ವತಃ ಹಝ್ರತ್ ನವಾಬ್ ಮುಬಾರಕ ಬೇಗಮ್ ಸಾಹಿಬ ರಝಿಯಲ್ಲಾಹು ಅನ್‌ಹು ಒಂದೆಡೆ ವಿವರಿಸಿದ್ದಾರೆ. ಏಕೆಂದರೆ ಇದು ಅವರಿಗೆ ಸಂಬಂಧಿಸಿದ ಘಟನೆಯಾಗಿತ್ತು. ಅವರು ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತೋಟದಲ್ಲಿರುವ ಒಂದು ಮಂಚದಲ್ಲಿ ಮಲಗಿದ್ದರು. ನಾನು ಮತ್ತು ಮುಬಾರಕ್ ಒಂದು ಚಿಕ್ಕ ಆಮೆಯನ್ನು ಹಿಡಿದುಕೊಂಡು ಅವರಿಗೆ ತೋರಿಸಲು ಅದನ್ನು ಕೊಂಡುಬಂದೆವು. ಅವರು ಅದನ್ನು ಗಮನಿಸದೆ ಹೀಗೆ ಹೇಳಿದರು: ಬನ್ನಿ, ನಾನು ನಿಮಗೆ ಮುಹರ್ರಮಿನ ಕಥೆಯನ್ನು ಹೇಳುತ್ತೇನೆ. ಆಗ ನಾವಿಬ್ಬರೂ ಅವರ ಸಮೀಪ ಕುಳಿತುಕೊಂಡೆವು. ಅದು ಮುಹರ್ರಮ್ ಮಾಸದ ಮೊದಲಿನ ಹತ್ತು ದಿವಸಗಳ ಸಮಯವಾಗಿತ್ತು. ಅವರು ಹಝ್ರತ್ ಇಮಾಮ್ ಹುಸೈನ್ ರಝಿಯಲ್ಲಾಹು ಅನ್‌ಹುರ ಶಹಾದತಿನ ಘಟನೆಯನ್ನು ಹೇಳಲು ಶುರುಮಾಡಿದರು. ಅವರು ಹೇಳಿದರು, ನಮ್ಮ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೊಮ್ಮಗನನ್ನು ಆ ದುಷ್ಟರು ಹಸಿವೆ ಮತ್ತು ಬಾಯಾರಿಕೆಯ ಸ್ಥಿತಿಯಲ್ಲಿ ಕರ್ಬಲದ ಮೈದಾನದಲ್ಲಿ ಶಹೀದ್ ಮಾಡಿದರು. ಆ ದಿನ ಆಕಾಶ ಕೆಂಪುಗಟ್ಟಿತ್ತು. ನಾಲ್ವತ್ತು ದಿವಸಗಳ ಒಳಗೆ ಅಲ್ಲಾಹನ ಕೋಪ ಆ ಕೊಲೆಗಾರರ ಮತ್ತು ಹಿಂಸಕರ ಮೇಲೆ ಎರಗಿತ್ತು. ಕೆಲವರು ಕುಷ್ಠರೋಗಿಯಾದರು, ಹಲವರಿಗೆ ಹಲವು ರೀತಿಯ ಶಿಕ್ಷೆ ಎರಗಿತ್ತು. ಯಝೀದ್‌ನನ್ನು ಯಝೀದ್ ಪಲೀದ್ ಎಂದು ಹೇಳುತ್ತಿದ್ದರು. ಎಂದರೆ ಕೊಳಕನಾದ ಯಝೀದ್ ಎಂದು. ಬಹಳ ದೀರ್ಘವಾಗಿ ಈ ಘಟನೆಯ ಬಗ್ಗೆ ಅವರು ವಿವರಿಸಿದ್ದರು. ಇದು ಹೇಳುತ್ತಿದ್ದಾಗ ಅವರು ಭಾವುಕರಾಗಿದ್ದರು. ಕಣ್ಣೀರು ಸುರಿಯುತ್ತಿತ್ತು. ಅದನ್ನು ಅವರು ತಮ್ಮ ತೋರುಬೆರಳಿಂದ ಒರೆಸುತ್ತಿದ್ದರು. (ತೆಹ್‌ರೀರಾತೆ ಮುಬಾರಕ, ಹಝ್ರತ್ ಸಯ್ಯಿದಃ ನವಾಬ್ ಮುಬಾರಕ ಬೇಗಮ್ ಸಾಹಿಬ, ಪುಟ–222)

ಈ ಹಿಂಸೆಯ ಕಥೆಯನ್ನು ಒಬ್ಬ ಮನುಷ್ಯನು ಕೇಳುವಾಗಲೇ ದುಃಖದಿಂದ ರೋಮಾಂಚನವಾಗುತ್ತದೆ. ಶತ್ರುಗಳು ಮೇಲುಗೈ ಸಾಧಿಸಿದ್ದಾಗಿ ಹಝ್ರತ್ ಇಮಾಮ್ ಹುಸೈನ್ ರಝಿಯಲ್ಲಾಹು ಅನ್‌ಹು ಕಂಡಾಗ ಅವರು ತಮ್ಮ ಕುದುರೆಯನ್ನು ಫರಾತ್ ನದಿಯ ದಿಕ್ಕಿಗೆ ತಿರುಗಿಸಲು ಪ್ರಯತ್ನಿಸಿದರು. ಆದರೆ ಅವರನ್ನು ಮಾರ್ಗದಲ್ಲಿ ತಡೆಯಲಾಯಿತು. ಒಬ್ಬ ವ್ಯಕ್ತಿ ಅವರ ಮೇಲೆ ಬಾಣ ಹೂಡಿದನು. ಅದು ಅವರ ಗಲ್ಲದ ಮೇಲೆ ತಗುಲಿತು. ಅವರು ಅದರಿಂದ ತೀವ್ರವಾಗಿ ಗಾಯಗೊಂಡರು. ಅನಂತರ ಆಕ್ರಮಣಕಾರಿಗಳು ಇನ್ನೂ ಹೆಚ್ಚಿನ ಹಲ್ಲೆ ನಡೆಸಿದ್ದರು. ಅವರ ಮೇಲೆ ಹಲ್ಲೆ ನಡೆಸಿ ಕೊನೆಗೆ ಶಹೀದ್ ಮಾಡಿದರು. ವರದಿಗಾರ ವಿವರಿಸುತ್ತಾರೆ: ಅವರು ಶಹೀದ್ ಆಗುವ ಸ್ವಲ್ಪ ಮುಂಚೆ ಹೀಗೆ ಹೇಳಿದ್ದಾಗಿ ನಾನು ಕೇಳಿದೆ: ನನ್ನನ್ನು ಕೊಲ್ಲುವುದರಿಂದ ಅಲ್ಲಾಹನು ನಿಮ್ಮೊಂದಿಗೆ ಎಷ್ಟು ಕೋಪಗೊಳ್ಳುವನೋ ಅಷ್ಟು ಕೋಪವನ್ನು ಅಲ್ಲಾಹನು ಬೇರೆ ಯಾವುದೇ ದೇವದಾಸರ ಕೊಲೆಯ ಸಂದರ್ಭದಲ್ಲಿ ತೋರಿಸಲಿಕ್ಕಿಲ್ಲ. ಅಲ್ಲಾಹನಾಣೆ, ಅಲ್ಲಾಹನು ನಿಮ್ಮನ್ನು ನಿಂದಿತರನ್ನಾಗಿ ಮಾಡಿ ನನ್ನ ಮೇಲೆ ಕೃಪೆ ತೋರಿಸುವನು. ನೀವು ದಂಗುಗೊಳ್ಳುವ ರೀತಿಯಲ್ಲಿ ಅಲ್ಲಾಹನು ಇದರ ಪ್ರತೀಕಾರವನ್ನು ಮಾಡುವನು. ಈ ದುಷ್ಟರು ಅವರನ್ನು ಶಹೀದ್ ಮಾಡಿದ ನಂತರ ಡೇರಗಳಿಗೆ ಮರಳಿ ಅಲ್ಲಿದ್ದ ಸ್ತ್ರೀಯರ ಶಿರೋವಸ್ತ್ರಗಳನ್ನು ಕಳಚಿದರು. ಕುದುರೆಯ ಮೇಲೆ ಸವಾರರಾಗಿ ಇಮಾಮ್ ಹುಸೈನರ ಮೃತಶರೀರದ ಮೇಲಿಂದ ಹೋಗಲು ಯಾರು ಸಿದ್ಧರಿದ್ದಾರೆ ಎಂದು ಶತ್ರುಗಳ ಕಮಾಂಡರ್ ಜನರನ್ನು ಕರೆದು ಕೇಳಿದನು. ಹತ್ತು ಕುದುರೆ ಸವಾರರು ಇದಕ್ಕಾಗಿ ತಯಾರಾದರು ಹಾಗೂ ಅವರ ಮೃತಶರೀರದ ಮೇಲಿಂದ ದಾಟಿ ಅದನ್ನು ತುಳಿದು ನಾಶ ಮಾಡಿದರು. ಅವರ ಎಲುಬುಗಳನ್ನು ಮತ್ತು ಪಕ್ಕೆಲುಬುಗಳನ್ನು ಪುಡಿಪುಡಿಯನ್ನಾಗಿ ಮಾಡಿದರು. ಒಂದು ವರದಿಯ ಪ್ರಕಾರ ಅವರ ಶರೀರದಲ್ಲಿ 33 ಗಾಯಗಳು ಈಟಿಗಳಿಂದ ಮತ್ತು 43 ಗಾಯಗಳು ಖಡ್ಗಗಳಿಂದ ಆಗಿದ್ದುವು. ಇದಲ್ಲದೆ ಬಾಣಗಳಿಂದ ಆದ ಗಾಯಗಳು ಬೇರೆಯೂ ಇದ್ದುವು. ಅನಂತರ ಅವರ ತಲೆಯನ್ನು ಕಡಿದು ಗವರ್ನರ್ ಬಳಿಗೆ ಕೊಂಡುಹೋಗಲಾಯಿತು. ಅವನು ಆ ತಲೆಯನ್ನು ಕೂಫ ಪಟ್ಟಣದಲ್ಲಿ ನೇತು ಹಾಕಿದನು. ಅವರು ಹಿಂಸೆಯ ಎಲ್ಲೆಯನ್ನು ಮೀರಿದ್ದರು. (ತಾರೀಖ್ ತಿರಬರಿ, ಸಂಪುಟ–4, ಅನುವಾದ ಪುಟ–253 ರಿಂದ 257,260, ದಅರುಲ್ ಇಶಾಅತ್ ಕರಾಚಿ 2003) (ತಾರೀಖೆ ಇಸ್ಲಾಮ್, ಭಾಗ–2, ಅಕ್ಬರ್ ಶಾಹ್ ನಜೀಬಬಾದಿ, ಪುಟ–76, ನಫೀಸ್ ಅಕಾಡಮಿ ಉರ್ದು ಬಾಝಾರ್ ಕರಾಚಿ 1998)

ಅತ್ಯಂತ ಕೀಳುಮಟ್ಟದ ಶತ್ರು ಸಹ ಹೀಗೆ ಮಾಡಲಾರನು. ಇಲ್ಲಿ ನಾನು ಇದನ್ನು ಸಂಕ್ಷೇಪವಾಗಿ ವಿವರಿಸಿರುವನು. ಈ ಘಟನೆಯನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಿವರಿಸುವಾಗ ದುಃಖದಿಂದ ಅವರ ಕಣ್ಣುಗಳಿಂದ ಧಾರೆಧಾರೆಯಾಗಿ ಕಣ್ಣೀರು ಸುರಿಯುತ್ತಿತ್ತು. ನಾವು ಪೈಗಂಬರರ ಕುಟುಂಬವನ್ನು ಪ್ರೀತಿಸುವುದಿಲ್ಲ ಮತ್ತು ಅವರ ಬಗ್ಗೆ ಸರಿಯಾಗಿ ಗ್ರಹಿಸಿಲ್ಲ ಎಂದು ಹೇಗೆ ಹೇಳಬಲ್ಲಿರಿ? ಇಷ್ಟು ಮಾತ್ರವಲ್ಲ, ಒಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಬಹಳ ಕಠಿಣವಾದ ರೀತಿಯಲ್ಲಿ ಜಮಾಅತಿಗೆ ಉಪದೇಶಿಸಿದ್ದರು. ಹಝ್ರತ್ ಇಮಾಮ್ ಹುಸೈನ್ ರಝಿಯಲ್ಲಾಹು ಅನ್‌ಹುರ ಬಗ್ಗೆ ಯಾರೋ ಒಬ್ಬರು ಕೆಟ್ಟ ಮಾತುಗಳನ್ನಾಡಿದ್ದಾರೆ ಎಂದು ಅವರಿಗೆ ಗೊತ್ತಾದಾಗ ಅವರು ಹೀಗೆ ಹೇಳಿದರು: ಹಝ್ರತ್ ಇಮಾಮ್ ಹುಸೈನ್ ರಝಿಯಲ್ಲಾಹು ಅನ್‌ಹು ಖಲೀಫರಾದ ಯಝೀದಿನ ಕೈಯಲ್ಲಿ ಬೈಅತ್ ಮಾಡದೆ ಅವಿಧೇಯತೆ ತೋರಿಸಿದ್ದರು ಮತ್ತು ಯಝೀದ್ ಈ ವಿಷಯದಲ್ಲಿ ಸತ್ಯದ ಮೇಲೆ ನೆಲೆನಿಂತಿದ್ದನು ಎಂದು ನನ್ನ ಜಮಾಅತಿನಲ್ಲಿ ಸೇರಿರುವರು ಎಂದು ಸ್ವತಃ ವಾದಿಸುವ ಕೆಲವು ಮೂಢ ಜನರು ಹೇಳಿದ್ದಾಗಿ ನನಗೆ ಒಂದು ಪೋಸ್ಟ್ ಕಾರ್ಡ್ ಮೂಲಕ ಮಾಹಿತಿ ಲಭಿಸಿದೆ. **ಲಾನತುಲ್ಲಾಹಿ ಅಲಲ್ ಖಾಧಿಬೀನ್**. ನನ್ನ ಜಮಾಅತಿನ ಸಜ್ಜನರು ಎಂದಿಗೂ ಇಂತಹ ಕಠೋರ ಮಾತುಗಳನ್ನು ಹೇಳಲಾರರು. ಹಲವು ಶಿಯಾ ಜನರು ತಮ್ಮ ಬೈಗುಳಗಳಲ್ಲಿ ನನ್ನನ್ನು ಸಹ ಈಗ ಒಳಪಡಿಸಿದ್ದಾರೆ. ಆದ ಕಾರಣ ಯಾರೋ ಒಬ್ಬ ಅಸಭ್ಯನ ಬುದ್ಧಿಹೀನವಾದ ಮಾತಿಗೆ ಮರುತ್ತರ ಕೊಡುತ್ತಾ ನಮ್ಮ ಜಮಾಅತಿನ ವ್ಯಕ್ತಿ ಇಂತಹ ಮೂಢ ಮಾತುಗಳನ್ನು ಹೇಳಿರಬಹುದು ಎಂದು ನಾನು ಯೋಚಿಸುತ್ತೇನೆ. ಕೆಲವು ಕ್ರೈಸ್ತರು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ದೂಷಿಸುವಾಗ ಕೆಲವು ಮೂಢರಾದ ಮುಸ್ಲಿಮರು ಅದಕ್ಕೆ ಉತ್ತರವಾಗಿ ಹಝ್ರತ್ ಈಸಾ ಅಲೈಹಿಸ್ಸಲಾಮರ ಬಗ್ಗೆ ಕಠಿಣ ಪದಗಳನ್ನು ಪ್ರಯೋಗಿಸುತ್ತಾರೆ. ಅದೇ ರೀತಿಯಲ್ಲಿ ನನ್ನ ಜಮಾಅತಿನವರು ಮಾಡಿರಬಹುದು ಎಂದು ನಾನು ಊಹಿಸುತ್ತೇನೆ. ಹೇಗಿದ್ದರೂ ನಾನು ಈ ನೋಟೀಸ್ ಮೂಲಕ ನನ್ನ ಜಮಾಅತಿನವರಿಗೆ ತಿಳಿಸುತ್ತೇನೆ. ಯಝೀದ್ ಒಬ್ಬ ಮಲಿನ ಸ್ವಭಾವದ ಭೂಮಿಯ ಕ್ರಿಮಿಯೂ ದುಷ್ಟನೂ ಆಗಿದ್ದನು. ಸತ್ಯವಿಶ್ವಾಸಿ ಎಂದು ಕರೆಯಲು ಸಾಧ್ಯವಾದ ಯಾವುದೇ ಗುಣ ಅವನಲ್ಲಿ ಇರಲಿಲ್ಲ. ಮೂಮಿನ್ ಆಗುವುದು ಅಷ್ಟು ಸುಲಭದ ಕಾರ್ಯವಲ್ಲ. ಇಂತಹ ವ್ಯಕ್ತಿಗಳ ಬಗ್ಗೆ ಅಲ್ಲಾಹನು ಹೇಳುತ್ತಾನೆ: ಖಾಲತಿಲ್ ಆರಾಬು ಆಮನ್ನ. ಖುಲ್ಲಮ್ ತೂಮಿನೂ ವಲಾಕಿನ್ ಖೂಲೂ ಅಸ್‌ಲಮ್‌ನಾ. ಯಾರ ಕರ್ಮಗಳು ಅವರ ವಿಶ್ವಾಸದ ಬಗ್ಗೆ ಸಾಕ್ಷ್ಯ ನುಡಿಯುತ್ತವೋ, ಯಾರ ಹೃದಯದಲ್ಲಿ ಸತ್ಯವಿಶ್ವಾಸ ಬರೆಯಲ್ಪಟ್ಟಿದಿಯೋ, ಯಾರು ಅಲ್ಲಾಹನಿಗೆ ಮತ್ತು ಅಲ್ಲಾಹನ ಸಂಪ್ರೀತಿಗೆ ಎಲ್ಲ ವಸ್ತುಗಳಿಗಿಂತ ಆದ್ಯತೆ ನೀಡುತ್ತಾನೋ, ಯಾರು ದೇವಭಕ್ತಿಯ ಸೂಕ್ಷ್ಮ ಮತ್ತು ಇಕ್ಕಟ್ಟಾದ ಮಾರ್ಗಗಳನ್ನು ಅಲ್ಲಾಹನಿಗಾಗಿ ಸ್ವೀಕರಿಸುತ್ತಾನೋ, ಯಾರು ಅಲ್ಲಾಹನ ಪ್ರೇಮದಲ್ಲಿ ಮಗ್ನನಾಗುತ್ತಾನೋ, ಅಲ್ಲಾಹನ ಮಾರ್ಗದಲ್ಲಿ ಒಂದು ಮೂರ್ತಿಯ ಹಾಗೆ ತಡೆಯಾಗಿ ನಿಲ್ಲುವ ಎಲ್ಲ ಸಂಗತಿಗಳನ್ನು, ಅದು ತನ್ನ ದುಃಸ್ವಭಾವವಾದರೂ ದುಷ್ಕರ್ಮವಾದರೂ ಅಜಾಗರೂಕತೆಯಾದರೂ ಮಡಿವಂತಿಕೆಯಾದರೂ ಇವುಗಳೆಂದೆಲ್ಲ ಅವರು ತಮ್ಮನ್ನು ಬಹಳ ದೂರವಿರಿಸುತ್ತಾರೆ. ಆದರೆ ದೌರ್ಭಾಗ್ಯನಾದ ಯಝೀದ್‌ನಿಗೆ ಇಂತಹ ಉತ್ತಮಗುಣಗಳು ಎಲ್ಲಿಂದ ಸಿಗಲು ಸಾಧ್ಯ. ಲೋಕದ ಮೇಲೆ ಅವನಗೆ ಇದ್ದ ಪ್ರೇಮ ಅವನನ್ನು ಅಂಧನನ್ನಾಗಿ ಮಾಡಿತ್ತು. ಆದರೆ ಹುಸೈನ್ ರಝಿಯಲ್ಲಾಹು ಅನ್‌ಹು ಅತ್ಯಂತ ಪರಿಶುದ್ಧರಾಗಿದ್ದರು. ಅಲ್ಲಾಹನು ತನ್ನ ಕೈಯಿಂದಲೇ ಪರಿಶುದ್ಧಗೊಳಿಸಿದ ಮತ್ತು ತನ್ನ ಪ್ರೇಮದಿಂದ ಅನುಗ್ರಹಿಸಿದ ವರಿಷ್ಠದಾಸರಲ್ಲಿ ಅವರು ಸೇರಿರುವರು. ಅವರು ನಿಸ್ಸಂಶಯವಾಗಿಯೂ ಸ್ವರ್ಗದ ನೇತಾರರಲ್ಲಿ ಸೇರಿರುವರು. ಅವರೊಡನೆ ಅಲ್ಪ ಮಾತ್ರವಾದ ಹಗೆ ಇರಿಸುವುದು ಕೂಡ ವಿಶ್ವಾಸ ನಷ್ಟವಾಗಲು ಕಾರಣವಾಗುವುದು. ಆ ಇಮಾಮರ ದೇವಭಕ್ತಿ, ದೇವಾನುರಾಗ, ಸಹನೆ, ಸ್ಥೈರ್ಯ, ಪವಿತ್ರತೆ ಮತ್ತು ಆರಾಧನೆ ನಮಗೆ ಉತ್ತಮವಾದ ಮಾದರಿಯಾಗಿದೆ. ನಾವು ಆ ನಿಷ್ಕಳಂಕರಿಗೆ ಲಭಿಸಿದ ಸನ್ಮಾರ್ಗವನ್ನು ಅನುಸರಿಸುವವರಾಗಿದ್ದೇವೆ. ಅವರ ಶತ್ರುವಾದ ಹೃದಯ ನಾಶವಾಯಿತು. ಅವರ ವಿಶ್ವಾಸ, ಸದ್ಗುಣಗಳು, ಧೀರತೆ, ದೇವಭಕ್ತಿ, ಸ್ಥೈರ್ಯ ಮತ್ತು ದೇವಾನುರಾಗದ ಸಕಲ ನಕ್ಷೆಗಳನ್ನು ಕನ್ನಡಿಯ ಪ್ರತಿಚ್ಛಾಯೆ ಎಂಬಂತೆ ಸಂಪೂರ್ಣವಾದ ಅನುಸರಣೆಯೊಂದಿಗೆ ತನ್ನೊಳಗೆ ಹುದುಗಿಸಿ ಕರ್ಮಪರವಾಗಿ ಅವರೊಡನೆ ತನ್ನ ಪ್ರೀತಿಯನ್ನು ವ್ಯಕ್ತಪಡಿಸುವ ಹೃದಯ ವಿಜಯಿಯಾಯಿತು. ಆ ಮಹಾಪುರುಷರು ಲೋಕದ ಕಣ್ಣುಗಳಿಂದ ಮರೆಯಾಗಿ ನಿಂತಿರುವರು. ಇವರೊಡನೆ ಲೀನವಾಗುವ ಜನರಿಗೆ ಮಾತ್ರ ಅವರ ಬೆಲೆ ತಿಳಿಯುವುವು. ಲೋಕದ ಕಣ್ಣುಗಳಿಗೆ ಅವರನ್ನು ಗುರುತಿಸಲು ಸಾಧ್ಯವಿಲ್ಲ. ಏಕೆಂದರೆ ಅವರು ಲೋಕದಿಂದ ಬಹಳ ದೂರದಲ್ಲಿದ್ದಾರೆ. ಎಂದರೆ ಲೌಕಿಕತೆಯಿಂದ ಬಹಳ ವಿದೂರವಾಗಿರುವರು. ಹಝ್ರತ್ ಹುಸೈನ್ ರಝಿಯಲ್ಲಾಹು ಅನ್‌ಹು ಶಹೀದ್ ಆಗಲು ಇದೇ ಕಾರಣ. ಏಕೆಂದರೆ ಅವರ ಬೆಲೆಯನ್ನು ಜನರು ಅರಿತ್ತಿರಲಿಲ್ಲ.

ಲೋಕ ಎಂದಿಗೂ ಯಾವುದೇ ಪರಿಶುದ್ಧ ಮತ್ತು ವರಿಷ್ಠ ವ್ಯಕ್ತಿಗಳನ್ನು ಪ್ರೀತಿಸಿಲ್ಲ. ಹೀಗಿರುವಾಗ ಅದು ಹುಸೈನ್ ರಝಿಯಲ್ಲಾಹು ಅನ್‌ಹುರನ್ನು ಹೇಗೆ ಪ್ರೀತಿಸಲು ಸಾಧ್ಯ. ಒಟ್ಟಿನಲ್ಲಿ ಹಝ್ರತ್ ಹುಸೈನ್ ರಝಿಯಲ್ಲಾಹು ಅನ್‌ಹುರನ್ನು ನಿಂದಿಸುವುದು ಅತ್ಯಂತ ಕೀಳುಮಟ್ಟದ ದೌರ್ಭಾಗ್ಯ ಮತ್ತು ಅವಿಶ್ವಾಸವಾಗಿದೆ. ಯಾವ ವ್ಯಕ್ತಿ ಹುಸೈನ್ ರಝಿಯಲ್ಲಾಹು ಅನ್‌ಹು ಅಥವಾ ಪರಿಶುದ್ಧ ಇಮಾಮರಾದ ಯಾರನ್ನಾದರೂ ನಿಂದಿಸುತ್ತಾನೋ ಅಥವಾ ಅವರ ಬಗ್ಗೆ ನಿಂದನೀಯ ಪದಗಳನ್ನು ತನ್ನ ನಾಲಗೆಯಿಂದ ಉಚ್ಚರಿಸುತ್ತಾನೋ ಅವನು ತನ್ನ ಈಮಾನನ್ನು ವ್ಯರ್ಥಗೊಳಿಸುತ್ತಾನೆ. ಏಕೆಂದರೆ ಯಾರು ಅಲ್ಲಾಹನ ವರಿಷ್ಠ ದಾಸರೊಂದಿಗೆ ಮತ್ತು ಅವನ ಪ್ರೀತಿಗೆ ಪಾತ್ರರಾದವರೊಡನೆ ಶತ್ರುತ್ವ ಇರಿಸುತ್ತಾನೋ ಅಲ್ಲಾಹನು ಅವನ ಶತ್ರುವಾಗುತ್ತಾನೆ. (ಮಜ್‌ಮೂಅ ಇಶ್ತಿಹಾರಾತ್, ಸಂಪುಟ-2, ಪುಟ-653-654, ಇಶ್ತಿಹಾರ್ ಸಂಖ್ಯೆ 270 "ತಬ್‌ಲೀಗುಲ್ ಹಖ್" ಮುದ್ರಣ ರಬ್ವಃ)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಈ ಎಲ್ಲ ಸಂಗತಿಗಳನ್ನು ಕೇಳಿದ ನಂತರ, ಅವರಿಗೆ ಪೈಗಂಬರರ ಕುಟುಂಬದೊಂದಿಗೆ ಪ್ರೀತಿ ಇರಲಿಲ್ಲ ಎಂದು ಹೇಗೆ ಹೇಳಲು ಸಾಧ್ಯ. ಅವರಿಗೆ ಇದ್ದ ಪ್ರೀತಿಯ ಗ್ರಹಿಕೆ ಬೇರೆ ಯಾರಿಗೂ ಇರಲು ಸಾಧ್ಯವಿಲ್ಲ. ಇದನ್ನೇ ಅವರು ಹೇಳಿದ್ದರು. ಆದರೆ, ಶಿಯಾ ವಿಭಾಗದವರು ಅತಿರೇಕದ ಮಟ್ಟಕ್ಕೆ ಹೋದಾಗ ಅದರ ನೈಜತೆಯನ್ನು ಸಹ ಅವರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತಿಳಿಸಿಕೊಟ್ಟರು. ಅದೇ ರೀತಿಯಲ್ಲಿ ಸುನ್ನೀ ವಿಭಾಗದವರು ತಪ್ಪು ಮಾಡಿದ್ದಲ್ಲಿ, ಅವರೊಡನೆ ಅದನ್ನು ಸರಿಪಡಿಸಲು ಹೇಳಿದರು. ನ್ಯಾಯವಂತನಾದ ತೀರ್ಪುಗಾರನ ಕೆಲಸ ಇದೇ ಆಗಿದೆ. ಇಸ್ಲಾಮಿನ ಸರಿಯಾದ ಅಧ್ಯಾಪನೆಯನ್ನು ಹರಡುವ ಮತ್ತು ಜಾರಿಗೊಳಿಸುವ ಇದೇ ಕೆಲಸಕ್ಕಾಗಿ ಅಲ್ಲಾಹನು ಅವರನ್ನು ಕಳುಹಿಸಿದ್ದರು. ಹೀಗಿದ್ದರೂ ಈ ಎರಡು ದೊಡ್ಡ ಪಂಗಡದವರು ಅಹ್ಮದಿಯರನ್ನೇ ದೂಷಿಸುತ್ತಾರೆ. ನಮ್ಮನ್ನು ಹಿಂಸೆಗೆ ಗುರಿಯಾಗಿಸುತ್ತಾರೆ. ಆದರೂ ನಾವು ಸಹನೆ ಮತ್ತು ಸ್ಥಿರತೆಯಿಂದ ನಮಗೆ ಒಪ್ಪಿಸಲಾದ ಈ ಕೆಲಸವನ್ನು ಜಾರಿಯಲ್ಲಿರಿಸಬೇಕು. ನೈಜ ಇಸ್ಲಾಮನ್ನು ಲೋಕದಲ್ಲಿ ಹರಡಲು ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬೈಅತ್ ಮಾಡಿದ್ದೇವೆ. ಹಝ್ರತ್ ಇಮಾಮ್ ಹುಸೈನ್ ರಝಿಯಲ್ಲಾಹು ಅನ್‌ಹು ಮಾಡಿತೋರಿಸಿದ ಮಾದರಿಯನ್ನು ತಮ್ಮ ಮುಂದಿರಿಸಬೇಕು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ತಮ್ಮೊಂದು ಪದ್ಯದಲ್ಲಿ ಹೀಗೆ ಹೇಳಿದ್ದರು:

**ವೋ ತುಮ್‌ಕೊ ಹುಸೈನ್ ಬನಾತೆ ಹೇಂ ಓರ್ ಆಪ್ ಯಝೀದಿ ಬನ್‌ತೆ ಹೇಂ**

**ಯೇ ಕ್ಯಾ ಹೀ ಸಸ್ತ ಸೋದ ಹೇ ದುಶ್ಮನ್ ಕೋ ತೀರ್ ಚಲಾನೆ ದೋ**

ಅಂದರೆ, ಶತ್ರುಗಳು ನಿಮ್ಮನ್ನು ಹುಸೈನರನ್ನಾಗಿ ಮಾಡುತ್ತಾರೆ.
ಹೀಗೆ ಅವರು ಸ್ವತಃ ಯಝೀದಿಗಳಾಗುತ್ತಾರೆ.
ಇದೆಷ್ಟು ಅಗ್ಗದ ವ್ಯಾಪಾರವಾಗಿದೆ.
ಶತ್ರುಗಳಿಗೆ ಬಾಣ ಹೂಡಲು ಬಿಟ್ಟುಬಿಡಿರಿ. (ಕಲಾಮೆ ಮಹ್ಮೂದ್, ಪುಟ-154)

ಒಟ್ಟಿನಲ್ಲಿ ನಮ್ಮ ತ್ಯಾಗಗಳು ಇನ್‌ಶಾ ಅಲ್ಲಾಹ್ ವ್ಯರ್ಥವಾಗದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದೆಡೆ ಹೇಳುತ್ತಾರೆ: ನನಗೆ ಹುಸೈನ್ ರಝಿಯಲ್ಲಾಹು ಅನ್‌ಹುರೊಡನೆ ಸಾಮ್ಯತೆಯಿದೆ. ಆದರೆ ಅಂದು ಉಂಟಾದ ಪರಿಣಾಮ ಇಂದಾಗದು. ಇಂದು ವಿಪರೀತವಾದ ಪರಿಣಾಮ ಉಂಟಾಗುವುದು. ಏಕೆಂದರೆ ಈ ಬಾರಿ ಹುಸೈನಿನ ಗುಣವುಳ್ಳವರಿಗೆ ಯಶಸ್ಸು ಲಭಿಸುವುದು ಮತ್ತು ವಿಜಯ ಉಂಟಾಗುವುದು ಎಂದು ಅಲ್ಲಾಹನು ವಿಧಿಸಿದ್ದಾನೆ. ಪ್ರತ್ಯಕ್ಷವಾದ ವಿಜಯ ಉಂಟಾಗುವುದು. ಇನ್‌ಶಾ ಅಲ್ಲಾಹ್. ಶತ್ರುಗಳು ಪರಾಜಿತರೂ ಹತಭಾಗಿಯರೂ ಆಗುವರು. (ಅಲ್‌ಫಝ್ಲ್ ಇಂಟರ್‌ನ್ಯಾಶ್ನಲ್ 31 ಡಿಸಂಬರ್ 2010, ಪುಟ-8, ಖುತ್‌ಬ ಜುಮುಅ 10-12-2010) (ಖುತ್‌ಬಾತೆ ಮಸ್‌ರೂರ್ ಸಂಪುಟ-8, ಪುಟ-635-636, ಖುತ್‌ಬ ಜುಮುಅ 10-12-2010)

ಆದ್ದರಿಂದ ನಾವು ಅದಕ್ಕಾಗಿ ಈಗ ವಿಶೇಷವಾಗಿ ಈ ತಿಂಗಳಲ್ಲೂ ಮತ್ತು ಯಾವಾಗಲೂ ದುಆ ಮಾಡುತ್ತಿರಬೇಕು. ಶತ್ರುತ್ವ ಈಗ ಬಹಳ ಅಧಿಕವಾಗಿದೆ. ವಿಶೇಷವಾಗಿ ಪಾಕಿಸ್ತಾನದಲ್ಲಿ ಮತ್ತು ಇತರು ಕೆಲವು ಸ್ಥಳಗಳಲ್ಲಿ ಶತ್ರುತ್ವ ಬಹಳ ಶಕ್ತವಾಗಿದೆ. ಆದ್ದರಿಂದ ಬಹಳ ಹೆಚ್ಚಾಗಿ ದುಆ ಮಾಡುತ್ತಿರಬೇಕು. ದುರೂದ್ ಮತ್ತು ಸ್ವಲಾತ್ ಪ್ರಾರ್ಥನೆ ಹೆಚ್ಚಾಗಿ ಮಾಡುತ್ತಿರಬೇಕು. ನಾವು ಅಲ್ಲಾಹನ ಮುಂದೆ ಎಷ್ಟು ಹೆಚ್ಚು ಬಾಗುತ್ತೇವೋ ಅಷ್ಟೇ ಬೇಗನೇ ಅಲ್ಲಾಹನು ನಮಗೆ ವಿಜಯ ಮತ್ತು ಯಶಸ್ಸನ್ನು ಪ್ರದಾನ ಮಾಡುವನು. ಈ ದಿನಗಳಲ್ಲಿ ಇತರ ಮುಸ್ಲಿಮರಿಗಾಗಿಯೂ ದುಆ ಮಾಡುತ್ತಿರಬೇಕು. ಈ ದಿನಗಳಲ್ಲಿ ಮುಸ್ಲಿಮ್ ಪಂಗಡಗಳ ಜನರು ಪರಸ್ಪರ ಕೊಲ್ಲಲು ತಯಾರಾಗುತ್ತಾರೆ. ಇಂದಿನ ವರೆಗಿನ ಚರಿತ್ರೆಗಳಿಂದ ಕಂಡು ಬಂದಿರುವುದೇನೆಂದರೆ, ಮುಹರ್ರಮ್ ಹತ್ತರಂದು ಶಿಯಾ ವಿಭಾಗದವರು ಮೆರವಣಿಗೆ ನಡೆಸುವ ಜಾಗದಲ್ಲಿ ಅಥವಾ ಶಿಯಾ ವಿಭಾಗದವರು ಒಟ್ಟುಗೂಡುವ ಸ್ಥಳಗಳಲ್ಲಿ ಎಲ್ಲಿಯಾದರೂ ಹಲ್ಲೆಗಳು ನಡೆಯುತ್ತಿರುತ್ತವೆ. ಹಲವು ಜನರನ್ನು ಧರ್ಮದ ಹೆಸರಿನಲ್ಲಿ ಶಹೀದ್ ಮಾಡಲಾಗುತ್ತದೆ. ಅಲ್ಲಾಹನು ಇವರಿಗೆ ಬುದ್ಧಿ ಕೊಡಲಿ. ಈ ವರ್ಷ, ಕನಿಷ್ಠ ಪಕ್ಷ ಈ ವರ್ಷವಾದರೂ ಯಾವುದೇ ದೇಶದಿಂದ ಮುಸ್ಲಿಮರು ಮುಸ್ಲಿಮರನ್ನು ಕೊಲೆ ಮಾಡಿದ ವಾರ್ತೆ ಬರದಿರಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೂಲಕ ಮಾತ್ರವೇ ಇಸ್ಲಾಮಿನ ವಿಜಯ ಉಂಟಾಗುವುದಾಗಿ ಅಲ್ಲಾಹನ ವಿಧಿಸಿರುವನು ಎಂಬ ಸತ್ಯವನ್ನು ಈ ಮುಸ್ಲಿಮರು ಬೇಗನೆ ತಿಳಿಯುವಂತಾಗಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬೈಅತ್ ಮಾಡುವ ಮೂಲಕವೇ ಯಶಸ್ಸು ಸಿಗುವುದು ಎಂದು ಅವರಿಗೆ ಮನವರಿಕೆಯಾಗಲಿ. ಅಲ್ಲಾಹನ ಅವರಿಗೆ ಅದರ ಸೌಭಾಗ್ಯ ನೀಡಲಿ.

******************

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಇಸ್ಲಾಮ್ ಹಾಗೂ ಪವಿತ್ರ ಖುರ್‌ಆನಿನ ಸತ್ಯವನ್ನು ಸಾಬೀತು ಪಡಿಸಲು ಜಾಹೀರಾತು ನೀಡಿದ್ದು ಅಥವಾ ಅದಕ್ಕೆ ಸಾರ್ವಜನಿಕ ಘೋಷಣೆ ಮಾಡಿದ್ದು ಇದು ಮೊದಲ ಸಲವೇನು ಅಲ್ಲ. ಇದಕ್ಕಿಂತ ಮುಂಚೆಯೂ ಅವರು ಪದೇ ಪದೇ ಪಂಥಾಹ್ವಾನ ನೀಡಿದರು- ಇಸ್ಲಾಮ್ ಮತ್ತು ಪವಿತ್ರ ಖುರ್‌ಆನಿನ ಸತ್ಯವನ್ನು ಸಾಬೀತು ಮಾಡುವುದು ನಮ್ಮ ಹೊಣೆಯಾಗಿರುತ್ತದೆ ಎಂದು.

ಬಯಸಿದವರು ಬಂದು ಪರೀಕ್ಷಿಸಿಕೊಳ್ಳಬಹುದು, ಅಂದರೆ ಅವರ ಮೊದಲ ಗ್ರಂಥ ಬರಾಹೀನೆ ಅಹ್ಮದಿಯ್ಯದ ಉದ್ದೇಶವೇ ಇದಾಗಿತ್ತು. "ಎಲ್ಲ ಧರ್ಮಗಳ ಮೇಲೆ ಇಸ್ಲಾಮ್ ಮತ್ತು ಪವಿತ್ರ ಖುರ್‌ಆನಿನ ಸತ್ಯವನ್ನು ಸಾಬೀತು ಪಡಿಸಬೇಕು. ಅದಕ್ಕಾಗಿ ಅವರು ಈ ಗ್ರಂಥದಲ್ಲಿ ಹತ್ತು ಸಾವಿರ ರುಪಾಯಿಗಳ ಬಹುಮಾನದ ಜಾಹೀರಾತು ಸಹ ಸೇರಿಸಿದರು. ಇವರ ಕೆಲವು ಅತ್ಯಂತ ಗೌರವಯುತ ಅಧ್ಯಾಪನೆಗಳು ಪ್ರಸ್ತುತವಿದೆ.

**ಬರಾಹೀನೆ ಅಹ್ಮದಿಯಾದ ಉದ್ದೇಶ**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಈ ಗ್ರಂಥದ ರಚನೆಯ ಮೂಲ ಉದ್ದೇಶವೇನೆಂದರೆ: ಇಸ್ಲಾಮ್ ಧರ್ಮದ ಸತ್ಯವನ್ನು ಮತ್ತು ಪವಿತ್ರ ಖುರ್‌ಆನಿನ ವಾಸ್ತವದ ಸಾಕ್ಷ್ಯಗಳನ್ನು ಮತ್ತು ಹಝ್ರತ್ ಖಾತುಮುಲ್ ಅಂಬಿಯಾ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಸತ್ಯ ಪ್ರವಾದಿತ್ವದ ಕಾರಣಗಳನ್ನು ಜನರ ಮೇಲೆ ಕುಲಂಕುಶವಾದ ರೀತಿಯಲ್ಲಿ ಜಾಹಿರು ಪಡಿಸಬೇಕು ಮತ್ತು ಈ ಸತ್ಯಧರ್ಮದ ಪವಿತ್ರ ಗ್ರಂಥ ಹಾಗೂ ಪವಿತ್ರ ನಬಿಯರನ್ನು ನಿರಾಕರಿಸುವವರಿಗೆ ಎಂತಹ ಪರಿಪೂರ್ಣ ಮತ್ತು ಉಚಿತ ರೀತಿಯಲ್ಲಿ ನಿರುತ್ತರಗೊಳಿಸುವುದು ಮತ್ತು ಅಪರಾದಿಯನ್ನಾಗಿ ಮಾಡುವುದಾಗಿದೆ. ಏಕೆಂದರೆ ಭವಿಷ್ಯದಲ್ಲಿ ಯಾರೂ ಇಸ್ಲಾಮಿನ ವಿರುದ್ಧ ಸೊಲ್ಲು ಎತ್ತುವಂತವರಾಗಬಾರದು. (ಬರಾಹೀನೆ ಅಹ್ಮದಿಯಾ, ರೂಹಾನಿ ಖಝಾಯೀನ್ ಸಂಪುಟ-1, ಪುಟ-23)

**ಪವಿತ್ರ ಖುರ್‌ಆನಿನ ಬಗ್ಗೆ ಇರುವ ಎಲ್ಲ ರೀತಿಯ ಸಂಶಯಗಳನ್ನು ದೂರಮಾಡುವುದು ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಹೊಣೆಯಾಗಿದೆ**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಾವು ವಿರೋಧಿಗಳನ್ನು ಅಪರಾಧಿಯನ್ನಾಗಿ ಮಾಡಲು ಎಲ್ಲ ಕಡೆ ಸ್ಪಷ್ಟವಾಗಿ ತಿಳಿಸಲಾಗಿದೆ ಮತ್ತು ಸ್ಪಷ್ಟವಾದ ಧ್ವನಿಯಿಂದ ಸೂಚಿಸಿದ್ದೇವೆ. ಯಾರಾದರೂ ಬ್ರಹ್ಮಿ ಪವಿತ್ರ ಖುರ್‌ಆನಿನ ಯಾವುದೇ ವಿವರಣೆಯನ್ನು ಸತ್ಯಕ್ಕೆ ವಿರುದ್ಧ ಎಂದು ಭಾವಿಸುವುದಾದರೆ ಅಥವಾ ಸತ್ಯದಿಂದ ದೂರವಾದುದು ಎಂದು ಭಾವಿಸುವುದಾದರೆ ತನ್ನ ತರ್ಕ ಪ್ರಸ್ತುತ ಪಡಿಸಬೇಕು. ನಾವು ಅಲ್ಲಾಹನ ಅನುಗ್ರಹದಿಂದ ಮತ್ತು ಔದಾರ್ಯದಿಂದ ಅವರ ಸಂಶಯಗಳನ್ನು ಯಾವ ರೀತಿ ದೂರ ಮಾಡುವೆನು ಎಂದರೆ, ಅವರು ಯಾವ ಮಾತನ್ನು ತನ್ನ ಭ್ರಮೆಯಲ್ಲಿ ಮಿಥ್ಯ ಹಾಗೂ ಒಂದು ಕಳಂಕವೆಂದು ಭಾವಿಸುತ್ತಿರುವರೋ ಅದರ ಸತ್ಯತೆ ಅವರ ಮೇಲೆ ವ್ಯಕ್ತವಾಗುವುದು. (ಅದೇ ಪುಟ-327, ಅಡಿ ಟಿಪ್ಪಣಿ ಸಂಖ್ಯೆ 11)

**ಪವಿತ್ರ ಖುರ್‌ಆನಿನಲ್ಲಿ ಇಲ್ಲದಂತಹ ಯಾವುದೇ ಸತ್ಯವನ್ನು ಪ್ರಸ್ತುತ ಪಡಿಸಿರಿ**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಯಾವುದೇ ದೊಡ್ಡ ರೀತಿಯ ಸತ್ಯಸಾಕ್ಷಿಗಳನ್ನು ನೀವು ಹೊಂದಿದವರಾದರೆ, ಅದರ ಬಗ್ಗೆ ನಾವು ತುಂಬ ಶ್ರಮವಹಿಸಿ ಬೆವರು ಹರಿಸಿ ಹಾಗೂ ಸಂಶೋಧಿಸಿ ಅದನ್ನು ಪಡೆದಿರುತ್ತೇವೆ ಎಂದು ಭಾವಿಸುವುದಾದರೆ, ಮತ್ತು ನಿಮ್ಮ ಮಧ್ಯೆ ನಿಮ್ಮ ವಿಚಾರದಲ್ಲಿ ಪವಿತ್ರ ಖುರ್‌ಆನ್ ಅದರ ಸತ್ಯ ಬಯಲು ಮಾಡಲು

ವಂಚಿತವಾಗಿದೆ ಎಂದು ಭಾವಿಸುವುದಾದರೆ, ನಿಮಗೆ ಆಣೆ ಹಾಕಿ ಹೇಳುತ್ತೇನೆ ಎಲ್ಲ ಕಾರ್ಯಗಳನ್ನು ಬದಿಗೊತ್ತಿ ನಮ್ಮ ಮುಂದೆ ಪ್ರಸ್ತುತಪಡಿಸಿರಿ, ನಾವು ನಿಮಗೆ ಪವಿತ್ರ ಖುರ್ಆನಿನಿಂದ ತೆಗೆದು ತೋರಿಸುವೆವು. (ಅದೇ ಪುಟ–327, ಅಡಿಟಿಪ್ಪಣಿ ಸಂಖ್ಯೆ–11)

**ಯಾರಾದರು ಖುರ್ಆನಿಗಿಂತ ಉತ್ತಮ ಶಿಕ್ಷಣ ಪ್ರಸ್ತುತ ಪಡಿಸಿದರೆ ನಾವು ಮರಣದಂಡನೆಗೂ ಸಿದ್ಧರಿದ್ದೇವೆ.**

ಯಾವೊಬ್ಬ ವ್ಯಕ್ತಿಯಾದರು ಒಂದು ಅಣುವಿನ ಸಾವಿರ ಭಾಗದಷ್ಟಾದರೂ ಪವಿತ್ರ ಖುರ್ಆನಿನ ಶಿಕ್ಷಣದಲ್ಲಿ ನ್ಯೂನ್ಯತೆ ತೋರಿಸಿದರೆ ಅಥವಾ ಅದರ ಎದುರಾಗಿ ತಮ್ಮ ಯಾವುದೆ ಪುಸ್ತಕದ ಒಂದು ಅಣುವಿನಷ್ಟು ಒಳಿತು ಸಾಬೀತುಗೊಳಿಸಿದರೆ ಅದು ಪವಿತ್ರ ಖುರ್ಆನಿಗಿಂತ ಮಿಗಿಲಾದುದಾಗಿರಬೇಕು ಮತ್ತು ಅದಕ್ಕಿಂತ ಉತ್ತಮವಾಗಿರಬೇಕು ನಾವು ಮರಣದಂಡನೆ ಸ್ವೀಕರಿಸಲು ಸಿದ್ಧರಾಗಿರುವೆವು. (ಅದೇ ಪುಟ–298, ಅಡಿಟಿಪ್ಪಣಿ ಸಂಖ್ಯೆ–02)

**ಇಡೀ ಬೈಬಲ್‌ನಿಂದ ಕೇವಲ ಸೂರಃ ಇಖ್‌ಲಾಸ್‌ನಲ್ಲಿ ಇದ್ದಂತಹ ದೇವ ಏಕತ್ವದ ವಿವರ ತೆಗೆದು ತೋರಿಸಿ!**

ನಿಜ ಹೇಳಬೇಕೆಂದರೆ ಸೂರಃ ಇಖ್ಲಾಸಿನ ಒಂದು ಸಾಲಿನಲ್ಲಿ, ದೇವ ಏಕತ್ವದ ವಿಷಯ ತುಂಬಿ ತುಳುಕುತ್ತಿದೆ. ಅದು ಇಡೀ ಬೈಬಲ್‌ನಲ್ಲಿಯೂ ಕಾಣಸಿಗದು. ಇರುವುದಾದರೆ ಯಾರಾದರೂ ಕ್ರೈಸ್ತರು ನಮ್ಮ ಮುಂದೆ ಪ್ರಸ್ತುತಪಡಿಸಲಿ. (ಅದೇ ಪುಟ–303, ಅಡಿಟಿಪ್ಪಣಿ ಸಂಖ್ಯೆ–02)

**ದೇವ ಏಕತ್ವ ವಿಷಯ ಖುರ್ಆನಿನ ಹತ್ತು ಪುಟಗಳಿದ್ದಷ್ಟು ಅದು ಸಂಪೂರ್ಣ ವೇದದಲ್ಲೂ ಇಲ್ಲ**

ಪವಿತ್ರ ಖುರ್ಆನಿನ ಹತ್ತು ಪುಟಗಳಿಂದ ವ್ಯಕ್ತವಾಗುವಷ್ಟು ದೇವರ ಏಕತ್ವ ಕುರಿತು ವಿಷಯ ಅದು ಸೂರ್ಯನ ಬೆಳಕಿನಷ್ಟು ಪ್ರಖರವಾಗಿವೆ. ಯಾವೊಬ್ಬ ವ್ಯಕ್ತಿ ವೇದದ ಸಾವಿರ ಪುಟಗಳಿಂದಾದರೂ ತೆಗೆದು ತೋರಿಸಿದರೆ ಆಗ ನಾವು ಒಪ್ಪುವೆವು ಹೌದು ವೇದದಲ್ಲಿ ಏಕತ್ವದ ವಿಷಯವಿದೆ ಯಾರು ಬೇಕಾದರೂ ತನ್ನ ಸಮರ್ಥ್ಯದ ಪ್ರಕಾರ ನಮ್ಮಲ್ಲಿ ಶರತ್ತು ಬದ್ದ ನಿಯುಕ್ತಗೊಳಿಸಲಿ ನಾವು ಆಣೆ ಹಾಕಿ ಹೇಳುತ್ತೇವೆ, ಅಲ್ಲಾಹನ ಆಣೆವಹಿಸಿ ಹೇಳುತ್ತೇವೆ ಅವನ ಹೊರತು ಯಾರು ಆರಾಧ್ಯರಲ್ಲ, ತಾವು ನಿಗದಿತ ಶರತ್ತಿನ ಪ್ರಕಾರ ಯಾವ ರೀತಿಯಲ್ಲಾದರೂ ನಿರ್ಣಯ ಬಯಸಿರಿ ನಾವು ಹಾಜರಿದ್ದೇವೆ. (ಸುರ್ಮ ಚಶ್ಮಾ ಆರ್ಯ, ರೂಹಾನಿ ಖಝಾಯೀನ್ ಸಂಪುಟ–2, ಪುಟ–216)

**ಯೂರೋಪಿನ ಹಲವು ವಿದ್ವಾಂಸರು ಪವಿತ್ರ ಖುರ್ಆನಿಗೆ ಪ್ರಶಂಸೆಗೈದು ಅದರ ಹಕ್ಕು ಪಾಲನೆ ಮಾಡಿದ್ದಾರೆ**

ಯೂರೋಪಿನ ವಿದ್ವಾಂಸರು ಮತ್ತು ಬುದ್ಧಿವಂತ ಜನರು ಎಷ್ಟರ ಮಟ್ಟಿಗೆ ಪ್ರಶಂಸರ್ಹವಾಗಿದ್ದಾರೆ ಎಂದರೆ ಅವರು ಹಲವು ಗ್ರಂಥಗಳನ್ನು ರಚಿಸಿ ಪವಿತ್ರ ಖುರ್ಆನಿನ ಕುರಿತು ಸತ್ಯಸಕ್ಷ್ಯವನ್ನು ಒಪ್ಪಿ ಅದರ ಹಕ್ಕು ಪಾಲನೆಯನ್ನು ಮಾಡಿದ್ದಾರೆ. (ಸುರ್ಮ ಚಶ್ಮಾ ಆರ್ಯ, ರೂಹಾನಿ ಖಝಾಯೀನ್ ಸಂಪುಟ–2, ಪುಟ–196)

ಇನ್‌ಶಾಅಲ್ಲಾಹ್ ಮುಂದೆ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಇನ್ನೊಂದು ಪಂಥಾಹ್ವಾನವನ್ನು ಓದುಗರಲ್ಲಿ ಪ್ರಸ್ತುತಪಡಿಸುವೆವು. **(ಮನ್‌ಸೂರ್ ಅಹ್ಮದ್ ಮಸ್ರೂರ್)**

**ಮಹೋನ್ನತನಾದ ದೇವ**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

"ನಮ್ಮ ದೇವನೇ ನಮ್ಮ ಸ್ವರ್ಗ. ನಮ್ಮ ಅತ್ಯುನ್ನತ ಸಂತೋಷಗಳು ನಮ್ಮ ದೇವನಲ್ಲಿವೆ. ಏಕೆಂದರೆ ನಾವು ಅವನನ್ನು ನೋಡಿರುವೆವು ಮತ್ತು ಪ್ರತಿಯೊಂದು ಸೌಂದರ್ಯವನ್ನು ನಾವು ಅವನಲ್ಲಿ ಕಂಡಿರುವೆವು. ಜೀವವನ್ನು ಬಲಿಯರ್ಪಿಸುವುದರಿಂದ (ದೇವನೆಂಬ) ಈ ಸಂಪತ್ತು ಸಿಗಬಹುದಾದರೆ ಹಾಗೆ ಪಡೆಯಲು ಅದು (ಆ ಸಂಪತ್ತು) ಅರ್ಹವಾಗಿದೆ. ಒಬ್ಬನು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವುದರಿಂದ ಪಡೆಯಬಹುದಾಗಿದ್ದರೆ ಹಾಗೆ ಖರೀದಿಸಲು ಯೋಗ್ಯವಾದ ಮಾಣಿಕ್ಯ ಇದಾಗಿದೆ. ಎಲೈ ಭಾಗ್ಯಹೀನರೇ, ನೀವು ಈ ಕಾರಂಜಿಯ ಕಡೆಗೆ ಓಡಿ ಬನ್ನಿರಿ. ಇದು ನಿಮ್ಮ ಬಾಯಾರಿಕೆಯನ್ನು ನೀಗಿಸುವುದು. ಇದು ನಿಮ್ಮನ್ನು ರಕ್ಷಿಸುವಂತಹ ಜೀವಜಲವನ್ನೀಯುವ ಕಾರಂಜಿಯಾಗಿದೆ. ನಾನೇನು ಮಾಡಲಿ? ಈ ಶುಭವಾರ್ತೆಯನ್ನು ಜನಹೃದಯಗಳಲ್ಲಿ ಹೇಗೆ ನೆಲೆವೂರುವಂತೆ ಮಾಡಲಿ? ಇವನೇ ನಿಮ್ಮ ದೇವನು ಎಂದು ಜನರು ಆಲಿಸುವಂತೆ ಮಾಡಲು ಯಾವ ಡೋಲು ಬಾರಿಸಿ ಪೇಟೆಗಳಲ್ಲಿ ಡಂಗುರ ಸಾರಲಿ? ಜನರು ಕಿವಿಗೊಟ್ಟು ಕೇಳುವಂತೆ ಮಾಡಲು ನಾನು ಯಾವ ಮದ್ದಿನಿಂದ ಚಿಕಿತ್ಸೆ ನಡೆಸಲಿ? ನೀವು ದೇವನಿಗೆ ಸೇರಿದವರಾಗುವಿರಾದರೆ, ದೇವನು ನಿಮ್ಮವನೇ ಆಗುವನು ಎಂದು ದೃಢವಾಗಿ ಅರಿತುಕೊಳ್ಳಿರಿ."

***(ಕಿಶ್ತೀ ನೂಹ್; ರೂಹಾನೀ ಖ಼ಝಾ಼ಇನ್ ಸಂಪುಟ 19, ಪುಟ 21 – 22)***

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಬೇರ್ಪಟ್ಟಾಗ ಹಝ್ರತ್ ಉಮರ್(ರ) ಅವರಿಗೆ ತುಂಬ ಖೇದ ಉಂಟಾಯಿತು. ಅವರು ಯೋಚನೆ ಮಾಡಿದರು. ಯಾವುದೇ ರೀತಿಯಿಂದ ಈ ಮಾತು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ವರೆಗೆ ತಲುಪಿದರೆ ಅವರಿಗೆ ದುಃಖವಾಗಬಹುದು ಎಂದು ತಕ್ಷಣ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಬಳಿ ಹೊರಟು ಹೀಗೆ ಹೇಳಿದರು, ಓ ಅಲ್ಲಾಹನ ಪ್ರವಾದಿಯರೇ!! ಇಂದು ಅಬೂಬಕ್ಕರ್‌ರೊಡನೆ ನನ್ನ ಜಗಳವಾಯಿತು ಅದಕ್ಕೆ ನನಗೆ ತುಂಬ ಖೇದವಿದೆ. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ಈ ಮಾತು ಕೇಳಿ ಕೋಪ ಬಂತು ಅದಕ್ಕೆ ಅವರು ಹೇಳಿದರು: ನೀವು ಏಕೆ ಆತನಿಗೆ ಕಷ್ಟ ನೀಡುತ್ತೀರಿ, ಆತನು ನೀವು ವಿರೋಧಿಸುತ್ತಿರುವ ಕಾಲದಲ್ಲಿ ನನ್ನ ಮೇಲೆ ವಿಶ್ವಾಸ ತಂದದ್ದು ಗೊತ್ತಿಲ್ಲವೇ. ನನಗೆ ಸಹಕರಿಸಿದ್ದು ಗೊತ್ತಿಲ್ಲವೇ. ಹಝ್ರತ್ ಉಮರ್(ರ) ಇನ್ನು ಕ್ಷಮೆ ಬೇಡುವುದರಲ್ಲಿಯೇ ಇದ್ದರು. ಹಝ್ರತ್ ಅಬೂಬಕ್ಕರ್(ರ) ಅವರಿಗೂ ಯೋಚನೆ ಬರುತ್ತದೆ– ಹಝ್ರತ್ ಉಮರ್(ರ) ನನ್ನ ಮೇಲೆ ಕೋಪಗೊಂಡರೆ ಯೋಚಿಸಿ ಇದ್ದ ಸ್ಥಿತಿ ಹೇಳಲು, ತಪ್ಪು ನನ್ನದಲ್ಲ ಉಮರದ್ದಾಗಿದೆ ಎಂದು ಹೇಳಲು ಹೊರಟರು. ಅವರು ಬಾಗಿಲು ಪ್ರವೇಶಿಸಿದಂತೆಯೇ ನೋಡಿದರು: ಹಝ್ರತ್ ಉಮರ್(ರ) ಕ್ಷಮೆ ಕೋರುತ್ತಿದ್ದಾರೆ ಮತ್ತು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಅವರ ಮೇಲೆ ಅಸಂತುಷ್ಟರಾಗಿದ್ದಾರೆ. ಹಝ್ರತ್ ಅಬೂಬಕ್ಕರ್(ರ) ಅದೇ ಸಮಯ ಎರಡು ಕಾಲು ಹಾಸಿ ಕೂತುಬಿಟ್ಟರು ಮತ್ತು ಹೇಳಿದರು: ಓ ಅಲ್ಲಾನ ಪ್ರವಾದಿಯರೇ!! ತಪ್ಪು ನನ್ನದೇ ಆಗಿತ್ತು ಉಮರ್ ಅವರದಲ್ಲ ಈ ರೀತಿ ಅವರು ಹಝ್ರತ್ ಉಮರ್(ರ) ಅವರ ಮೇಲೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಮಾಡುತ್ತಿದ್ದ ಕೋಪ ದೂರಮಾಡಲು ಪ್ರಯತ್ನಿಸಿದರು. ಇದಾಗಿತ್ತು ಸತ್ಕರ್ಮಗಳಲ್ಲಿ ಒಬ್ಬರು ಇನ್ನೊಬ್ಬರ ಮೇಲೆ ಮೇಲುಗೈ ಸಾಧಿಸುವ ಪರಿ. ತಪ್ಪು ಹಝ್ರತ್ ಉಮರ್(ರ) ಅವರದ್ದಾಗಿದೆ, ಕ್ಷಮೆ ಹಝ್ರತ್ ಅಬೂಬಕ್ಕರ್(ರ) ಕೋರುತ್ತಿದ್ದಾರೆ ಏಕೆಂದರೆ ರಸೂಲುಲ್ಲಾಹ್(ಸ) ಹಝ್ರತ್ ಉಮರ್‌ರಿಂದ ಅಸಂತುಷ್ಟರಾಗಬಾರದು.

ವಾಸ್ತವದಲ್ಲಿ ಇಸ್ಲಾಮ್ ಮತ್ತು ಇತರ ಧರ್ಮಗಳ ಮಧ್ಯೆ ಎಲ್ಲಿ ಹಲವು ಅಂತರಗಳಾಗಿವೆಯೋ ಮತ್ತು ಅದರಲ್ಲಿ ಇಸ್ಲಾಮಿನ ನಿತ್ಯ ಎದ್ದು ಕಾಣುತ್ತಿದೆಯೋ ಅದರಲೊಂದಾದ ಅಂತರ– "ಇತರ ಧರ್ಮಗಳು ಕೇವಲ ಸತ್ಕರ್ಮಗಳ ಕರೆ ನೀಡುತ್ತದೆ ಅಷ್ಟೆ ಆದರೆ ಇಸ್ಲಾಮ್ ಧರ್ಮವು ಅದರಲ್ಲಿ ಸ್ಪರ್ಧೆ ಒಡ್ಡುವಂತೆ ಹುಟ್ಟಿನ ಕರೆ ನೀಡುತ್ತದೆ. **(ತಫ್‌ಸೀರೆ ಕಬೀರ್, ಸಂಪುಟ–2, ಪುಟ–254–255, ಮುದ್ರಣ ಖಾದಿಯಾನ್ 2010)**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಪ್ರತಿ ವ್ಯಕ್ತಿಯ ಹಕ್ಕುಗಳನ್ನು ನೀಡುವವರಾಗಬೇಕು. ಅಂತೆಯೇ ಪ್ರೀತಿ ಸೌಹಾರ್ಧತೆ ಶಾಂತಿಯ ಶಿಕ್ಷಣ. ಈ ಮಸೀದಿ ನಿರ್ಮಾಣದ ನಂತರ ಮೊದಲಿಗಿಂತ ಹೆಚ್ಚು ಈ ಮಾರ್ಗದಲ್ಲಿ ತಲುಪಿಸುವವರಾಗಬೇಕು. **ಜಝಾಕಲ್ಲಾಹ್.**

ಹುಝೂರ್ ಅನ್ವರ್(ಅಬಿಅ) ರವರ ಈ ಸಂಬೋಧನೆ ಏಳುಗಂಟೆ ಐವತ್ತೈದು ನಿಮಿಷದವರೆಗೆ ಜಾರಿಯಲ್ಲಿತ್ತು. ಕೊನೆಯಲ್ಲಿ ಹುಝೂರ್ ದುಆ ಮಾಡಿಸಿದರು.

ಅನಂತರ ಈ ಸಮಾರಂಭದಲ್ಲಿ ಭಾಗವಹಿಸಿದ ಎಲ್ಲ ಅತಿಥಿಗಳು ಹುಝೂರ್ ಜೊತೆಯಲ್ಲಿ ಉಪಹರ ಸೇವಿಸಿದರು.

"ಬೈತುಲ್ ವಾಹಿದ್" ಮಸೀದಿಯ ಈ ಉದ್ಘಾಟನಾ ಸಮಾರಂಭದಲ್ಲಿ 124 ಅತಿಥಿಗಳು ಭಾಗವಹಿಸಿದ್ದರು. ಅವರಲ್ಲಿ ಲಾರ್ಡ್ ಮೇಯರ್ CLAUS HANAU ನಗರ HESSEN ರಾಜ್ಯದ kaminsky ಓರ್ವ D.c. Eric Pipa ಸಾಹಿಬ್, ಜರ್ಮನ್ ನೇಷ್ನಲ್ ಪಾರ್ಲಿಮೆಂಟಿನ ಮುರು ಸದಸ್ಯರು BETINA MULLER ಸಾಹಿಬಾ, KORDULA ASCHF ಸಾಹಿಬ್ INE BUCHHOLZ ಸಾಹಿಬ್ ಅವರುಗಳಲ್ಲದೆ ವಿವಿಧ ಸರಕಾರಿ ಅಧಿಕಾರಿಗಳು, ವಕೀಲರು, ವೈದ್ಯರು, ಇಂಜಿನಿಯರ್‌ಗಳು, ಶಿಕ್ಷಕರು, ಪತ್ರಕರ್ತರು, ಜೀವನದ ವಿವಿಧ ವಿಭಾಗಗಳಿಂದ ಸಂಬಂಧಉಳ್ಳವರು ಭಾಗವಹಿಸಿದ್ದರು.

RTL T.V. ಯ ಪತ್ರತರ್ಕರು ಮತ್ತು ಅವರ ತಂಡ ಮಸೀದಿಯ ಉದ್ಘಾಟನಾ ಸಮಾರಂಭದ Coverage ಮಾಡಲು ಬಂದಿದ್ದರು. ಸಮಾರಂಭ ಮುಕ್ತಾಯ ಆದ ನಂತರ ಅವರು ವೇದಿಕೆಯ ಮೇಲೆ ಬಂದರು ಮತ್ತು ಹುಝೂರರ ಸಂದರ್ಶನ ಪಡೆದರು.

ಪತ್ರಕರ್ತರು ಒಂದು ಪ್ರಶ್ನೆ ಕೇಳಿದನು. ಅಹ್ಮದಿಯಾ ಸಮುದಾಯವು ಸಮಾನತೆ ಮತ್ತು ಸೌಹಾರ್ಧತೆಯನ್ನು ಸಮಾಜದಲ್ಲಿ ಯಾವ ರೀತಿ ಪ್ರೋತ್ಸಾಹಿಸುತ್ತಿದೆ.

ಈ ಪ್ರಶ್ನೆಯ ಉತ್ತರವಾಗಿ ಹುಝೂರ್ ಹೇಳಿದರು. ನಾವು ಸದ ಲೋಕದಾದ್ಯಂತ ಅದೇ ಸಂದೇಶ ಪ್ರಚಾರ ಮಾಡುತ್ತಿದ್ದೇವೆ. ಇಸ್ಲಾಮ್ ಧರ್ಮವು ಸಮಾನತೆಯನ್ನು ಬೋಧಿಸುತ್ತಿದೆ. ಹಝ್ರತ್ ರಸೂಲುಲ್ಲಾಹ್(ಸ) ರವರ ಉದಾಹರಣೆ ನೀಡುತ್ತ ಹುಝೂರ್ ಹೇಳಿದರು. ಪ್ರವಾದಿ(ಸ) ರವರ ಮೇಲೆ ಮತ್ತು ಅವರ ಅನುಯಾಯಿಗಳ ಮೇಲೆ ಎಷ್ಟೆಲ್ಲ ದೌರ್ಜನ್ಯ ಮಾಡಲಾಯಿತೆಂದರೆ ಅವರಿಗೆ(ಸ) ಮಕ್ಕ ಬಿಟ್ಟು ಮದೀನಕ್ಕೆ ವಲಸೆಯಾಗಿ ಬರಬೇಕಾಯಿತು. ಅಲ್ಲಿಯೂ ಅವರ(ಸ) ಮೇಲೆ ಮತ್ತು ಅವರ ಅನುಯಾಯಿಗಳ ಮೇಲೆ ದೌರ್ಜನ್ಯಗಳು ನಡೆಯುವುದಿಲ್ಲ. ಶತ್ರುಗಳು ಯುದ್ಧ ಸಾರಿದಾಗ ಅವರಿಗೆ(ಸ) ತಮ್ಮ ರಕ್ಷಣೆ ಮಾಡಿಕೊಳ್ಳಲು ಯುದ್ಧ ಮಾಡುವ ಆಜ್ಞೆಯಾಯಿತು.

ಈ ಆಜ್ಞೆ ಕೇವಲ ಇಸ್ಲಾಂ ಧರ್ಮವನ್ನು ರಕ್ಷಿಸಲು ಆಗಿರಲಿಲ್ಲ. ಅಥವಾ ಕೇವಲ ಮುಸ್ಲಿಮರನ್ನು ರಕ್ಷಿಸಲು ಆಗಿರಲಿಲ್ಲ. ಬದಲು ಎಲ್ಲ ಧರ್ಮಗಳ ಆರಾಧನಾ ಸ್ಥಳಗಳನ್ನು, ಮಸೀದಿಗಳು, ಚರ್ಚ್‌ಗಳು, Synagogue ಗಳು ರಕ್ಷಣೆಗೋಸ್ಕರ ಮತ್ತು ಧಾರ್ಮಿಕ ಸ್ವಾತಂತ್ರ್ಯದ ಉಳುವಿಗಾಗಿ ಆಗಿತ್ತು.

ಹುಝೂರ್ ಹೇಳಿದರು. ನಾವು ಧಾರ್ಮಿಕ ಸಮಾನತೆಗಾಗಿ ಅದರ ಸ್ಥಾಪನೆಗಾಗಿ ಯಾವಾಗಲೂ ಪ್ರಯತ್ನಿಸುತ್ತಿರುತ್ತೇವೆ. ಲಂಡನ್‌ನಲ್ಲಿ ಒಂದು ಧಾರ್ಮಿಕ ಸಮ್ಮೇಳನ ಏರ್ಪಡಿಸಲಾಗಿತ್ತು.

God in 21st Century ಅದರ ಶೀರ್ಷಿಕೆಯಾಗಿತ್ತು. ಅದರಲ್ಲಿ ಕ್ರೈಸ್ತರು, ಯಹೂದ್ಯರು, ಹಿಂದೂಗಳು, ದರೋಜಿ ಮತ್ತು ಇತರ ಧರ್ಮಗಳ ನೇತಾರರು ಬಂದಿದ್ದರು. ಎಲ್ಲರೂ ತಮ್ಮ ತಮ್ಮ ಧರ್ಮಗಳ ವಿಚಾರ ಕುರಿತು ಮಾತನಾಡಿದರು. ಆ ಸಮ್ಮೇಳನದ ಉದ್ದೇಶವು ನಾವೆಲ್ಲ ಸಹೋದರತೆ, ಸಮಾನತೆ ಮತ್ತು ಶಾಂತಿಯ ಕುರಿತು ಮಾತನಾಡುವುದು ಹಾಗೂ ಶಾಂತಿ ಸ್ಥಾಪನೆಯ ಉದ್ದೇಶ ಹೊಂದಿತ್ತು.

ಪತ್ರಕರ್ತನು ಒಂದು ಪ್ರಶ್ನೆ ಕೇಳಿದನು. ಇಲ್ಲಿ ನಮ್ಮ ಖುತುಬ ಜುಮಅ್ ಜರ್ಮನ್ ಭಾಷೆಯಲ್ಲು ಆಗುತ್ತದೆ. ಯಾವ ಕಾರಣದಿಂದ?

ಈ ಪ್ರಶ್ನೆಯ ಉತ್ತರವಾಗಿ ಹುಝೂರ್ ಹೇಳಿದರು. ಇಲ್ಲಿ ಕೇವಲ ಜರ್ಮನಿಯ ಮಾತಲ್ಲ. ಇಡೀ ಲೋಕದಲ್ಲಿ ಅಲ್ಲಿರುವ ಸ್ಥಳೀಯ ಭಾಷೆಯಲಿಲ ಆಗುತ್ತದೆ. ಅದರಿಂದ ಸ್ಥಳೀಯ ಜನರು ತಿಳಿಯುವಂತಾಗುತ್ತದೆ. ಇಂಡೋನೇಷಿಯಾದಲ್ಲಿ ಇಂಡೋನೇಷಿಯನ್ ಭಾಷೆಯಲ್ಲಿ ಆಗುತ್ತದೆ. ಪಾಕಿಸ್ತಾನದಲ್ಲಿ ಉರ್ದು ಭಾಷೆಯಲ್ಲಿ ಆಗುತ್ತದೆ ಮತ್ತು ಯು.ಕೆಯಲ್ಲಿ ಜಮಾಅತ್‌ಗಳಲ್ಲಿ ಇಂಗ್ಲೀಷ್ ಭಾಷೆಯಲ್ಲಿ ಆಗುತ್ತದೆ. ಹುಝೂರ್ ಹೇಳಿದರು. ನಾನು ಖುತುಬ ಜುಮಅ ಉರ್ದು ಭಾಷೆಯಲ್ಲಿ ಹೇಳುತ್ತೇನೆ. 8 ಭಾಷೆಗಳಲ್ಲಿ ಅದರ ನೇರ ಅನುವಾದವಾಗುತ್ತದೆ. ಇಸ್ಲಾಮಿ ಶಿಕ್ಷಣದ ಪ್ರಕಾರ ಕೇವಲ ಯಾವುದೇ ಒಂದು ಭಾಷೆಯಲ್ಲಿ ಖುತುಬ ನೀಡುವಂತಹ ಆಜ್ಞೆಯಿಲ್ಲ.

ಈ ಸಂದರ್ಶನದ ನಂತರ ಹುಝೂರ್ ಹುಝೂರ್ ವೇದಿಕೆಯಿಂದ ಕೆಳಗೆ ಬರುತ್ತಲೇ ಓರ್ವ ಬೋಸ್ನಿಯನ್ ಮಹಿಳೆ ಅವಳು ಈ ಸಮಾರಂಭದಲ್ಲಿ ಭಾಗವಹಿಸಿದಳು. ಹುಝೂರರ ಸಮೀಪಕ್ಕೆ ಬಂದಳು. ಅವಳ ಕಣ್ಣುಗಳಿಂದ ಆಶ್ರು ಸುರಿಯಿತು. ಹೇಳಿದಳು. ಹುಝೂರ್ ನಾನು ನಿಮ್ಮನ್ನು ಸ್ವಪ್ನದಲ್ಲಿ ಕಂಡಿರುತ್ತೇನೆ. ನಾನು ನಿಮ್ಮ ಮುಖ ಆಕಾಶದಿಂದ ಇಳಿಯುತ್ತಿದ್ದನು. ಸ್ವಪ್ನದಲ್ಲಿ ಕಂಡಿದ್ದೇನೆ. ನಿಮ್ಮ ಮುಖ ಬಹು ಸುಂದರವಾಗಿತ್ತು. ತುಂಬ ಪ್ರಕಾಶಮಯವಾಗಿತ್ತು. ಬಿಳಿ ಉದ್ದವಾದ ಗಡ್ಡವಿತ್ತು. ಮತ್ತು ಶಿರದ ಮೇಲೆ ಬಿಳಿ ಪಗಡವಿತ್ತು. ಆ ಮಹಿಳೆ ಸ್ವಪ್ನದಲ್ಲಿಯೇ ಅಳಲು ಪ್ರಾರಂಭಿಸಿದರು. ಮತ್ತು ನಿರಂತರವಾಗಿ ಅಳುತ್ತಿದ್ದಳು.

ಈ ಸ್ವಪ್ನ ಆ ಮಹಿಳೆಯು ಎರಡು ವರ್ಷ ಹಿಂದೆ ಕಂಡಿದ್ದಳು. ಆದರೆ ಇಂದು ಆ ದೃಶ್ಯ ಮನದಟ್ಟಾಗಿತ್ತು. ಆ ಮಹಿಳೆ ಹುಝೂರರ ಮುಂದೆ ನಿಂತುಕೊಂಡಿದ್ದಳು ಮತ್ತು ನಿರಂತರವಾಗಿ ಅಳುತ್ತಾ ಹೇಳುತ್ತಿದ್ದಳು. ನಾನು ನಿಮ್ಮ ಮುಂದೆ ನಿಂತಿದ್ದೇನೆ ಎಂದು ನಂಬಲಾಗುತ್ತಿಲ್ಲ.

ಅವಳು ತನ್ನ ಇನ್ನೊಂದು ಸ್ವಪ್ನ ಅದು 12 ವರ್ಷ ಹಿಂದೆ ಕಂಡಿದ್ದು. ಒಂದು ಬಿಳಿ ಬಣ್ಣದ ಕುದುರೆ ಇಳಿಯುತ್ತಿದ್ದುದನ್ನು ನೋಡಿದೆ. ಆ ಕುದುರೆಯು ನನಗೆ ಒಂದು ಸಣ್ಣ ಬಿಳಿ ಬಣ್ಣದ ಕುದುರೆ ಕೊಟ್ಟಿತ್ತು. ಅದರ ಜೊತೆಯಲ್ಲಿಯೇ ಅವಳಿಗೆ ಧ್ವನಿ ಕೇಳಿಸಿತು. ಇದರ ರಕ್ಷಣೆ ಮಾಡಬೇಕು. ಇದು ನಿನಗೆ ಅಮಾನತ್ತು ಆಗಿರುತ್ತದೆ.

ಆ ಮಹಿಳೆಯು ಈ ಸ್ವಪ್ನ ವಿವರಿಸಿ 'ನಿನಗೆ ಅಮಾನತ್ತು ಆಗಿರುತ್ತದೆ' ಎಂಬುದರ ತಾತ್ಪರ್ಯ (ತಾಬೀರ್) ತಿಳಿಯಬಯಸಿದಳು. ಆಗ ಹುಝೂರ್ ಹೇಳಿದರು. ಇದರ ಒಂದು ಅರ್ಥ ಹೀಗೆ ಆಗಬಹುದು. ಪುರಾತನ ಕಾಲದಲ್ಲಿ ಕುದುರೆಗಳನ್ನು ರಕ್ಷಣೆಗೋಸ್ಕರ ಮತ್ತು ಸವಾರಿಯ ಸಲುವಾಗಿ ಬಳಕೆ ಮಾಡುತ್ತಿದ್ದರು. ವಿಶೇಷವಾಗಿ ಯುದ್ಧಗಳಲ್ಲಿ ಬಳಸುತ್ತಿದ್ದರು ಆದರೆ ಇಂದು ಖಡ್ಗದಿಂದ ಜಿಹಾದ್ ಮಾಡುವ ಕಾಲವಲ್ಲ ಬದಲು ಲೇಖನಿಯ ಕಾಲವಾಗಿದೆ. ಆದುದರಿಂದ ನಿಮ್ಮ ಗಮನ ಲೇಖನಿಯೆಡೆ ಸೆಳೆಯಲಾಗಿದೆ. ಅಂದರೆ ಹೆಚ್ಚೆಚ್ಚು ಜ್ಞಾನಾರ್ಜನೆ ಮಾಡಬೇಕು ಮತ್ತು ಸತ್ಯವನ್ನು ಗುರುತಿಸುವ ಪ್ರಯತ್ನ ಮಾಡಬೇಕು. ಹುಝೂರ್ ಹೇಳಿದರು. ಈ ಅರ್ಥ ಆಗಬಹುದಾಗಿದೆ.

ಕೊನೆಯಲ್ಲಿ ಫಾತಿಮಾ ಸಾಹಿಬ ಮತ್ತೆ ಹೇಳಿದರು. ನಾನು ಹುಝೂರ್(ಅಬಿಅ) ರನ್ನು ಅಪ್ಪಟ ಇದೇ ರೂಪದಲ್ಲಿ ಸ್ವಪ್ನದಲ್ಲಿ ಕಂಡಿರುತ್ತೇನೆ. ಆಗ ಹುಝೂರ್ ಹೇಳಿದರು. ಅಲ್ಲಾಹನು ನಿಮಗೆ ಅಹ್ಮದಿಯತ್ ಸ್ವೀಕರಿಸುವ ಭಾಗ್ಯ ದಯಪಾಲಿಸಲಿ. ಮತ್ತು ನಿಮಗೆ ಈ ಸ್ವಪ್ನ ಶುಭತರುವಂತಾಗಲಿ.

ಅನಂತರ ಹುಝೂರ್ ಮಾರ್ಕಿಯಿಂದ ಹೊರಬಂದಾಗ ಎಲ್ಲ ಮಕ್ಕಳು ಒಂದೇ ಸಾಲಿನಲ್ಲಿ ನಿಂತುಕೊಂಡಿದ್ದರು. ಹುಝೂರ್ ಪ್ರೀತಿಯಿಂದ ಆ ಮಕ್ಕಳಿಗೆ ಚಾಕ್ಲೇಟ್‌ಗಳನ್ನು ನೀಡಿದರು.

ಅನಂತರ ಸ್ಥಳೀಯ ಮಜ್ಲಿಸ್ ಆಮಿಲ, ವಖಾರೆ ಅಮಲ್‌ನಲ್ಲಿ ಭಾಗವಹಿಸಿದ ಜನರು ಮತ್ತು ಜಾಯಿದಾದ್ ವಿಭಾಗದವರು ಹುಝೂರರ ಜೊತೆ ಭಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು.

ಈ ಸಂದರ್ಭದಲ್ಲಿ ಹುಝೂರ್ ಮಸೀದಿಯ ಒಳಗಿನ ಮೇಲಿನ ಗುಂಬದದ ಬಗ್ಗೆ ಸಲಹೆ ನೀಡಿದರು. ಯಾವ ರೀತಿ ನೀವು ಗುಂಬಜಿನ ಭಾರಕ್ಕನುಗುಣವಾಗಿ ಮೊಳೆಗೆಯನ್ನು ದೃಢಗೊಳಿಸಬಹುದು.

ಅನಂತರ ಹುಝೂರ್ ಇಲ್ಲಿಂದ ಪ್ರಯಾಣಿಸುವ ಮೊದಲು ಹನಾಉ ಜಮಾಅತ್ತಿನ ಅಧ್ಯಕ್ಷರಿಗೆ ಮತ್ತು ತ್ರಿಕೋಣ ಮಳಿಗಡ ಇದೆ. ಈ ಮಳಿಗೆಯ ಮುಂದಿನ ಭಾಗದ ಮೇಲೆ ಒಂದು ಸಣ್ಣದಾದ ಗೋಪುರವನ್ನು ನಿರ್ಮಿಸಿರಿ. ಹುಝೂರ್ ವಿಧಿ ಬದ್ಧವಾಗಿ ಅದರ ಚಿತ್ರ ಬಿಡಿಸಿ ತೋರಿಸಿದರು.

**ಅತಿಥಿಗಳ ಅನಿಸಿಕೆಗಳು**

ಇಂದಿನ ಈ ಸಮಾರಂಭದಲ್ಲಿ ಭಾಗವಹಿಸಿದ ಹಲವು ಅತಿಥಿಗಳು ತಮ್ಮ ಅನಿಸಿಕೆಗಳನ್ನು ಹಾರ್ಧಿಕ ಭಾವನೆಗಳನ್ನು ವ್ಯಕ್ತ ಪಡಿಸಿದರು. ಹಲವು ಅತಿಥಿಗಳು ಈ ಮಾತನ್ನು ಸ್ಪಷ್ಟಪಡಿಸಿದರು. ಹುಝೂರ್ ಸಂಬೋಧನೆಯು ನಮ್ಮ ಹೃದಯಗಳ ಮೇಲೆ ಆಳವಾದ ಪ್ರಭಾವ ಬೀರಿದೆ.

ಓರ್ವ ಮಹಿಳೆ SCHNDLER ಸಾಹಿಬ ತಮ್ಮ ಭಾವನೆಗಳನ್ನು ಹೀಗೆ ವ್ಯಕ್ತ ಪಡಿಸಿದರು. ಇಂದು ಖಲೀಫತುಲ್ ಮಸೀಹ್ ಅವರ ಸಂಬೋಧನೆಯ ಪ್ರತಿ ಪದವು ವಾಸ್ತವಧಾರಿತವಾಗಿತ್ತು. ಖಲೀಫತುಕ್ ಮಸೀಹ್‌ರವರ ಸ್ವಭಾದವ ಸಮಾಧಾನದ ರೀತಿಯದ್ದಾಗಿತ್ತು. ಅತ್ಯಂತ ಪ್ರೀತಿಸುವವರು ಮತ್ತು ಪ್ರಭಾವ ಬೀರುವ ವ್ಯಕ್ತಿತ್ವವಾಗಿದೆ. ಖಲೀಫರು ಇಂದು ತಮ್ಮ ಸಂಬೋಧನೆಯಲ್ಲಿ ಇಸ್ಲಾಮಿನ ಸುಂದರವಾದ ಶಿಕ್ಷಣವನ್ನು ತಿಳಿಸಿದರು. ನಾನು ನನ್ನ ಕಣ್ಣುಗಳನ್ನು ಮುಚ್ಚಿಕೊಂಡು ಖಲೀಫ'ರ ಮಾತುಗಳನ್ನುಆಲಿಸುತ್ತಿದ್ದೇನೆ. ಲೋಕದ ಓರ್ವ ಶಾಂತಿಪೂರ್ಣ ಮನುಷ್ಯನು ಪ್ರೀತಿಯ ಪಾಠ ಮಾಡುತ್ತಿದ್ದಂತೆ ಭಾಸವಾಗುತ್ತಿತ್ತು. ಇಂತಹ ಶಿಕ್ಷಣವು ನನಗೆ ಎಂದಿಗೂ ಚರ್ಚಿನಲ್ಲಿಯು ಸಹ ಸಿಗಲಿಲ್ಲ.

ಓರ್ವ ಜರ್ಮನಿಯ ಮಹಿಳೆ MRRENE PRUSSIG ಅವರು ತಮ್ಮ ಅನಿಸಿಕೆಗಳ್ನು ಹೀಗೆ ಹಂಚಿಕೊಂಡರು. "ನೆರೆಹೊರೆಯವರನ್ನು ಪ್ರೀತಿಸಿರಿ ಎಂಬುದು ನಮ್ಮ ಶಿಕ್ಷಣವಾಗಿದೆ ಆದರೆ ನಮ್ಮ ಬಳಿ ಕೇವಲ ಶಿಕ್ಷಣ ಉಳಿದುಕೊಂಡಿದೆ. ಇಂದು ಹುಝೂರ್ ಅನ್ವರ್(ಅತಬಿಅ) ಅವರ ಭಾಷಣವನ್ನು ಆಲಿಸಿ ಆ ಶಿಕ್ಷಣಗಳು ಮತ್ತೆ ಜೀವಂತಿಕೆ ಪಡೆದ ಅನುಭವವಾಯಿತು. ನನ್ನ ವಿಚಾರದಲ್ಲಿ ನಾವು ಕ್ರೈಸ್ತರು ನಿಮ್ಮ ಖಲೀಫರ ಇಂದಿನ ಭಾಷಣದಿಂದ ಬಹಳಷ್ಟು ಕಲಿಯಬಹುದಾಗಿದೆ ಅನಿಸುತ್ತದೆ. ಅವರು ಪ್ರೀತಿ ಮತ್ತು ಸ್ನೇಹದ ಭಾವನೆ ಮಾಡುತ್ತಿರುವ ಪ್ರಚಾರವು ನಮ್ಮಲ್ಲಿ ಸಮಾನತೆ ಉಂಟು ಮಾಡುವಂತಹದ್ದಾಗಿದೆ.

ಓರ್ವ ಜರ್ಮನ್ ಮಹಿಳಾ ಅತಿಥಿ KATHEJA ಸಾಹಿಬಾ ತನ್ನ ಅನಿಸಿಕೆಗಳನ್ನು ಹೀಗೆ ಹೊರಹಾಕಿದಳು. "ನಮಗೆ ಓರ್ವ ಆಧ್ಯಾತ್ಮಿಕ ಪಿತನಿದ್ದಾರೆ, ಅವರು ನಮ್ಮೊಡನೆ ಮಾತನಾಡುತ್ತಿದ್ದಾರೆ ಎಂದು ಭಾಸವಾಗುತ್ತಿತ್ತು.. ನಾವೆಲ್ಲ ಅವರ ಮಕ್ಕಳಾಗಿದ್ದೇವೆ. ಅವರ ಮುಂದೆ ಎಲ್ಲರೂ ಸಮಾನರು. ಯಾರು ಕಿರಿಯರು ಇಲ್ಲ ಹಿರಿಯರೂ ಇಲ್ಲ.

ನಿಸ್ಸಂಶಯವಾಗಿ ನಾನು ಕ್ರೈಸ್ತ ಮತ್ತು ಕ್ರೈಸ್ತ ಧರ್ಮದಂತೆ ನಡೆದುಕೊಳ್ಳುತ್ತೇನೆ. ಆದರೆ ಇಂದು ಖಲೀಫರ ಸಂಬೋಧನೆ ನಮ್ಮ ಮನಮುಟ್ಟುವಂತಾಗಿದೆ. ನಾವು ಅವರ ಮಾತುಗಳಿಂದ ಬಹಳಷ್ಟು ಕಲಿತಿದ್ದೇವೆ. ಅವರು ಹೇಳಿದ ಮಾತುಗಳು ಅದ್ಭುತವಾಗಿದ್ದವು. ನನಗೆ ಒಂದು ಮಾತು ಬಹು ಪ್ರಿಯವಾಗಿ ಕಂಡಿದೆ. ನೀವು ಆರಾಧನೆಗೋಸ್ಕರ ಹೋಗುತ್ತಿದ್ದರೂ ಯಾರಾದರೂ ಸಹಾಯಕ್ಕೆ ಕರೆದರೆ ಅವರಿಗೆ ಸಹಕಾರ ನೀಡಿರಿ.

**(ಮುಂದುವರಿಯುವುದು)**

**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2020-22 Vol No.1, Thursday, 01 October 2020, Issue No. 38

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 37ರ ವರದಿಯ ಉಳಿದ ಭಾಗ)**

ಹುಝೂರ್ ಹೇಳಿದರು. ಪವಿತ್ರ ಖುರ್‌ಆನ್ ಶಾಂತಿ ಸ್ಥಾಪನೆ ಮಾಡಲು ನಮಗೆ ಈ ಶಿಕ್ಷಣ ನೀಡುತ್ತದೆ. ನೀವು ಎಲ್ಲ ಧರ್ಮಗಳ ಆರಾಧನೆ ಮಾಡುವವರನ್ನು ರಕ್ಷಿಸಬೇಕು. ಪವಿತ್ರ ಖುರ್‌ಆನ್‌ನಲ್ಲಿ ಈ ಆದೇಶ ಬರುತ್ತದೆ. ನೀವು ಈ ಗಲಭೆ ಕೋರರನ್ನು, ಧರ್ಮವನ್ನು ನಾಶಗೊಳಿಸ ಬಯಸುವವರನ್ನು ತಡೆಯದಿದ್ದರೆ ಅವರು ಯಾವ ಇಗರ್ಜಿಯನ್ನು ಉಳಿಸುವುದಿಲ್ಲ. ಯಾವ Synagogue ಗಳನ್ನು ಉಳಿಸುವುದಿಲ್ಲ. ಯಾವ ಆರಾಧನಾ ಸ್ಥಳವನ್ನು ಉಳಿಸುವುದಿಲ್ಲ. ಮಸೀದಿಗಳನ್ನು ಉಳಿಸುವುದಿಲ್ಲ. ತಾತ್ಪರ್ಯವೇನೆಂದರೆ ಇಲ್ಲಿ ಬಂದು ಆರಾಧನೆ ಮಾಡುವವರ ಮನಸ್ಸಿನಲ್ಲಿ ವಿಷ ಬೀಜ ಬಿತ್ತುವರು. ಆ ಕಾರಣದಿಂದ ಇಲ್ಲಿ ಮಸೀದಿಗಳಲ್ಲಿ ಅಥವಾ ಆರಾಧನಾ ಸ್ಥಳಗಳಲ್ಲಿ ಪ್ರೀತಿ, ಸ್ನೇಹದ ಶಿಕ್ಷಣ ನೀಡುವ ಬದಲು ಗಲಭೆ ದಂಗೆಯ ಶಿಕ್ಷಣ ನೀಡಲಾಗುವುದು. ಇನ್ನೊಂದು ಮಾತೇನೆಂದರೆ ಈ ಜನರು ಲೋಕದಲ್ಲಿ ಯಾವ ಸ್ಥಳದಲ್ಲಿಯೂ ಪ್ರೀತಿ ಶಾಂತಿ ಬಯಸುವುದಿಲ್ಲ. ಅದಾಗ್ಯೂ ಎಲ್ಲ ಧಾರ್ಮಿಕ ಆರಾಧನೆ ಸ್ಥಳಗಳು ಪ್ರೀತಿ ವಿಶ್ವಾಸದ ಶಿಕ್ಷಣ ನೀಡಲು ಸ್ಥಾಪಿಸಲಾಗಿದೆ. ಆದುದರಿಂದ ಪವಿತ್ರ ಖುರ್‌ಆನ್ ನಮಗೆ ಉಪದೇಶ ನೀಡುತ್ತದೆ. ನೀವು ಕೇವಲ ಮಸೀದಿಯ ರಕ್ಷಣೆ ಮಾಡಬೇಡಿರಿ. ಬದಲು ಎಲ್ಲ ಧರ್ಮಗಳವರ ಆರಾಧನಾ ಸ್ಥಳಗಳನ್ನು ಸಂರಕ್ಷಿಸಿರಿ. ಇದೇ ಆ ಸುಂದರವಾದ ಶಿಕ್ಷಣವಾಗಿದೆ. ಅದರಂತೆ ನಾವು ನಡೆದುಕೊಳ್ಳುತ್ತೇವೆ. ಇದೇ ಆ ನಿಜವಾದ ಮಂತ್ರವಾಗಿದೆ ಅದು ಪವಿತ್ರ ಖುರ್‌ಆನ್ ನಮಗೆ ನೀಡಿರುತ್ತದೆ. ಅದರಿಂದ ಎಲ್ಲ ಧರ್ಮಗಳ ನಡುವೆ ಪ್ರೀತಿ ಉಂಟಾಗುತ್ತದೆ ಪರಸ್ಪರ ಸಂಬಂಧಗಳು ಬೆಳೆಯುತ್ತವೆ ಮತ್ತು ಒಬ್ಬರಿಗೆ ಮತ್ತೊಬ್ಬರೊಡನೆ ಪ್ರೀತಿಯ ಭಾವನೆಗಳು ಉಂಟಾಗುತ್ತಿವೆ. ಅಷ್ಟೇ ಅಲ್ಲ ಪವಿತ್ರ ಖುರ್‌ಆನ್ ನಮಗೆ ಈ ಉಪದೇಶವು ನೀಡುತ್ತದೆ. ನೀವು ವಿಗ್ರಹಗಳನ್ನು ಪೂಜಿಸುವವರನ್ನು ಸಹ ಕೆಟ್ಟದಾಗಿ ಕಾಣಬೇಡಿರಿ. ಏಕೆಂದರೆ ಅದರ ಪ್ರತಿಯಾಗಿ ಅವರು ನಿಮ್ಮ ಅಲ್ಲಾಹನನ್ನು ಕೆಟ್ಟದಾಗಿ ಕಾಣುವರು. ಮತ್ತೆ ಅದರ ಪರಿಣಾಮವಾಗಿ ಲೋಕದಲ್ಲಿ ಹಿಂಸೆ ಉಂಟಾಗುವುದು. ಇದು ಯಾವ ನೆಲೆಯಲ್ಲೂ ಅಲ್ಲಾಹನು ಬಯಸುವುದಿಲ್ಲ. ಒಬ್ಬ ನಿಜವಾದ ಮುಸಲ್ಮಾನನು ಆ ಗಲಭೆಯಲ್ಲಿ ಸೇರುವುದು. ಇಂತಹ ಗಲಭೆ ಉಂಟು ಮಾಡುವವರು, ಅವರು ಮುಸ್ಲಿಮರೇ ಆಗಿರಲಿ ಅವರು ಇಸ್ಲಾಮಿನ ಶಿಕ್ಷಣದಲ್ಲಿಲ್ಲ, ಅವರು ಇಸ್ಲಾವ್ ಧರ್ಮವನ್ನು ಕೆಡಿಸುವವರಾಗಿದ್ದಾರೆ. ಇಸ್ಲಾಮ್ ಧರ್ಮ ಪ್ರೀತಿ ಸ್ನೇಹದ ಶಿಕ್ಷಣ ನೀಡುತ್ತದೆ. ಎಲ್ಲಿಯಾದರೂ ಕಠಿಣ ಆದೇಶಗಳಿದ್ದರೆ ಅದು ಶಾಂತಿ ಮತ್ತು ದಯೆ ಸ್ಥಾಪಿಸಲು ಆಗಿರುತ್ತದೆಯೇ ಹೊರತು ತಪ್ಪು ರೀತಿಯ ಸ್ವಾರ್ಥಕ್ಕಾಗಿ, ಸ್ವಹಿತಕ್ಕಾಗಿ ಆಗಿರುವುದಿಲ್ಲ. ಅದೇ ರೀತಿ ಒಬ್ಬ ನಿಜವಾದ ಮುಸಲ್ಮಾನನ ಕರ್ತವ್ಯವಾಗಿದೆ. ಲೋಕದ ಎಲ್ಲ ಧರ್ಮಗಳ ಸ್ಥಾಪನೆಯನ್ನು ಗೌರವಿಸಬೇಕು.

ಧರ್ಮಗಳ ಪ್ರವಾದಿಗಳನ್ನು ಗೌರವಿಸಬೇಕು. ನಾವು ಎಲ್ಲ ಪ್ರವಾದಿಗಳನ್ನು ನಂಬುತ್ತೇವೆ. ಮತ್ತು ಎಲ್ಲರಿಗೂ ಗೌರವ ಆದರ ನೀಡುತ್ತೇವೆ. ಅದಕ್ಕಾಗಿಯೇ ಧರ್ಮದ ಸ್ಥಾಪಕರನ್ನು ಗೌರವಿಸಿರಿ, ಆದರಿಸಿರಿ. ಅದರಿಂದ ಲೋಕದಲ್ಲಿ ಶಾಂತಿ, ಪ್ರೀತಿ ಉಂಟಾಗುವುದು. ಮುಸಲ್ಮಾನರ ಭಾವನೆಗಳಿಗೆ ಧಕ್ಕೆ ಬರುವುದಿಲ್ಲ. ಹೀಗೆ ಪರಸ್ಪರ ಪ್ರೀತಿ ಸ್ನೇಹದ ವಾತಾವರಣ ನಿರ್ಮಾಣಗೊಂಡು ಒಬ್ಬರು ಮತ್ತೊಬ್ಬರ ಪ್ರೀತಿ ಗೆಲ್ಲಬಹುದು.

ಹುಝೂರ್ ಹೇಳಿದರು. ಅಹ್ಮದಿಯಾ ಜಮಾಅತಿನ ಸ್ಥಾಪಕರು ನಮಗೆ ತಿಳಿಸಿದರು. ನಿಶ್ಚಯವಾಗಿಯೂ ಯಾರನ್ನು ಅಲ್ಲಾಹನು ಮಾರ್ಗದರ್ಶಕನನ್ನಾಗಿ ಕಳುಹಿಸಿರುವನೋ, ಯಾರು ಪ್ರವಾದಿಗಳಾಗಿ ಬಂದಿರುವರು, ಯಾರು ಧರ್ಮಗಳನ್ನು ಸ್ಥಾಪಿಸಿದ್ದಾರೋ ಅವರು ಸತ್ಯವಂತರು ಮತ್ತು ಸಾತ್ವಿಕ ಪುರುಷರಾಗಿದ್ದಾರೆ. ಪವಿತ್ರ ಜನರಾಗಿದ್ದಾರೆ. ಶಾಂತಿ ಮತ್ತು ಪ್ರೀತಿ ಬಯಸುವವರಾಗಿದ್ದರೆ. ಆ ಕಾರಣದಿಂದಲೇ ಕೋಟ್ಯಾನುಗಟ್ಟಲೆ ಜನರು ಅವರನ್ನು ನಂಬಿದ್ದಾರೆ ಮತ್ತು ಅನುಸರಿಸಿದ್ದಾರೆ. ಆದುದರಿಂದ ಈ ಜನರು ಲಕ್ಷ ಕೋಟಿಗಟ್ಟಲೆ ಜನರ ಸ್ಥಿತಿಗಳನ್ನು ಪರಿವರ್ತಿಸಿದರು. ಅವರ ಸಂಬಂಧ ಸೃಷ್ಟಿಕರ್ತನ ನಡುವೆ ಜೋಡಿಸಿದರು. ಪರಸ್ಪರ ಪ್ರೀತಿ ಉಂಟು ಮಾಡಲು ಪ್ರಯತ್ನಿಸಿದರು. ಅಂತಹ ಜನರನ್ನು ಗೌರವಿಸುವುದು ನಮ್ಮ ಕರ್ತವ್ಯವಾಗಿದೆ.

ಇದಾಗಿದೆ ಈ ಮಸೀದಿ ನಿರ್ಮಾಣದ ಉದ್ದೇಶ. ಅಲ್ಲದೇ ಅಹ್ಮದಿಯಾ ಜಮಾಅತ್ ಲೋಕದಲ್ಲೆಲ್ಲ ಅದೇ ಉದ್ದೇಶ ಹೊಂದಿ ಮಸೀದಿಗಳನ್ನು ನಿರ್ಮಿಸುತ್ತಿದೆ. ನಾನು ಹೇಳಿದಂತೆ ಅಲ್ಲಾಹನ ಅನುಗ್ರಹದಿಂದ ಲೋಕದ 206 ದೇಶಗಳಲಿ ಅಹ್ಮದಿಯಾ ಜಮಾಅತ್ ಸ್ಥಾಪನೆಗೊಂಡಿದೆ. ಮಸೀದಿಗಳು ವಿವಿಧ ನಗರಗಳಲ್ಲಿ ನಿರ್ಮಿಸಲಾಗುತ್ತಿದೆ. ವಿವಿಧ ದೇಶಗಳಲ್ಲಿ ನಿರ್ಮಾಣಗೊಳ್ಳುತ್ತಿವೆ. ಹಳ್ಳಿಗಳಲ್ಲಿ ಪಟ್ಟಣಗಳಲ್ಲಿ ನಿರ್ಮಾಣಗೊಳ್ಳುತ್ತಿವೆ. ಎಲ್ಲ ಕಡೆಯು ಈ ಸುಂದರ ಶಿಕ್ಷಣವನ್ನು ಪ್ರಚಾರ ಮಾಡುತ್ತಿದ್ದೇವೆ. ಈ ಸುಂದರವಾದ ಶಿಕ್ಷಣವು ವಿವಿಧ ದೇಶಗಳಲ್ಲಿ ಕಾಣುವಿರಿ. ಅದೇ ಅಹ್ಮದಿಯಾ ಜಮಾಅತಿನ ಸುಂದರತೆ ಆಗಿದೆ. ಅಹ್ಮದಿಯರು ಎಲ್ಲಿಯೇ ಹೋಗಲಿ ಅದು ಆಫ್ರಿಕಾ ದೇಶಗಳಲ್ಲಾಗಲಿ, ಅಥವಾ ಏಷ್ಯಾ ದೇಶಗಳಲ್ಲಾಗಲಿ ಅಥವಾ ಅಮೇರಿಕಾ ದೇಶಗಳಲ್ಲಾಗಲಿ ಅಥವಾ ಯೂರೋಪಿಯನ್ ದೇಶಗಳಲ್ಲಾಗಲಿ ಅಥವಾ ಆಸ್ಟ್ರೇಲಿಯಾದಲ್ಲಾಗಲಿ ಅಥವಾ ದಕ್ಷಿಣ ಅಮೇರಿಕಾ ಆಗಲಿ. ಎಲ್ಲ ಕಡೆಯು ಅಹ್ಮದಿಯಾ ಜಮಾಅತಿನ ಅದೇ ಸುಂದರತೆ ನೀವು ಕಾಣುವಿರಿ. ಜಮಾಅತ್ ಏಕದೇವನನ್ನು ಗುರುತಿಸುವ ಸಂದೇಶ ನೀಡುತ್ತದೆಯೇ, ಅವರನ್ನು ಆರಾಧಿಸುವ ಸಂದೇಶ ನೀಡುತ್ತಿದೆಯೋ, ಅಲ್ಲಿ ಪರಸ್ಪರ ಪ್ರೀತಿ, ಸ್ನೇಹ ಸೌಹಾರ್ದತೆಯ ವಾತಾವರಣ ನಿರ್ಮಿಸಲು ಒತ್ತು ಕೊಡುತ್ತದೆ.

ಹುಝೂರ್ ಹೇಳಿದರು. ಇವೆಲ್ಲ ಮಾತುಗಳಿಂದ ನಂತರ ಅಹ್ಮದಿಯಾ ಜಮಾಅತಿನ ಸದಸ್ಯರನ್ನು ಸಹ ನಾನು ಹೇಳಬಯಸುತ್ತೇನೆ. ಈ ಮಸೀದಿ ನಿರ್ಮಾಣದ ನಂತರ ಜನರ ದೃಷ್ಟಿ ಮೊದಲಿಗಿಂತಲೂ ಹೆಚ್ಚು ನಮ್ಮ ಮೇಲಿರುವುದು. ಈ ಮಸೀದಿಯ ಎರಡು ಗೋಪುರಗಳನ್ನೇನು ನೀವು ನಿರ್ಮಿಸಿದ್ದೀರಿ. ಅದು ಕೇವಲ ಸುಂದರತೆಗಾಗಿ ಇರದೆ ಪ್ರೀತಿ ಸ್ನೇಹ ಮತ್ತು ಶಾಂತಿಯ ಹಾಗೂ ಏಕದೇವನ ಆರಾಧನೆಯ ಕುರುಹು (Symbol) ಆಗಿರಬೇಕು ಎಂದು. ಈ ಮಸೀದಿಯೊಳಗೆ ಬಂದರೆ ಆ ಯೋಚನೆಯೊಂದಿಗೆ ಬರಬೇಕು. ನಾವು ಆತ್ಮೀಯವಾಗಿ ಅಲ್ಲಾಹನ ಆರಾಧನೆ ಮಾಡಬೇಕಿದೆ. ಅದು ಅವನ ಹಕ್ಕಾಗಿದೆ ಮತ್ತು ಪರಸ್ಪರ ಪ್ರೀತಿ ಸ್ನೇಹದಿಂದ ಇರಬೇಕಾಗಿದೆ. ಪರಸ್ಪರ ಸೌಹಾರ್ದತೆ ಬೆಳೆಸಬೇಕಾಗಿದೆ. ಪರಸ್ಪರ ಒಬ್ಬರು ಮತ್ತೊಬ್ಬರನ್ನು ಅನುಗ್ರಹ ಬಯಸಬೇಕಾಗಿದೆ. ಹಝ್ರತ್ ಮಸೀಹ್ ಮೌಊದ್ (ಅ) ಹೇಳಿದರು. ನೀವು ಮಸೀದಿಗೆ ಬರುವವರಾದರೆ ನಿಮ್ಮ ಉದ್ದೇಶ ಏಕತ್ವ ಸ್ಥಾಪಿಸುವುದಾಗಬೇಕಾಗಿದೆ. ಏಕತ್ವ ಸ್ಥಾಪಿಸಿದಾಗ ಮಾತ್ರ ಏಕದೇವನ ಆರಾಧನೆ ಮಾಡುವವರಾಗುವಿರಿ. ನೀವು ಒಬ್ಬರು ಮತ್ತೊಬ್ಬರೊಡನೆ ಪ್ರಭಾವ ಬೀರುವವರಾದಾಗ ಮಾತ್ರ ಏಕತ್ವ ಸ್ಥಾಪಿಸಬಹುದಾಗಿದೆ. ಕೆಲವರು ಆಧ್ಯಾತ್ಮಿಕ ನೆಲೆಯಲ್ಲಿ ದುರ್ಬಲರಾಗಿರುತ್ತಾರೆ. ಕೆಲವರು ಬಲಿಷ್ಠರಾಗಿರುತ್ತಾರೆ. ಆದರೆ ಒಂದೇ ಸಾಲಿನಲ್ಲಿ ನಿಂತು ನಮಾಝ್ ಮಾಡುವಾಗ ಒಬ್ಬರು ಮತ್ತೊಬ್ಬರನ್ನು ಪ್ರಭಾವ ಬೀರುವವರಾಗುತ್ತಾರೆ. ಆದುದರಿಂದ ಒಬ್ಬರು ಮತ್ತೊಬ್ಬರಿಂದ ಪ್ರಕಾಶ ಪಡೆಯುಬಯಸುವುದಾದರೆ ಆ ಪ್ರಕಾಶದ ಭಾಗವಗಲು ಸ್ವಯಂ ಪ್ರಯತಿಸಬೇಕಾಗುವುದು. ತಮ್ಮ ಸಹೋದರನಿಂದ ಆಧ್ಯಾತ್ಮಿಕ ಶಕ್ತಿ ಪಡೆಯುವ ಮತ್ತು ಇನ್ನೊಬ್ಬನನ್ನು ಕೊಡುವ ಪ್ರಯತ್ನ ಮಾಡಬೇಕಾಗಿದೆ. ಆಗ ಮಾತ್ರ ನೀವು ನಿಜ ಅರ್ಥದಲ್ಲಿ ಅಲ್ಲಾಹನ ಆರಾಧನೆ ಮಾಡುವರು ಮತ್ತು ಅವನ ಹಕ್ಕನ್ನು ನೀಡುವವರಾಗುವಿರಿ. ಮತ್ತು ಅವನ ದಾಸರ ಹಕ್ಕುಗಳನ್ನು ನೀಡುವವರಾಗುವಿರಿ.

ಹುಝೂರ್ ಹೇಳಿದರು. ಅಲ್ಲಾಹನು ಇವೆಲ್ಲ ಉದ್ದೇಶಗಳನ್ನು ಪೂರ್ಣಗೊಳಿಸುವ ಭಾಗ್ಯ ದಯಪಾಲಿಸಲಿ, ನೀವು ನಿಮ್ಮವರ ಹಕ್ಕುಗಳನ್ನು ನೀಡುವವರಾಗಬೇಕು. ತನ್ನ ಅಲ್ಲಾಹನ ಹಕ್ಕುಗಳನ್ನು ನೀಡುವವರಾಗಬೇಕು. ತಮ್ಮ ನೆರೆಹೊರೆಯವರ ಹಕ್ಕುಗಳನ್ನು ನೀಡುವವರಾಗಬೇಕು. ಈ ನಗರದ

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
1800–103–2131

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.